ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

ಗುರುವಾರ, ಜುಲೈ 13, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 60 RNI : 27369/75

janathavani@mac.com
www.janathavani.com
☎ 08192 254736 91642 99999

## ಟೊಮ್ಯಾಟೋ ಪೂರೈಕೆಗೆ ಕೇಂದ್ರದ ಮಧ್ಯ ಪ್ರವೇಶ

### ಆಂಧ್ರ ಪ್ರದೇಶ, ಕರ್ನಾಟಕ ಹಾಗೂ ಮಹಾರಾಷ್ಟ್ರಗಳಿಂದ ಖರೀದಿಸಿ, ಬೆಲೆ ಹೆಚ್ಚಾಗಿರುವ ರಾಜ್ಯಗಳಲ್ಲಿ ವಿತರಣೆ

ನವದೆಹಲಿ, ಜು. 12 – ಟೊಮ್ಯಾಟೋ ಚಿಲ್ಲರೆ ಮಾರಾಟ ಬೆಲೆ ದಾಖಲೆ ಮಟ್ಟಕ್ಕೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಕ್ರಮಕ್ಕೆ ಮುಂದಾಗಿರುವ ಕೇಂದ್ರ ಸರ್ಕಾರ, ಸಹಕಾರಿಗಳಾದ ನೆಫೆಡ್ ಹಾಗೂ ಎನ್.ಸಿ.ಸಿ. ಎಫ್.ಗಳು ಟೊಮ್ಯಾಟೋ ವಿತರಿಸುವಂತೆ ತಿಳಿಸಿದೆ.

ಆಂಧ್ರ ಪ್ರದೇಶ, ಕರ್ನಾಟಕ ಹಾಗೂ ಮಹಾರಾಷ್ಟ್ರಗಳಿಂದ ಟೊಮ್ಯಾಟೋ ಖರೀದಿಸಲಾಗುವುದು. ಬೆಲೆ ಹೆಚ್ಚಾಗಿರುವ ರಾಜ್ಯಗಳ ಗ್ರಾಹಕರಿಗೆ ಜುಲೈ 14ರಿಂದ ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುವುದು ಎಂದು ಕೇಂದ್ರ ಗ್ರಾಹಕರ ವ್ಯವಹಾರಗಳ ಸಚಿವಾಲಯದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ದೇಶದ ಹಲವೆಡೆ ಭಾರೀ ಮಳೆ ಸುರಿಯುತ್ತಿರುವ ಕಾರಣ ಕೆಲ ಭಾಗಗಳಲ್ಲಿ ಟೊಮ್ಯಾಟೋ ಬೆಲೆ ಕೆ.ಜಿ.ಗೆ 200 ರೂ.ಗಳವರೆಗೆ ತಲುಪಿದೆ.



ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಕೃಷಿ ಸಹಕಾರಿ ಮಾರುಕಟ್ಟೆ ಒಕ್ಕೂಟ (ನೆಫೆಡ್) ಹಾಗೂ ರಾಷ್ಟ್ರೀಯ ಸಹಕಾರಿ ಗ್ರಾಹಕರ ಒಕ್ಕೂಟ (ಎನ್.ಸಿ.ಸಿ.ಎಫ್.)ಗಳು ಟೊಮ್ಯಾಟೋ ಖರೀದಿಗೆ ಮುಂದಾಗಿವೆ.

ಕಳೆದ ಒಂದು ತಿಂಗಳಲ್ಲಿ ರಾಷ್ಟ್ರೀಯ ಸರಾಸರಿಗಿಂತ ಟೊಮ್ಯಾಟೋ ಬೆಲೆ ಹೆಚ್ಚಾಗಿರುವ ಪ್ರದೇಶಗಳಲ್ಲಿ ಮಾರಾಟಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸಚಿವಾಲಯ ಹೇಳಿದೆ.

ಅಲ್ಲದೇ, ರಾಜ್ಯವೊಂದರಲ್ಲಿ ಅತಿ ಹೆಚ್ಚು ಟೊಮ್ಯಾಟೋ ಬಳಸುವ ಪ್ರದೇಶಗಳಿಗೆ ಹೆಚ್ಚಿನ ಪೂರೈಕೆಗೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸಚಿವಾಲಯ ತಿಳಿಸಿದೆ.

ಜುಲೈ - ಆಗಸ್ಟ್ ಹಾಗೂ ಅಕ್ಟೋಬರ್ - ನವೆಂಬರ್ ತಿಂಗಳಲ್ಲಿ ಟೊಮ್ಯಾಟೋ ಉತ್ಪಾದನೆ ಸಾಮಾನ್ಯವಾಗಿ ಕಡಿಮೆ ಇರುತ್ತದೆ. ಜುಲೈನಲ್ಲಿ ಮುಂಗಾರು ಹೆಚ್ಚಾಗಿರುವುದರಿಂದ ಈ ಅವಧಿಯಲ್ಲಿ ಟೊಮ್ಯಾಟೋ ಸಾಗಣೆ ಕಷ್ಟ. ಸಾಗಣೆ ವೇಳೆ ನಷ್ಟವೂ ಹೆಚ್ಚಾಗುವುದರಿಂದ ಬೆಲೆ ಏರಿಕೆಯಾಗುತ್ತದೆ ಎಂದು ತಿಳಿಸಲಾಗಿದೆ.

ಪ್ರಸಕ್ತ ಗುಜರಾತ್, ಮಧ್ಯ ಪ್ರದೇಶ ಸೇರಿದಂತೆ ಕೆಲ ರಾಜ್ಯಗಳಿಂದ ಟೊಮ್ಯಾಟೋ ಪೂರೈಕೆಯಾಗುತ್ತಿದೆ. ಮಹಾರಾಷ್ಟ್ರದ ಸತಾರಾ, ನಾರಾಯಣಗಾಂವ್ ಹಾಗೂ ನಾಸಿಕ್‌ಗಳಿಂದ ಈ ತಿಂಗಳ ಅಂತ್ಯದವರೆಗೂ ಟೊಮ್ಯಾಟೋ ಪೂರೈಕೆಯಾಗುವ ನಿರೀಕ್ಷೆ ಇದೆ ಎಂದು ಸಚಿವಾಲಯ ತಿಳಿಸಿದೆ.

ಆಂಧ್ರ ಪ್ರದೇಶದ ಮದನಪಲ್ಲಿ (ಚಿತ್ತೂರು) ಯಿಂದಲೂ ಗಣನೀಯ ಪ್ರಮಾಣದ ಟೊಮ್ಯಾಟೋ ಬರುತ್ತಿದೆ. ಹಿಮಾಚಲ ಪ್ರದೇಶದಿಂದ ದೆಹಲಿಗೆ ಟೊಮ್ಯಾಟೋ ಪೂರೈಕೆಯಾಗುತ್ತಿದೆ. ಕರ್ನಾಟಕದ ಕೋಲಾರದಿಂದಲೂ ಸ್ವಲ್ಪ ಟೊಮ್ಯಾಟೋ ಸಿಗುತ್ತಿದೆ.

ಆಗಸ್ಟ್ ತಿಂಗಳಿನಿಂದ ಮಧ್ಯಪ್ರದೇಶದಿಂದಲೂ ಟೊಮ್ಯಾಟೋ ಪೂರೈಕೆ ಆರಂಭವಾಗುವ ನಿರೀಕ್ಷೆ ಇದೆ. ನಿಕಟ ಭವಿಷ್ಯದಲ್ಲೇ ಟೊಮ್ಯಾಟೋ (3ನೇ ಪುಟಕ್ಕೆ)

## ಕೊಬ್ಬರಿಗೆ ರಾಜ್ಯದಿಂದ 1,250 ರೂ. ಪ್ರೋತ್ಸಾಹ ಧನ : ಸಚಿವ ಪಾಟೀಲ್

ಬೆಂಗಳೂರು, ಜು.12 – ಕೇಂದ್ರ ಸರ್ಕಾರ ನಿಗದಿಪಡಿಸಿರುವ ಬೆಂಬಲ ಬೆಲೆಯಡಿ ಖರೀದಿಸುವ ಪ್ರತೀ ಕ್ವಿಂಟಾಲ್ ಉಂಡೆ ಕೊಬ್ಬರಿಗೆ 1,250 ರೂ. ಪ್ರೋತ್ಸಾಹ ಧನವನ್ನು ರಾಜ್ಯ ಸರ್ಕಾರದಿಂದ ನೀಡಲಾಗುವುದು ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ವಿಧಾನಸಭೆಗೆ ತಿಳಿಸಿದರು.



ಸದನ ಸಮಾವೇಶಗೊಂಡಾಗ ಕೊಬ್ಬರಿ ಬೆಲೆ ಕುಸಿತ ಚರ್ಚೆಗೆ ಸಂಬಂಧಿಸಿದಂತೆ ಉತ್ತರ ನೀಡಿದ ಅವರು, ಇಂದಿನಿಂದ ಕೊಬ್ಬರಿ ಖರೀದಿಗೆ 1,250 ರೂ. ಪ್ರೋತ್ಸಾಹ ಧನ ನೀಡಲಾಗುವುದು. ಈ ಹಿಂದೆ ಬೆಂಬಲ ಬೆಲೆ ಯೋಜನೆಯಡಿ ಕೊಬ್ಬರಿ ಮಾರಾಟ ಮಾಡಿದವರಿಗೆ ಇದು ಅನ್ವಯವಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಕೇಂದ್ರ ಸರ್ಕಾರ ಪ್ರತೀ ಕ್ವಿಂಟಾಲ್ ಉಂಡೆ ಕೊಬ್ಬರಿಗೆ 11,750 ರೂ. ಬೆಂಬಲ ಬೆಲೆ ನಿಗದಿಪಡಿಸಿದೆ. ಇದರ ಜೊತೆಗೆ ರಾಜ್ಯಸರ್ಕಾರ 1,250 ರೂ. ಪ್ರೋತ್ಸಾಹ ಧನ ನೀಡಲಿದೆ. ಕೇಂದ್ರ ಸರ್ಕಾರದ ಏಜೆನ್ಸಿ ನ್ಯಾಫೆಡ್ ಮೂಲಕ ರಾಜ್ಯ ಏಜೆನ್ಸಿ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಮೂಲಕ 45,038 ಮೆಟ್ರಿಕ್ ಟನ್ ಉಂಡೆ ಕೊಬ್ಬರಿ ಖರೀದಿಸಲಾಗಿದೆ ಎಂದು ಹೇಳಿದರು.

2022-23ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ತುಮಕೂರು, ಹಾಸನ, ಚಿಕ್ಕಮಗಳೂರು, ಚಿತ್ರದುರ್ಗ, ಮಂಡ್ಯ, ಮೈಸೂರು, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ 6.43 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 26.06 ಲಕ್ಷ ಮೆಟ್ರಿಕ್ ಟನ್ ತೆಂಗು ಹಾಗೂ ಕೊಬ್ಬರಿ ಉತ್ಪಾದನೆಯಾಗಿದೆ. ಎಂಎಸ್‌ಪಿ ಅಡಿ ಕೊಬ್ಬರಿ ಖರೀದಿಗೆ 37,632 ರೈತರು ನೋಂದಣಿ ಮಾಡಿಕೊಂಡಿದ್ದಾರೆ. ನಿನ್ನೆಯವರೆಗೆ 31,641 ರೈತರು ಪ್ರಯೋಜನ ಪಡೆದಿದ್ದಾರೆ. ಜುಲೈ 26ರವರೆಗೂ ಖರೀದಿ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ ಎಂದರು.

ವಿವಿಧ ಮಾರುಕಟ್ಟೆಗಳಲ್ಲಿ ಪ್ರತಿ ಕ್ವಿಂಟಾಲ್ ಕೊಬ್ಬರಿಗೆ 7,700 ರಿಂದ 8,020 ರೂ.ವರೆಗೆ ಮಾರಾಟವಾಗುತ್ತಿದೆ. ರಾಜ್ಯ ಸರ್ಕಾರವು ಕೊಬ್ಬರಿ ಖರೀದಿ ಪ್ರಮಾಣ ಹೆಚ್ಚಳ ಹಾಗೂ ಖರೀದಿ ಅವಧಿ ವಿಸ್ತರಣೆಗೆ ಕೇಂದ್ರ ಸರ್ಕಾರವನ್ನು ಕೋರಿದೆ. ಕೇಂದ್ರ ಸರ್ಕಾರ ಖರೀದಿ ಪ್ರಮಾಣ ಹೆಚ್ಚಳ ಹಾಗೂ ಅವಧಿ ವಿಸ್ತರಣೆಗೆ ಅನುಮತಿ ನೀಡಿದ ಬಳಿಕ (5ನೇ ಪುಟಕ್ಕೆ)

## ಎಲ್‌ಕೆಜಿಗೆ ಲಕ್ಷ, ಎಂಬಿಎ ಶುಲ್ಕಕ್ಕೆ ಅಲಕ್ಷ್ಯ

### ಗುಣಮಟ್ಟದ ಉನ್ನತ ಶಿಕ್ಷಣಕ್ಕಾಗಿ ಹೆಚ್ಚಿನ ಶುಲ್ಕಕ್ಕೆ ಹಿಂಜರಿಯಬಾರದು: ಸುಭಾಸ್



ದಾವಣಗೆರೆ, ಜು. 12 - ಗುಣಮಟ್ಟದ ಉನ್ನತ ಶಿಕ್ಷಣಕ್ಕೆ ಹೆಚ್ಚಿನ ಹಣ ಪಾವತಿಸುವುದು ಅನಿವಾರ್ಯವಾಗಿದೆ. ಉನ್ನತ ಶಿಕ್ಷಣದ ವೆಚ್ಚವನ್ನು ಸರ್ಕಾರವಷ್ಟೇ ಅಲ್ಲದೇ ಉದ್ಯಮಿಗಳು ಹಾಗೂ ವಿದ್ಯಾರ್ಥಿಗಳು ಭರಿಸಬೇಕಿದೆ ಎಂದು ಬಳ್ಳಾರಿಯ ವಿಜಯನಗರ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಎಂ. ಎಸ್. ಸುಭಾಸ್ ಅಭಿಪ್ರಾಯಪಟ್ಟರು.

ದಾವಣಗೆರೆ ವಿಶ್ವವಿದ್ಯಾನಿಲಯದ ಆಡಳಿತ ಮತ್ತು ನಿರ್ವಹಣಾ ಶಾಸ್ತ್ರ ವಿಭಾಗದ ವತಿಯಿಂದ 'ಆತ್ಮನಿರ್ಭರ ಭಾರತ ಹಾಗೂ ನಿರ್ವಹಣಾ ಶಾಸ್ತ್ರದ ಹೊಸ ದಿಕ್ಕು' ಎಂಬ ವಿಷಯ ಕುರಿತು ಆಯೋಜಿಸಲಾಗಿದ್ದ ರಾಷ್ಟ್ರ ಮಟ್ಟದ ಸಮ್ಮೇಳನದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಹುಂಡೈ ಕಾರಿನ ದರ ವಿಶ್ವದಲ್ಲಿ ಎಲ್ಲೇ ಖರೀದಿಸಿದರೂ ಬಹುತೇಕ ಒಂದೇ ರೀತಿ ಇರುತ್ತದೆ. ಆದರೆ, ಅಮೆರಿಕದಲ್ಲಿ ಎಂ.ಬಿ.ಎ. ಪದವಿ ಪಡೆಯಲು 20 ಸಾವಿರ ಡಾಲರ್ (ಸುಮಾರು 16 ಲಕ್ಷ ರೂ.) ಶುಲ್ಕವಿದೆ. ಭಾರತದಲ್ಲಿ ಮಾತ್ರ ಇದೇ ಪದವಿಗೆ ಲಕ್ಷ ರೂ. ನೀಡಬೇಕು ಎಂದರೂ ಹಿಂದೇಟು ಹಾಕುತ್ತಾರೆ ಎಂದರು.

ಖಾಸಗಿ ಪ್ರಾಥಮಿಕ ಶಾಲೆಗಳಿಗೆ ಲಕ್ಷ ರೂ.ಗಳನ್ನು ಕೊಡುವವರೇ ಉನ್ನತ ಶಿಕ್ಷಣಕ್ಕೆ ಹಣ ಕೊಡಲು ಹಿಂಜರಿಯುತ್ತಿದ್ದಾರೆ. ಉತ್ತಮ ಗುಣಮಟ್ಟದ ಶಿಕ್ಷಣ ಬೇಕಾದರೆ ಉನ್ನತ ಶಿಕ್ಷಣಕ್ಕೆ ಹೆಚ್ಚಿನ ಶುಲ್ಕ ಪಾವತಿ ಅನಿವಾರ್ಯ. ಹೀಗಾಗಿ, ವಿದ್ಯಾರ್ಥಿಗಳು ಶಿಕ್ಷಣಕ್ಕೆ ಸಾಲ ಪಡೆಯಲೂ ಹಿಂಜರಿಯಬಾರದು. ಉದ್ಯಮ ವಲಯ ಸಹ ಉನ್ನತ ಶಿಕ್ಷಣಕ್ಕೆ ನೆರವು ನೀಡಬೇಕು ಎಂದವರು ಹೇಳಿದರು.

ಸರ್ಕಾರಿ ವಿಶ್ವವಿದ್ಯಾನಿಲಯಗಳು ಹಾಗೂ ಸರ್ಕಾರಿ ಕಾಲೇಜುಗಳು ಗುಣಮಟ್ಟದ ಶಿಕ್ಷಣ ನೀಡುವ ದಿಸೆಯಲ್ಲಿ ಸವಾಲುಗಳನ್ನು ಎದುರಿಸುತ್ತಿವೆ. ಕರ್ನಾಟಕ ವಿಶ್ವವಿದ್ಯಾನಿಲಯ ಸೇರಿದಂತೆ, ಹಲವು ವಿ.ವಿ.ಗಳ ಬಜೆಟ್‌ನ ಶೇ.90 ರಷ್ಟು ಹಣ ವೇತನಕ್ಕೇ ಹೋಗುತ್ತಿದೆ. ಹೀಗಿರುವಾಗ ವಿಶ್ವವಿದ್ಯಾನಿಲಯಗಳ ಅಭಿವೃದ್ಧಿ ಹೇಗೆ ಸಾಧ್ಯ? ಎಂದವರು ಪ್ರಶ್ನಿಸಿದರು.

ಈ ನಡುವೆ, ಖಾಸಗಿ ಶಿಕ್ಷಣ ಸಂಸ್ಥೆಗಳ ಉನ್ನತ ಶಿಕ್ಷಣದಲ್ಲಿ ಹೆಚ್ಚಿನ (3ನೇ ಪುಟಕ್ಕೆ)

### ನಂ.1 ಆಗಲು ಸರ್ಕಾರವೇ ಅಡ್ಡಿ

ಮೊದಲ ಹತ್ತು ಶ್ರೇಯಾಂಕ ಪಡೆದ ವಿಶ್ವವಿದ್ಯಾನಿಲಯಗಳಿಗೆ ಹತ್ತು ಸಾವಿರ ಕೋಟಿ ರೂ. ಅನುದಾನ ನೀಡುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ. ಆದರೆ, ಕುಲಪತಿಗಳ ನೇಮಕದಿಂದ ಎಲ್ಲೆಡೆ ಸರ್ಕಾರದ ಮಧ್ಯ ಪ್ರವೇಶ ಇದೆ. ಸರ್ಕಾರದ ಹಸ್ತಕ್ಷೇಪದಿಂದಾಗಿ ವಿಶ್ವವಿದ್ಯಾನಿಲಯಗಳು ಬೆಳೆಯಲು ಸಾಧ್ಯವಾಗುತ್ತಿಲ್ಲ ಎಂದು ವಿಶ್ರಾಂತ ಕುಲಪತಿ ಪ್ರೊ. ಎಂ.ಎಸ್. ಸುಭಾಸ್ ವಿಷಾದಿಸಿದರು.

### ಖಾಸಗೀಕರಣದಿಂದ ಪಡೆದವರು ಶಿಕ್ಷಣಕ್ಕೆ ಕೊಡುತ್ತಿಲ್ಲ

ಐ.ಐ.ಎಂ.ಗಳು ಉದ್ಯಮಿಗಳನ್ನು ಅಧ್ಯಕ್ಷರನ್ನಾಗಿ ಹೊಂದಿರುವುದು ಅವುಗಳ ಬೆಳವಣಿಗೆ ಸಾಕಷ್ಟು ನೆರವಾಗಿದೆ. ಉಳಿದ ಉನ್ನತ ಶಿಕ್ಷಣ ಸಂಸ್ಥೆಗಳಿಗೂ ಉದ್ಯಮಗಳ ನೆರವು ಬೇಕಿದೆ. ಆದರೆ, ಖಾಸಗೀರಣದಿಂದ ನೆರವು ಪಡೆದ ಉದ್ಯಮಗಳು, ಶಿಕ್ಷಣ ವಲಯಕ್ಕೆ ಮಾತ್ರ ಹೆಚ್ಚು ಅನುದಾನ ನೀಡುತ್ತಿಲ್ಲ ಎಂದು ಸುಭಾಸ್ ಹೇಳಿದರು.

## ಚಿನ್ನದ ಆಮದಿನ ಮೇಲೆ ನಿರ್ಬಂಧ

ನವದೆಹಲಿ, ಜು. 12 – ಬಂಗಾರದ ಆಭರಣಗಳೂ ಸೇರಿದಂತೆ ಹಲವಾರು ಬಂಗಾರದ ವಸ್ತುಗಳ ಆಮದಿನ ಮೇಲೆ ಕೇಂದ್ರ ಸರ್ಕಾರ ನಿರ್ಬಂಧ ಹೇರಿದೆ.

ಬಂಗಾರದ ವಸ್ತುಗಳನ್ನು ಆಮದು ಮಾಡಿಕೊಳ್ಳುವವರು ಇನ್ನು ಮುಂದೆ ಸರ್ಕಾರದ ಅನುಮತಿ ಪಡೆಯಬೇಕಿದೆ.

ಅನಗತ್ಯ ವಸ್ತುಗಳ ಆಮದು ತಡೆಯಲು ಈ ಕ್ರಮ ತೆಗೆದುಕೊಳ್ಳಲಾಗಿದೆ.

## ಕೈಗಾರಿಕಾ ಉತ್ಪಾದನೆ ಶೇ.5.2ಕ್ಕೆ ಏರಿಕೆ

ನವದೆಹಲಿ, ಜು. 12 – ಭಾರತದ ಕೈಗಾರಿಕಾ ಉತ್ಪಾದನೆ ಮೇ ತಿಂಗಳಲ್ಲಿ ಶೇ.5.2ರಷ್ಟು ಹೆಚ್ಚಾಗಿದೆ ಎಂದು ಅಧಿಕೃತ ಅಂಕಿ-ಅಂಶಗಳು ತಿಳಿಸಿವೆ.

ಗಣಿ ವಲಯದಲ್ಲಿ ಶೇ.6.4ಕ್ಕೆ ಏರಿಕೆಯಾಗಿದೆ. ವಿದ್ಯುತ್ ವಲಯ ಶೇ.0.9ರ ಬೆಳವಣಿಗೆ ಕಂಡಿದೆ. ಮೇ 2022ರಲ್ಲಿ ಕೈಗಾರಿಕಾ ವಲಯದ ಉತ್ಪಾದನೆ ಶೇ.19.7ರ ಬೆಳವಣಿಗೆ ಕಂಡಿತ್ತು.

## ಚಿಲ್ಲರೆ ಹಣದುಬ್ಬರ ಶೇ.4.81ಕ್ಕೆ ಏರಿಕೆ

ನವದೆಹಲಿ, ಜು. 12 – ಚಿಲ್ಲರೆ ಹಣದುಬ್ಬರ ಜೂನ್ ತಿಂಗಳಲ್ಲಿ ಶೇ.4.81ಕ್ಕೆ ಏರಿಕೆಯಾಗಿದೆ.

ಇದು ಮೂರು ತಿಂಗಳಲ್ಲೇ ಅತಿ ಹೆಚ್ಚಾಗಿದೆ. ಆಹಾರ ವಸ್ತುಗಳ ಬೆಲೆ ಏರಿಕೆ ಇದಕ್ಕೆ ಪ್ರಮುಖ ಕಾರಣ.

ಗ್ರಾಹಕರ ಬೆಲೆ ಸೂಚ್ಯಂಕ ಮೇ ತಿಂಗಳಲ್ಲಿ ಶೇ.4.31ರಷ್ಟಿತ್ತು. 2022ರ ಜೂನ್‌ನಲ್ಲಿ ಇದು ಶೇ.7ರಷ್ಟಿತ್ತು. ಆದರೂ, ಹಣದುಬ್ಬರ ರಿಸರ್ವ್ ಬ್ಯಾಂಕ್‌ನ ಅಪೇಕ್ಷಿತ ಮಟ್ಟವಾದ ಶೇ.6ಕ್ಕಿಂತ ಕಡಿಮೆ ಇದೆ.

**ಭದ್ರಾ ಜಲಾಶಯ**

ಇಂದಿನ ಮಟ್ಟ : 141 ಅಡಿ
ಒಳ ಹರಿವು : 1494 ಕ್ಯೂಸೆಕ್ಸ್
ಹೊರ ಹರಿವು : 163 ಕ್ಯೂಸೆಕ್ಸ್
ಹಿಂದಿನ ವರ್ಷದ್ದು : 177.7 ಅಡಿ

## ಬಿಜೆಪಿಯಿಂದ ದ್ವೇಷದ ರಾಜಕಾರಣ

### ಜಿಲ್ಲಾ ಕಾಂಗ್ರೆಸ್‌ನಿಂದ ಪಾಲಿಕೆ ಮುಂಭಾಗ ಮೌನ ಸತ್ಯಾಗ್ರಹ




ದಾವಣಗೆರೆ, ಜು. 12- ಕೇಂದ್ರದ ಬಿಜೆಪಿ ಸರ್ಕಾರ ನ್ಯಾಯಾಂಗ ವ್ಯವಸ್ಥೆಯನ್ನು ಬಳಸಿಕೊಂಡು ರಾಹುಲ್‌ಗಾಂಧಿ ವಿರುದ್ಧ ದ್ವೇಷದ ರಾಜಕಾರಣ ಮಾಡುತ್ತಿದ್ದಾರೆಂದು ಆರೋಪಿಸಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ಮಹಾನಗರ ಪಾಲಿಕೆ ಮುಂಭಾಗ ಮೌನ ಸತ್ಯಾಗ್ರಹ ನಡೆಸಲಾಯಿತು.

ಇದೇ ವೇಳೆ ಸತ್ಯಾಗ್ರಹದ ನೇತೃತ್ವ ವಹಿಸಿದ್ದ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಹೆಚ್.ಬಿ. ಮಂಜಪ್ಪ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರದ ಬಿಜೆಪಿ ಸರ್ಕಾರ ಕಾಂಗ್ರೆಸ್ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಮಾನಸಿಕ ಕಿರುಕುಳ ನೀಡುವ ಮೂಲಕ ದ್ವೇಷದ ರಾಜಕಾರಣ ಮಾಡುತ್ತಿದ್ದಾರೆಂದು ಆರೋಪಿಸಿದರು.

ರಾಜಕೀಯ ಪ್ರಭಾವದಿಂದ ರಾಹುಲ್ ಗಾಂಧಿ ಅವರ ಲೋಕಸಭಾ ಸದಸ್ಯತ್ವ ಸ್ಥಾನದಿಂದ ಕೆಳಗಿಳಿಸುವ ಕೆಲಸವನ್ನು ಬಿಜೆಪಿ ಮಾಡುತ್ತಿದೆ. ಇದನ್ನು ವಿರೋಧಿಸಿ ಇಂದು ದೇಶಾದ್ಯಂತ ಹಾಗೂ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ರಾಹುಲ್ ಬೆಂಬಲಿಸಿ ಸತ್ಯಾಗ್ರಹ ನಡೆಸಲಾಗುತ್ತಿದ್ದು, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೂಚನೆ ಮೇರೆಗೆ ದಾವಣಗೆರೆಯಲ್ಲೂ ಸಹ ಎಂದರು.

ಬಿಜೆಪಿ ಸರ್ಕಾರ ದೇಶದ ಜನರಿಗೆ ಸಾಕಷ್ಟು ಭರವಸೆಗಳನ್ನು ನೀಡಿದ್ದು, 100 ದಿನ ಕಾಲಾವಕಾಶ ನೀಡಿದರೆ ಇಡೀ ದೇಶದ ಚಿತ್ರಣವನ್ನೇ ಬದಲಿಸುತ್ತೇವೆ ಎಂದು ನೀಡಿದ ಹೇಳಿಕೆ ಹುಸಿಯಾಗಿದೆ. ಯಾವುದೇ ಬದಲಾವಣೆ ಸಹ ಆಗಿಲ್ಲ. ದೇಶದಲ್ಲಿನ ನಿರುದ್ಯೋಗಿ ಯುವಕರಿಗೆ ಉದ್ಯೋಗ ಸಹ ನೀಡಲಾಗಿಲ್ಲ ಎಂದು ದೂರಿದರು.

ವಿದೇಶದಲ್ಲಿರುವ ಕಪ್ಪು ಹಣ ತಂದು ದೇಶದಲ್ಲಿರುವ ಪ್ರತಿಯೊಬ್ಬ ಪ್ರಜೆಯ ಬ್ಯಾಂಕ್ ಖಾತೆಗೆ ಸಂದಾಯ ಮಾಡುತ್ತೇವೆ ಎಂದು ತಿಳಿಸಿದ್ದರು. ಆದರೆ ಯಾವುದೇ ಆಶ್ವಾಸನೆ ಪೂರೈಸಿಲ್ಲ ಎಂದರು.

ರಾಹುಲ್ ಗಾಂಧಿ (3ನೇ ಪುಟಕ್ಕೆ)

## ಮಹಿಳಾ ಸಾಂತ್ವನ : ಶೀಘ್ರ ಇತ್ಯರ್ಥಪಡಿಸಿ

### ಮಹಿಳೆ-ಮಕ್ಕಳ ಸಾಗಾಣಿಕೆ ತಡೆ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯಲ್ಲಿ ಜಿಪಂ ಸಿಇಒ

ದಾವಣಗೆರೆ, ಜು.12- ಜಿಲ್ಲೆಯ ಎಲ್ಲಾ ಮಹಿಳಾ ಸಾಂತ್ವನ ಕೇಂದ್ರಗಳಲ್ಲಿ ದಾಖಲಾಗಿರುವ ಪ್ರಕರಣಗಳನ್ನು ಶೀಘ್ರ ಇತ್ಯರ್ಥಗೊಳಿಸಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುರೇಶ್ ಕೆ. ಇಟ್ನಾಳ್ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶಿಸಿದರು.



ಜಿಲ್ಲಾ ಪಂಚಾಯಿತಿ ಕಚೇರಿ ಮುಖ್ಯ ಸಭಾಂಗಣದಲ್ಲಿ ಮಹಿಳೆಯರು ಮತ್ತು ಮಕ್ಕಳ ಸಾಗಾಣಿಕೆ ತಡೆಗಟ್ಟುವ ಸಂಬಂಧ ಇಂದು ನಡೆದ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು.

ದೌರ್ಜನ್ಯಕ್ಕೆ ಒಳಗಾಗುವ ಮಹಿಳೆಯರು ಹಾಗೂ ಮಕ್ಕಳಿಗೆ ಸಹಾಯವಾಣಿ, ಸಾಂತ್ವನ ಕೇಂದ್ರ ಕುರಿತು ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ವ್ಯಾಪಕವಾಗಿ ಅರಿವು ಮೂಡಿಸುವಂತೆ ಅವರು ಸೂಚನೆ ನೀಡಿದರು.

ಉದ್ಯೋಗಸ್ಥ ಮಹಿಳೆಯರು, ಕೂಲಿ ಮಾಡುವವರು ಮತ್ತು ವಲಸೆ ಬಂದ ಮಹಿಳೆಯರಿಗೆ ಕೆಲಸದ ಅವಧಿಯವರೆಗೂ ತಮ್ಮ ಮಕ್ಕಳನ್ನು ಶಿಶು ಪಾಲನಾ ಕೇಂದ್ರದಲ್ಲಿ ಬಿಟ್ಟು ಹೋಗಲು ಈ ಬಗ್ಗೆ ಹೆಚ್ಚಿನ ಪ್ರಚಾರ ಮಾಡಿ ಎಂದರು.


ಜಿಲ್ಲಾ ಪ್ರಧಾನ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಕಾರ್ಯದರ್ಶಿ ಮಹಾವೀರ ಎಂ. ಕರೆಣ್ಣವರ ಮಾತನಾಡಿ, ಸಂವಿಧಾನದಲ್ಲಿ ಮಹಿಳೆ ಮತ್ತು ಮಕ್ಕಳ ಸುರಕ್ಷತೆಗೆ ಹೆಚ್ಚು ಆದ್ಯತೆ ನೀಡಲಾಗಿದೆ. ಅವರ ಅಭಿವೃದ್ಧಿಗೆ ಹಲವು ಯೋಜನೆಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೂಪಿಸಿದ್ದು, ಅವುಗಳ ಬಗ್ಗೆ ಮಹಿಳೆಯರಿಗೆ ಮಾಹಿತಿ ತಿಳಿಸುವ ಕೆಲಸಗಳನ್ನು ಮಾಡಬೇಕು. ಗ್ರಾಮೀಣ ಭಾಗಗಳಲ್ಲಿ ಮಹಿಳೆಯರ ನೆರವಿಗೆ ಸ್ವಯಂ ಸೇವಾ ಸಂಸ್ಥೆಗಳಿಂದ ನಿರ್ವಹಣೆಯಾಗುತ್ತಿರುವ (2ನೇ ಪುಟಕ್ಕೆ)

## ಸುಪ್ರೀಂ ಕೋರ್ಟ್‌ಗೆ ಇಬ್ಬರು ನ್ಯಾಯಮೂರ್ತಿಗಳ ನೇಮಕ

ನವದೆಹಲಿ, ಜು. 12 – ಸುಪ್ರೀಂ ಕೋರ್ಟ್‌ಗೆ ಹೈಕೋರ್ಟ್‌ಗಳ ಇಬ್ಬರು ನ್ಯಾಯಮೂರ್ತಿಗಳು ಬಡ್ತಿ ಪಡೆದಿದ್ದಾರೆ.

ತೆಲಂಗಾಣ ಹೈಕೋರ್ಟ್ ನ್ಯಾಯಮೂರ್ತಿ ಉಜ್ಜಲ್ ಭುಯಾನ್ ಹಾಗೂ ಕೇರಳ ಹೈಕೋರ್ಟ್ ನ್ಯಾಯಮೂರ್ತಿ ಎಸ್. ವೆಂಕಟನಾರಾಯಣ ಭಟ್ಟಿ ಅವರು ಬಡ್ತಿ ಪಡೆದಿದ್ದಾರೆ. (2ನೇ ಪುಟಕ್ಕೆ)

## ನ್ಯೂನತೆ ಸರಿಪಡಿಸದ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಜಿಲ್ಲಾಧಿಕಾರಿಗೆ ಪತ್ರ



**ಜಲಸಿರಿ ಯೋಜನೆ**

ಹರಿಹರ, ಜು.12- ನಗರದಲ್ಲಿ ಜಾರಿಯಾಗುತ್ತಿರುವ ಜಲಸಿರಿ ಕುಡಿಯುವ ನೀರಿನ ಯೋಜನೆಯ ನ್ಯೂನತೆಗಳನ್ನು ಸರಿಪಡಿಸದ ಕೆಯು ಐಡಿಎಫ್‌ಸಿ, ಕೆಐಯು ಡಬ್ಲುಎಂಐಪಿ, ಪಿಐಯು ಸಂಸ್ಥೆಗಳ ಎಇ ಮತ್ತು ಎಇಇಗಳ ವಿರುದ್ಧ ಕ್ರಮಕ್ಕೆ ನಗರಸಭೆ ಪೌರಾಯುಕ್ತರು ಡಿಸಿಯವರಿಗೆ ಪತ್ರ ಬರೆದಿದ್ದಾರೆ.

ಈ ವರ್ಷದ ಜನವರಿ 11ರಂದು ನಗರದ ತಾಲ್ಲೂಕು ಕಚೇರಿಯಲ್ಲಿ ಡಿಸಿಯವರು ಸಾರ್ವಜನಿಕರಿಂದ ಅಹವಾಲು ಸ್ವೀಕಾರಕ್ಕೆ ಬಂದಾಗ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ. ಬಿ.ಕೃಷ್ಣಪ್ಪ ಸ್ಥಾಪಿತ) ತಾಲ್ಲೂಕು ಸಂಚಾಲಕ ಪಿ.ಜೆ.ಮಹಾಂತೇಶ್ ಫೋಟೋಗಳ ಸಹಿತ ಜಲಸಿರಿ ಕಾಮಗಾರಿ ನ್ಯೂನತೆಗಳ ಕುರಿತು ದೂರು ನೀಡಿದ್ದರು.

ಡಿಸಿ ಈ ಕುರಿತು ಪರಿಶೀಲನೆ ನಡೆಸಿ ವರದಿ ನೀಡಲು ಪೌರಾಯುಕ್ತರಿಗೆ ಪತ್ರ ಬರೆದಿದ್ದರು. ಅದರನ್ವಯ ಆಗಿನಿಂದಲೂ ಪೌರಾಯುಕ್ತರು ಕೆಯುಐಡಿಎಫ್‌ಸಿ, ಕೆಐಯುಡಬ್ಲುಎಂಐಪಿ, ಪಿಐಯು ಸಂಸ್ಥೆಗಳ ಕಾರ್ಯನಿರ್ವಾಹಕ ಇಂಜಿನಿಯರ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ಗಳಿಗೆ ಹಲವು ಬಾರಿ (3ನೇ ಪುಟಕ್ಕೆ)

|| ಶ್ರೀ ವೀರಭದ್ರೇಶ್ವರ ಪ್ರಸನ್ನ ||

**ಕೈಲಾಸ ಶಿವಗಣಾರಾಧನೆ**



ಜನನ : 25-5-1997 ನಿಧನ : 09-07-2023

ದಾವಣಗೆರೆ ತಾಲ್ಲೂಕು ಲಿಂಗದಹಳ್ಳಿ ವಾಸಿ
ದಿ|| ಶ್ರೀಮತಿ ಶಾರದಮ್ಮ,
ದಿ|| ಗೌಡ್ರ ವೀರಬಸಪ್ಪನವರ ಮಕ್ಕಳಾದ
ಶ್ರೀಮತಿ ರತ್ನಮ್ಮ, ಶ್ರೀ ಜಿ.ವಿ. ವಿರೂಪಾಕ್ಷಪ್ಪ
ದಿ|| ಶ್ರೀಮತಿ ನಾಗರತ್ನಮ್ಮ, ದಿ|| ಜಿ.ವಿ. ಮಂಜಪ್ಪ
ಶ್ರೀಮತಿ ಸರೋಜಮ್ಮ, ಶ್ರೀ ಜಿ.ವಿ. ಅಣ್ಣಪ್ಪ
ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 9-7-2023 ನೇ ಭಾನುವಾರ ಮಧ್ಯಾಹ್ನ 12-04ಕ್ಕೆ
ಶ್ರೀಮತಿ ಸರೋಜಮ್ಮ, ಶ್ರೀ ಜಿ. ವಿ. ಅಣ್ಣಪ್ಪನವರ ಪುತ್ರಿ

**ಕುಮಾರಿ ಸುಪ್ರಿಯಾ ಜಿ.ಎ.**

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮ ಶಾಂತಿಗಾಗಿ 'ಕೈಲಾಸ ಶಿವಗಣಾರಾಧನೆ' ಯನ್ನು ದಿನಾಂಕ 13-07-2023ನೇ ಗುರುವಾರ ಬೆಳಿಗ್ಗೆ 10-30 ಗಂಟೆಗೆ ದಾವಣಗೆರೆ ತಾಲ್ಲೂಕು ಲಿಂಗದಹಳ್ಳಿ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ,

ಇಂತಿ ದುಃಖತಪ್ತರು : ಶ್ರೀಮತಿ ರತ್ನಮ್ಮ, ಶ್ರೀ ಜಿ. ವಿ. ವಿರೂಪಾಕ್ಷಪ್ಪ ಮತ್ತು ಮಕ್ಕಳು
ದಿ|| ಶ್ರೀಮತಿ ನಾಗರತ್ನಮ್ಮ, ದಿ|| ಜಿ.ವಿ. ಮಂಜಪ್ಪ ಮತ್ತು ಮಕ್ಕಳು
ಶ್ರೀಮತಿ ಸರೋಜಮ್ಮ, ಶ್ರೀ ಜಿ. ವಿ. ಅಣ್ಣಪ್ಪ ಮತ್ತು ಮಕ್ಕಳು, ಲಿಂಗದಹಳ್ಳಿ ಮತ್ತು ಸಹೋದರಿಯರು, ಮಾವಂದಿರು, ಅಳಿಯಂದಿರು, ಮಕ್ಕಳು, ಮೊಮ್ಮಕ್ಕಳು, ಗೌಡ್ರ ವಂಶಸ್ಥರು, ಲಿಂಗದಹಳ್ಳಿ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು. ಮೊ. 9611836635, 9731709196

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

|| ಶ್ರೀ ವೀರಭದ್ರೇಶ್ವರ ಪ್ರಸನ್ನ ||

**ಕೈಲಾಸ ಶಿವಗಣಾರಾಧನೆ ಆಹ್ವಾನ**



ದಾವಣಗೆರೆ ಜಿಲ್ಲೆ, ತಾಲ್ಲೂಕು ಹಳೇಬಿಸಲೇರಿ ಗ್ರಾಮದ ವಾಸಿ
ಲಿಂ|| ಶ್ರೀಮತಿ ದ್ರಾಕ್ಷಾಯಣಮ್ಮ ಲಿಂ|| ಶ್ರೀ ಹನುಮಂತಪ್ಪ
ಇವರ ಮಗನಾದ ಶ್ರೀ ಬಿ.ಕೆ. ರೇವಣಸಿದ್ದಪ್ಪ ಮತ್ತು
ಸಹೋದರರು, ಸಹೋದರಿಯರು ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 01.07.2023ನೇ ಶನಿವಾರ ಮಧ್ಯಾಹ್ನ 4.30ಕ್ಕೆ ನನ್ನ ತಮ್ಮನವರಾದ

**ಶ್ರೀ ಬಿ.ಕೆ. ಈರಣ್ಣ**

ಎಪಿಎಂಸಿ ಮಾಜಿ ಅಧ್ಯಕ್ಷರು, ದಾವಣಗೆರೆ.
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
"ಕೈಲಾಸ ಶಿವಗಣಾರಾಧನೆ "ಯನ್ನು
ದಿನಾಂಕ : 13.07.2023ನೇ ಗುರುವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ತಾಲ್ಲೂಕು, ಹಳೇಬಿಸಲೇರಿ ಗ್ರಾಮದ ಶ್ರೀಮತಿ ಗೌರಮ್ಮ ಕುಂದೂರು ವೀರಭದ್ರಪ್ಪ ಸಮುದಾಯ ಭವನದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ಸಾವಿತ್ರ ಮತ್ತು ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಕೆಂಡಪ್ಪರ ವಂಶಸ್ಥರು ಹಾಗೂ ಹಳೇಬಿಸಲೇರಿ ಗ್ರಾಮಸ್ಥರು ಮತ್ತು ಬಂಧು-ಮಿತ್ರರು, ಫೋ. : 97431 44481

ವಿ.ಸೂ. : ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

# ಪುಟ್ಟರಾಜ ಕವಿ ಗವಾಯಿಗಳ ಸಾಹಿತ್ಯ ಮನದ ಕೊಳೆ ತೊಳೆಯುವ ಪವಿತ್ರ ಗಂಗೆ

## ಕಾಶಿ ಜಗದ್ಗುರುಗಳಿಂದ ಪುಟ್ಟರಾಜ ಸಾಹಿತ್ಯ ಪ್ರಚಾರ ಅಭಿಯಾನಕ್ಕೆ ಚಾಲನೆ

ಗದಗ, ಜು. 12- ಡಾ. ಪಂಡಿತ ಪುಟ್ಟರಾಜ ಕವಿ ಗವಾಯಿಗಳವರ ಸಾಹಿತ್ಯ ಅದು ನಿಜವಾಗಿಯೂ ಲಿಂಗ ಸಾಹಿತ್ಯ. ಮನದ ಕೊಳೆ ತೊಳೆಯುವ ಪವಿತ್ರ ಜ್ಞಾನಗಂಗೆ ಎಂದು ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದಂಗಳವರು ನುಡಿದರು.

'ಸಾವಿರದ ಸಾಹಿತ್ಯ ಸಾವಿರ ಮನೆ ಮನಗಳಿಗೆ' ಪುಟ್ಟರಾಜ ಸಾಹಿತ್ಯ ಪ್ರಚಾರ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು.



ಪೂಜ್ಯರು ತಮ್ಮ ಸಾಹಿತ್ಯದ ಮೂಲಕ ನೀಡಿದ ಸಂದೇಶವನ್ನು ಆಸ್ತಿಕ ಜನರಿಗೆ ತಲುಪಿಸುವ ಉದ್ದೇಶದಿಂದ, ಅಭಿಮಾನಿ ಭಕ್ತರ ಮಹಾಬಳಗವಾದ ಡಾ. ಪಂಡಿತ ಪುಟ್ಟರಾಜ ಸೇವಾ ಸಮಿತಿಯು ಸಾಹಿತ್ಯ ಪ್ರಚಾರದ ಅಕ್ಷರ ದಾಸೋಹ ಕಾಯಕ ಕೈಗೆತ್ತಿಕೊಂಡು, 'ಸಾವಿರದ ಸಾಹಿತ್ಯ ಸಾವಿರ ಮನೆ ಮನಗಳಿಗೆ' ಪುಟ್ಟರಾಜ ಸಾಹಿತ್ಯ ಪ್ರಚಾರ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ ಎಂದರು.

ಈ ಅಭಿಯಾನಕ್ಕೆ ಆಯ್ಕೆ ಮಾಡಿಕೊಂಡ 'ಗುರು ವಚನ ಪ್ರಭಾ' ವಚನ ಸಂಕಲನ. ಬಸವಾದಿ ಶರಣರಿಂದ ಆರಂಭಗೊಂಡ ವಚನಾ ಸಾಹಿತ್ಯ ಪರಂಪರೆ ಮುಂದುವರೆಸಿಕೊಂಡು ಬಂದ ಸಾಹಿತ್ಯ ಕೃತಿ ಇದಾಗಿದೆ ಎಂದು ಹೇಳಿದರು.

ಇಲ್ಲಿನ ವಚನಗಳು ಪೂಜ್ಯರು ತಮ್ಮ ಲಿಂಗಪೂಜಾ ಸಮಯದಲ್ಲಿ, ಗುರು ಕುಮಾರ ಪಂಚಾಕ್ಷರೇಶ್ವರ ಅಂಕಿತ ನಾಮದಿಂದ ರಚಿಸಿದ ಲಿಂಗ ನುಡಿಯಾಗಿ ಅರಳಿದ ಪುಷ್ಪಗಳಾಗಿವೆ ಎಂದು ತಿಳಿಸಿದರು.

ಈ ಅಪರೂಪದ ವಚನಗಳನ್ನು ವಿಶ್ಲೇಷಿಸಿ, ಸರಣಿ ರೂಪದಲ್ಲಿ ಅವುಗಳನ್ನು ಪ್ರಕಟಿಸುವ ಯೋಜನೆಯನ್ನು ಕೈಗೆತ್ತಿಕೊಂಡಿದ್ದೇವೆ. ಈ ಯೋಜನೆ ಭಾಗವಾಗಿ ಹಿರಿಯ ಮತ್ತು ಯುವ ಬರಹಗಾರರಿಂದ ವಿಶ್ಲೇಷಿಸಿದ ಲೇಖನಗಳನ್ನು ಚನ್ನವೀರ ಸ್ವಾಮಿ ಹಿರೇಮಠ (ಕಡಣಿ) ಸಂಪಾದಿಸಿದ್ದಾರೆ. ಸೇವಾ ಸಮಿತಿಯ ಗುರು ಕುಮಾರ ಪಂಚಾಕ್ಷರ ಪ್ರಕಾಶನ ಸಂಸ್ಥೆ ಈ ಕೃತಿ ಪ್ರಕಟಿಸಿದೆ ಎಂದು ಮಾಹಿತಿ ನೀಡಿದರು.

ಜಮಖಂಡಿ ಶಾಸಕ ಮಹಾದಾನಿ ಜಗದೀಶ್ ಕುಡುಗುಂಟಿ, ಕಾಶಿ ಪೀಠದ ವೇದಾಗಮ ಸಂಸ್ಕೃತ ಪಾಠಶಾಲೆಯ ಪ್ರಾಧ್ಯಾಪಕ ಪಂ. ಗುರುಸಿದ್ಧಯ್ಯ ಹಿರೇಮಠ ಇವರನ್ನು ಒಳಗೊಂಡಂತೆ ಐದು ಜನರಿಗೆ ಉಚಿತವಾಗಿ ನೀಡು ಮೂಲಕ ಚಾಲನೆ ನೀಡಲಾಯಿತು.

ಇದೇ ಸಂದರ್ಭದಲ್ಲಿ ಕೃತಿ ಸಂಪಾದಕರಾದ ಚೆನ್ನವೀರ ಸ್ವಾಮೀಜಿ ಹಿರೇಮಠ (ಕಡಣಿ) ಇವರಿಗೆ ಜಗದ್ಗುರುಗಳು ಗುರು ರಕ್ಷೆ ನೀಡಿ ಆಶೀರ್ವದಿಸಿದರು. ಸಮಾರಂಭದಲ್ಲಿ ಡಾ. ಕಲ್ಲಯ್ಯ ಅಜ್ಜನವರು ಉಪಸ್ಥಿತರಿದ್ದರು.

# ಒಳ ಒಪ್ಪಂದ ಸಾಬೀತುಪಡಿಸಿದರೆ ರಾಜಕೀಯ ನಿವೃತ್ತಿ

ಬೆಂಗಳೂರು, ಜು.12 - ವಿರೋಧಿಗಳ ಜತೆ ಒಳಒಪ್ಪಂದ ಮಾಡಿಕೊಂಡಿರುವುದನ್ನು ಸಾಬೀತುಪಡಿಸಿದರೆ, ರಾಜಕೀಯ ನಿವೃತ್ತಿ ಹೊಂದುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆಯಲ್ಲಿ ಸವಾಲು ಹಾಕಿದ್ದಾರೆ.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಬಸನಗೌಡ ಪಾಟೀಲ್ ಯತ್ನಾಳ್ ಅವರು ಮಾಡಿದ ಪ್ರಸ್ತಾವಕ್ಕೆ ಸಿದ್ದರಾಮಯ್ಯ ಮಧ್ಯೆ ಪ್ರವೇಶಿಸಿ, 1983ರಿಂದ ಈ ಸದನದಲ್ಲಿ ಸದಸ್ಯನಾಗಿದ್ದೇನೆ. ಅಂದಿನಿಂದ ಇಂದಿನವರೆಗೂ ನನ್ನ ವಿರೋಧಿಗಳು ಹಾಗೂ ಪಕ್ಷಗಳ ಜತೆ ಒಂದೇ ಒಂದು ಹೊಂದಾಣಿಕೆ ರಾಜಕೀಯ ಮಾಡಿಲ್ಲ ಎಂದರು.

ಈ ಸದನದಲ್ಲೇ ವಿರೋಧ ಪಕ್ಷದಲ್ಲಿ ಹಲವು ಮಾಜಿ ಸಚಿವರಿದ್ದೀರಿ. ಯಾವುದೇ ಕೆಲಸಕ್ಕೋ, ಮಾತುಕತೆಗೋ ನಿಮ್ಮ ಮನೆ ಬಾಗಿಲಿಗೆ ಬಂದಿದ್ದೇನೆಯೇ ಎಂದು ಪ್ರಶ್ನಿಸಿದರು. ಯತ್ನಾಳ್ ಎರಡನೇ ಬಾರಿಗೆ ವಿಧಾನಸಭೆ ಪ್ರವೇಶ ಮಾಡಿದ್ದಾರೆ. ಅವರಿಗೆ ಎಲ್ಲವೂ ತಿಳಿದಿಲ್ಲ. ನಾನು ದೇಶಪಾಂಡೆ, ಬಿ.ಆರ್.ಪಾಟೀಲ್ ಮಾತ್ರ ಅಂದಿನಿಂದ ಇಂದಿನವರೆಗೂ ಇದ್ದೇವೆ. ಯಾವುದೇ ಸಂದರ್ಭ ಮತ್ತು ಎಂತಹ ಪರಿಸ್ಥಿತಿಯಲ್ಲೂ ಹೊಂದಾಣಿಕೆ ರಾಜಕೀಯ ಮಾಡಿಕೊಂಡಿಲ್ಲ. ಒಂದು ವೇಳೆ ಮಾಡಿಕೊಂಡಿದ್ದರೆ ಸಾಬೀತುಪಡಿಸಿ ಎಂದು ಸವಾಲು ಹಾಕಿದರು.



ಕುಮಾರಸ್ವಾಮಿ ಮಾತನಾಡುವಾಗ ಮಧ್ಯೆ ಪ್ರವೇಶಿಸಿದ ಯತ್ನಾಳ್, ಸರ್ಕಾರವನ್ನು ಕಿಚಾಯಿಸುತ್ತಿದ್ದರು. ಇದರಿಂದ ಇರಿಸು-ಮುರಿಸುಗೊಂಡ ಮುಖ್ಯಮಂತ್ರಿ, ರೀ ಯತ್ನಾಳ್, ನೀವು ಎಷ್ಟೇ ಕಿರುಚಾಡಿದರೂ ನನಗೆ ತಿಳಿದಿರುವಂತೆ ನಿಮಗೆ ವಿರೋಧ ಪಕ್ಷದ ನಾಯಕನ ಸ್ಥಾನ ದಕ್ಕುವುದಿಲ್ಲ ಎಂದರು.

ಮುಖ್ಯಮಂತ್ರಿ ಅವರ ಉತ್ತರಕ್ಕೆ ಅದೇ ದಾಟಿಯಲ್ಲಿ ಪ್ರತಿಕ್ರಿಯಿಸಿದ ಯತ್ನಾಳ್, ಇದನ್ನೇ ಅಡ್ಜೆಸ್ಟ್‌ಮೆಂಟ್ ರಾಜಕೀಯ ಎನ್ನುವುದು. ನೋಡಿ ನಿಮಗೆ ನಮ್ಮೆಲ್ಲ ಮಾಹಿತಿ ತಿಳಿಯುತ್ತದೆ ಎಂದು ತಿರುಗೇಟು ನೀಡಿದರು.

ಯತ್ನಾಳ್ ಬೆಂಬಲಕ್ಕೆ ನಿಂತ ಕುಮಾರಸ್ವಾಮಿ, ನಾನಂತು ಹೊಂದಾಣಿಕೆ ರಾಜಕೀಯವನ್ನು ನೇರವಾಗಿ ಮಾಡಿದ್ದೇನೆ. ನಾನೇನು ಹಿಂದಿನ ಬಾಗಿಲಿನಿಂದ ರಾಜಕೀಯ ಮಾಡಿಲ್ಲ ಎಂದು ಮುಖ್ಯಮಂತ್ರಿ ಅವರನ್ನು ಪರೋಕ್ಷವಾಗಿ ತಿವಿದರು.

ಆಕಸ್ಮಿಕವಾಗಿ ಮುಖ್ಯಮಂತ್ರಿಯಾಗಿಯೋ, ಇಲ್ಲವೇ ಹೊಂದಾಣಿಕೆಯಿಂದಲೋ ಎರಡು ಬಾರಿ ರಾಜ್ಯದ ಆಡಳಿತ ನಡೆಸಿದ್ದೇನೆ. ಮುಕ್ತವಾಗಿ ಹೊಂದಾಣಿಕೆ ಮಾಡಿಕೊಳ್ಳಲಾಗಿದೆ. ಹಿಂಬಾಗಿಲ ಮೂಲಕ ರಾಜಕೀಯ ಮಾಡಿ ಅಲ್ಲ ಎಂದು ಮಾರ್ಮಿಕವಾಗಿ ನುಡಿದರು.

# ಮಹಿಳಾ ಸಾಂತ್ವನ : ಇತ್ಯರ್ಥಪಡಿಸಲು ನಿರ್ದೇಶನ

**(1ನೇ ಪುಟದಿಂದ)** ಸಾಂತ್ವನ, ಮಹಿಳಾ ಸಹಾಯವಾಣಿ ಕೇಂದ್ರಗಳ ಮಾಹಿತಿಯನ್ನು ಹೆಚ್ಚು ಪ್ರಚಾರ ಮಾಡಬೇಕು ಎಂದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪ ನಿರ್ದೇಶಕರಾದ ವಾಸಂತಿ ಉಪ್ಪಾರ್ ಮಾತನಾಡಿ, ಸಾಂತ್ವನ ಯೋಜನೆಯಡಿ ಜಗಳೂರು ತಾಲ್ಲೂಕಿನಲ್ಲಿ 29 ಪ್ರಕರಣಗಳು ದಾಖಲಾಗಿದ್ದು, 23 ಪ್ರಕರಣಗಳು ಇತ್ಯರ್ಥಗೊಂಡಿವೆ. ಇನ್ನೂ 4 ಪ್ರಕರಣಗಳು ಬಾಕಿ ಉಳಿದಿವೆ. ಚನ್ನಗಿರಿಯಲ್ಲಿ 28 ಪ್ರಕರಣಗಳು ದಾಖಲಾಗಿದ್ದು, 24 ಪ್ರಕರಣಗಳು ಇತ್ಯರ್ಥವಾಗಿವೆ. 4 ಪ್ರಕರಣಗಳು ಬಾಕಿ ಉಳಿದಿವೆ. ಹರಿಹರದಲ್ಲಿ 30 ಪ್ರಕರಣಗಳು ದಾಖಲಾಗಿದ್ದು 29 ಪ್ರಕರಣಗಳು ಇತ್ಯರ್ಥವಾಗಿವೆ. 1 ಪ್ರಕರಣ ಬಾಕಿ ಉಳಿದಿದೆ. ಹೊನ್ನಾಳಿಯಲ್ಲಿ 18 ಪ್ರಕರಣಗಳು ದಾಖಲಾಗಿದ್ದು, 16 ಪ್ರಕರಣಗಳು ಇತ್ಯರ್ಥಗೊಂಡಿವೆ. 2 ಪ್ರಕರಣಗಳು ಬಾಕಿ ಉಳಿದಿವೆ ಎಂದು ತಿಳಿಸಿದರು.

ಪಶು ಸಂಗೋಪನೆ ಉಪ ನಿರ್ದೇಶಕ ಸುಂಕದ್, ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ ಚಿಂತಾಲ್, ಸಮಿತಿಯ ಪದಾಧಿಕಾರಿಗಳು, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ರಾಜೀವ್ ಗಾಂಧಿ ವಸತಿ ನಿಗಮದಿಂದ 7.06 ಲಕ್ಷ ಮನೆ ನಿರ್ಮಾಣ ಗುರಿ

**ಸಚಿವ ಜಮೀರ್ ಅಹಮದ್ ಖಾನ್**

ಬೆಂಗಳೂರು, ಜು. 12 - ರಾಜೀವ್ ಗಾಂಧಿ ವಸತಿ ನಿಗಮದ ವತಿಯಿಂದ 2020-21 ರಿಂದ 2022-23 ರವರೆಗೆ 7,06,290 ಮನೆ ನಿರ್ಮಾಣದ ಗುರಿ ಹೊಂದಿದ್ದು 68, 177 ಮನೆಗಳನ್ನು ಪೂರ್ಣ ಗೊಳಿಸಲಾಗಿದೆ ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ತಿಳಿಸಿದ್ದಾರೆ.

ವಿಧಾನ ಪರಿಷತ್ ನಲ್ಲಿ ಬುಧವಾರ ಬಿಜೆಪಿಯ ಡಿ . ಎಸ್. ಅರುಣ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು,

ಬಸವ ವಸತಿ , ಅಂಬೇಡ್ಕರ್ ನಿವಾಸ್ ನಗರ ಮತ್ತು ಗ್ರಾಮೀಣ, ದೇವರಾಜ ಅರಸು ನಗರ ಮತ್ತು ಗ್ರಾಮೀಣ, ಪ್ರಧಾನ ಮಂತ್ರಿ ಆವಾಸ್ ಗ್ರಾಮ, ವಾಜಪೇಯಿ ವಸತಿ ನಗರ ಯೋಜನೆಯಡಿಯಲ್ಲಿ 7.06, 290 ಮನೆಗಳ ನಿರ್ಮಾಣ ಗುರಿ ಪೈಕಿ 3,68,177 ಮನೆ ನಿರ್ಮಾಣಕ್ಕೆ ಅನುಮೋದನೆ ದೊರೆತಿದ್ದು 68,177 ಮನೆಗಳು ಪೂರ್ಣಗೊಂಡಿವೆ. 1.19,090 ಮನೆಗಳು ವಿವಿಧ ಹಂತದಲ್ಲಿವೆ. 1,77,868 ಮನೆಗಳು ಇನ್ನೂ ಪ್ರಾರಂಭಗೊಂಡಿಲ್ಲ. 3042 ಮನೆಗಳನ್ನು ತಡೆ ಹಿಡಿಯಲಾಗಿದೆ ಎಂದು ಹೇಳಿದರು.

ಇದೇ ವೇಳೆ ಪಿ ಎಂ ಎ ವೈ ನಗರ ಮತ್ತು ಮುಖ್ಯಮಂತ್ರಿಯವರ ಒಂದು ಲಕ್ಷ ಮನೆ ಯೋಜನೆಯಲ್ಲಿ 1.05,267 ಮನೆ ನಿರ್ಮಾಣ ದ ಗುರಿ ಹೊಂದಿದ್ದು 99,218 ಮನೆ ನಿರ್ಮಾಣಕ್ಕೆ ಅನುಮೋದನೆ ದೊರೆತು 10,148 ಮನೆ ಪೂರ್ಣ ಗೊಂಡಿದ್ದು 60,277 ಮನೆ ನಿರ್ಮಾಣ ವಿವಿಧ ಹಂತದಲ್ಲಿದೆ, 28,793 ಮನೆಗಳ ಕಾಮಗಾರಿ ಇನ್ನೂ ಪ್ರಾರಂಭ ಆಗಿಲ್ಲ ಎಂದು ವಿವರಿಸಿದರು.

8,11,557 ಮನೆಗಳ ಪೈಕಿ 4,67,395 ಫಲಾನುಭವಿಗಳಿಗೆ ಕಾಮಗಾರಿ ಆದೇಶ ನೀಡಲಾಗಿದೆ. ಈ ಪೈಕಿ 78, 325 ಮನೆ ಗಳು ಪೂರ್ಣಗೊಂಡಿದ್ದು, 1,79,367 ಮನೆ ವಿವಿಧ ಹಂತದಲ್ಲಿ ಪ್ರಗತಿಯಲ್ಲಿವೆ, 2,06,661 ಮನೆ ಪೂರ್ಣ ಗೊಳ್ಳಲು ಬಾಕಿ ಇದೆ. ಉಳಿದ 3,042 ಮನೆ ಫಲಾನುಭವಿಗಳು ಆಸಕ್ತಿ ತೋರದಿರುವುದು ಸೇರಿ ನಾನಾ ಕಾರಣಕ್ಕೆ ಬ್ಲಾಕ್ ಮಾಡಲಾಗಿದೆ ಎಂದು ತಿಳಿಸಿದರು.

**ಎರಡೂ ಯೋಜನೆ ಗಳಿಗೆ** 3,961,01 ಕೋಟಿ ರೂ. ಹಣ ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದರು.

# ಕುಂಬಳೂರು ಪಿಎಸಿಎಸ್ ವಾರ್ಷಿಕ ಮಹಾಸಭೆ

ಮಲೇಬೆನ್ನೂರು, ಜು. 12 - ಕುಂಬಳೂರು ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2022-23ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಬುಧವಾರ ಸಂಘದ ಅಧ್ಯಕ್ಷ ಡಿ.ಕೆ.ಸ್ವಾಮಿ ಅಧ್ಯಕ್ಷತೆಯಲ್ಲಿ ಜರುಗಿತು.

ಸಂಘದ ಸಿಓಕೆ. ಯಶೋಧ ಅವರು ವಿವಿಧ ಲೆಕ್ಕ ಪತ್ರಗಳನ್ನು ಓದಿ, ಸಂಘವು ಪ್ರಸಕ್ತ ಸಾಲಿನಲ್ಲಿ ರೈತರಿಗೆ ಸುಮಾರು 5 ಕೋಟಿ ಕೃಷಿ ಸಾಲ ನೀಡಿದೆ. ಅಲ್ಲದೇ, ಎಂಟಿಎಲ್ ಸಾಲ ಸೇರಿದಂತೆ ವಿವಿಧ ರೀತಿ ಸಾಲ ಸೌಲಭ್ಯಗಳನ್ನು ರೈತರಿಗೆ ಕಲ್ಪಿಸಿ ಕೊಟ್ಟಿದ್ದೇವೆ.

ಪಿಎಂಜಿಎಸ್‌ವೈ ಯೋಜನೆಯಡಿ 120 ರೈತರಿಗೆ ವಿಮೆ ಸೌಲಭ್ಯ ಸಿಕ್ಕಿದೆ. 24 ಲಕ್ಷ ರೂ. ರೈತರ ಉಳಿತಾಯ ಹಣ ಹೊಂದಿದೆ ಎಂದರು.



ಡಿಸಿಸಿ ಬ್ಯಾಂಕ್ ಕ್ಷೇತ್ರಾಧಿಕಾರಿ ಎಸ್. ಲೋಕೇಶ್‌ನಾಯ್ಕ ಮಾತನಾಡಿ, ಸಾಲ ಮನ್ನಾ ಬಾಬ್ತು 7 ರೈತರಿಗೆ ಬರಬೇಕಾದ ಹಣ ಶೀಘ್ರ ಸರ್ಕಾರದಿಂದ ಬರುವ ಸಾಧ್ಯತೆ ಇದೆ ಎಂದರು. ಗ್ರಾಮದ ಹಿರಿಯರಾದ ಕೈ ತೀರ್ಥಪ್ಪ, ಹಳೇಮನಿ ಶಂಭುಲಿಂಗಪ್ಪ, ಹುಲ್ಲುಮನಿ ನಿಂಗಪ್ಪ, ಕೆ.ಗಿರೀಶ್, ಕೆ. ತಿಮ್ಮಣ್ಣ ಅವರುಗಳು ಮಾತನಾಡಿ, ಸಂಘದ ಈಗಿನ ಆಡಳಿತ ಮಂಡಳಿ ಉತ್ತಮವಾಗಿ ಕಾರ್ಯನಿರ್ವಹಿಸಿದ್ದು, ಮುಂದಿನ ಅವಧಿಗೆ ಚುನಾವಣೆ ನಡೆಯದಂತೆ ಅವಿರೋಧವಾಗಿ ಆಯ್ಕೆ ಮಾಡೋಣ ಎಂದರು.

**ಸಂಘದ ಸುವರ್ಣ ಮಹೋತ್ಸವ ಆಚರಿಸಲು ನಿರ್ಧಾರ**

ಸಂಘದ ನಿರ್ದೇಶಕ ಮಾಗಾನಹಳ್ಳಿ ವಾಸು ಮಾತನಾಡಿ, ಗ್ರಾಮಸ್ಥರ ಸಹಕಾರದಿಂದ ನಮ್ಮ ಸಂಘವು ಪ್ರಗತಿ ಪಥದಲ್ಲಿ ಸುವರ್ಣ ಮಹೋತ್ಸವಕ್ಕೆ ಕಾಲಿಟ್ಟಿದೆ ಎಂದರು.

ಕೆ.ಕಾಮರಾಜ್ ಮಾತನಾಡಿ, ಸಂಘದ ಸುವರ್ಣ ಮಹೋತ್ಸವದ ಅಂಗವಾಗಿ ಸಂಘದ ಸದಸ್ಯರ ಪ್ರತಿಭಾವಂತ ಮಕ್ಕಳಿಗೆ ವೈಯಕ್ತಿಕವಾಗಿ ಪ್ರತಿಭಾ ಪುರಸ್ಕಾರ ನೀಡುವುದಾಗಿ ತಿಳಿಸಿದರು.

ಸಂಘದ ಉಪಾಧ್ಯಕ್ಷ ಕೆ. ತಿಪ್ಪೇಸ್ವಾಮಿ, ನಿರ್ದೇಶಕರಾದ ಹೆಚ್.ಆಂಜನೇಯ, ಎನ್. ಕುಮಾರ್, ಶ್ರೀಮತಿ ಗುರುಶಾಂತಮ್ಮ ಆರ್.ವೀರಭದ್ರಪ್ಪ, ಕೆ.ಸೋಮಶೇಖರಪ್ಪ, ಬಿ.ಕೆ.ಹನುಮೇಶ್, ಶ್ರೀಮತಿ ಹಾಲಮ್ಮ, ಶ್ರೀಮತಿ ಹನುಮಕ್ಕ ವೇದಿಕೆಯಲ್ಲಿದ್ದರು. ಹೆಚ್.ಎಂ. ಸದಾನಂದ್ ಸ್ವಾಗತಿಸಿದರು. ಚಿಕ್ಕಣ್ಣ ಕಾರ್ಯಕ್ರಮ ನಿರೂಪಿಸಿದರೆ, ಹೆಚ್.ಎಂ. ಸದಾಶಿವ ವಂದಿಸಿದರು.


॥ ಶ್ರೀ ಸಂತ ಸೇವಾಲಾಲ್ ಮರಿಯಮ್ಮದೇವಿ ಪ್ರಸನ್ನ ॥ ॥ ಶ್ರೀ ವೆಂಕಟೇಶ್ವರ ಪ್ರಸನ್ನ ॥

# ಆರನೇ ವರ್ಷದ ಪುಣ್ಯಸ್ಮರಣೆ



## ಶ್ರೀಮತಿ ಕುಸುಮಾವತಿ ನಾಯ್ಕ

(ದಿ॥ ಕುಮಾರಸ್ವಾಮಿ ನಾಯ್ಕ, ನಿವೃತ್ತ ಎ.ಆರ್.ಟಿ.ಓ. ಇವರ ಧರ್ಮಪತ್ನಿ)

*ನೀವು ನಮ್ಮನ್ನಗಲಿ ಇಂದಿಗೆ (13.07.2023) ಆರು ವರ್ಷಗಳಾದವು. ನಿಮ್ಮ ಆದರ್ಶಗಳೇ ನಮಗೆ ದಾರೀದೀಪ. ನೀವು ತೋರಿಸಿದ ಸನ್ಮಾರ್ಗದಲ್ಲೇ ನಡೆಯುತ್ತಾ, ಸದಾ ನಿಮ್ಮ ಸ್ಮರಣೆಯಲ್ಲಿರುವ...*

ಇಂತಿ ದುಃಖತಪ್ತರು : ಮಗಳು : **ಪದ್ಮಾವತಿ ನಾಯ್ಕ,**

ತಮ್ಮ : **ಸೇವಾನಾಯ್ಕ, ನಾಯ್ಕ ಕುಟುಂಬ ವರ್ಗ**

ನವೋದಯ ಆಸ್ಪತ್ರೆ, ನಾಯ್ಕ ನರ್ಸಿಂಗ್ ಹೋಂ, ನವೋದಯ ಮೆಡಿಕಲ್ ಅಂಡ್ ಜನರಲ್ ಸ್ಟೋರ್.

ಶ್ರೀ ನವೋದಯ ಆಗ್ರೋ ಫುಡ್ ಪ್ರೊಸೆಸಿಂಗ್ ಇಂಡಸ್ಟ್ರೀಯಲ್ ಕಾರ್ಪೊರೇಷನ್

**ಮತ್ತು ಸಿಬ್ಬಂದಿ ವರ್ಗ ಹಾಗೂ ಬಂಧು-ಮಿತ್ರರು.**

ಮೊ. 99013 32242


# ಮುನಿಗಳ ಹತ್ಯೆ ಖಂಡಿಸಿ ಮೌನ ಪ್ರತಿಭಟನೆ

ಹರಪನಹಳ್ಳಿ, ಜು.12- ಚಿಕ್ಕೋಡಿ ಸಮೀಪ ಹಿರೇಕೋಡಿಯಲ್ಲಿ ಕಾಮಕುಮಾರ ನಂದಿ ಜೈನ ಮುನಿಗಳ ಬರ್ಬರ ಹತ್ಯೆ ಖಂಡಿಸಿ, ಶ್ರೀ ಶಾಂತಿನಾಥ ದಿಗಂಬರ ಜೈನ ಕೋಟೆ ಬಸದಿ ಟ್ರಸ್ಟ್ ಆಶ್ರಯದಲ್ಲಿ ಜೈನ ಸಮುದಾಯದವರು ಪಟ್ಟಣದಲ್ಲಿ ಇಂದು ಮೌನ ಪ್ರತಿಭಟನೆ ನಡೆಸಿ, ಉಪವಿಭಾಗಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ಸ್ಥಳೀಯ ಜೈನರ ಓಣಿಯಲ್ಲಿ ಇರುವ ಆದಿನಾಥ ತೀರ್ಥಂಕರ ಜೈನ ಬಸದಿಯಿಂದ ಮೌನ ಪ್ರತಿಭಟನೆ ಮೂಲಕ ಮೆರವಣಿಗೆ ಹೊರಟ ಜೈನ ಸಮಾಜದವರು ತಾಲ್ಲೂಕು ಆಡಳಿತ ಸೌಧಕ್ಕೆ ಆಗಮಿಸಿ, ಬಹಿರಂಗ ಸಭೆ ನಡೆಸಿದರು.




ಶ್ರೀಶಾಂತಿನಾಥ ದಿಗಂಬರ ಜೈನ ಕೋಟೆ ಬಸದಿ ಟ್ರಸ್ಟ್ ಅಧ್ಯಕ್ಷ ಎಚ್.ಪದ್ಮನಾಭ ಮಾತನಾಡಿ, ಜೈನಮುನಿಯೊಬ್ಬರ ಬರ್ಬರ ಹತ್ಯೆಯಿಂದ ಜೈನ ಸಮಾಜ ಆಘಾತಗೊಂಡಿದೆ, ಜೈನ ಮುನಿಗಳಿಗೆ ರಕ್ಷಣೆ ಇಲ್ಲವಾಗಿದೆ, ಜೈನಮುನಿಗಳು ಅಪಾಯದ ಕಕ್ಷೆಯೊಳಗೆ ಉಸಿರು ಬಿಗಿ ಹಿಡಿದು ಧರ್ಮ ಪಾಲನೆ ಮಾಡುವಂತಾಗಿದೆ. ಜೈನ ಧಾರ್ಮಿಕ ಮುಖಂಡರ ಮೇಲೆ ಬೆದರಿಕೆಯ ವಾತಾವರಣ ಆವರಿಸಿಕೊಂಡಿದೆ, ಧಾರ್ಮಿಕ ಮುಖಂಡರ ಹಿರಿಮೆಯನ್ನು ಕುಂಠಿತಗೊಳಿಸುವ ಹುನ್ನಾರ ಕೆಲವು ಶಕ್ತಿಗಳಿಂದ ನಡೆಯುತ್ತಲಿದೆ ಎಂದು ಅವರು ಆರೋಪಿಸಿದರು.

ಪ್ರಧಾನ ಕಾರ್ಯದರ್ಶಿ ಯು.ಪಿ.ನಾಗರಾಜ ಮಾತನಾಡಿ, ಜೈನರಲ್ಲಿ ಅಭದ್ರತೆ ಮೂಡುತ್ತಿದೆ. ಕುತ್ಸಿತ ಶಕ್ತಿಗಳು ಜೈನ ಧರ್ಮದ ವಿಚಾರವಾಗಿ ಯಾವುದೋ ಅಗೋಚರ ಶಕ್ತಿ ಕೆಲಸ ಮಾಡುತ್ತಿದೆ. ಆ ಶಕ್ತಿಯು ಜೈನ ಧರ್ಮದ ಮೇಲೆ ದ್ವೇಷದ ಭಾವನೆಯನ್ನು ಇಟ್ಟುಕೊಂಡು, ತೆರೆಯ ಹಿಂದೆ ಕೆಲಸ ಮಾಡುತ್ತಿದೆ. ಪ್ರಸ್ತುತ ಜೈನ ಸಮಾಜ ಅಪಾಯದಲ್ಲಿದೆ, ಅಲ್ಪ ಸಂಖ್ಯಾತರಲ್ಲಿ ಅಲ್ಪ ಸಂಖ್ಯಾತರಾಗಿರುವ ಜೈನರಿಗೆ ರಕ್ಷಣೆ ಒದಗಿಸಬೇಕಾದದ್ದು ಸರ್ಕಾರದ ಕರ್ತವ್ಯವಾಗಿದೆ. ನ್ಯಾಯಯುತವಾಗಿ ಜೈನ ಧರ್ಮೀಯರಿಗೆ ಸರ್ಕಾರ ಸಂವಿಧಾನ ರೀತ್ಯ ಸೌಲಭ್ಯಗಳನ್ನು ಹಾಗೂ ಹಕ್ಕುಗಳನ್ನು ನೀಡಬೇಕು. ಈ ನಿಟ್ಟಿನಲ್ಲಿ ಸರ್ಕಾರ ಜೈನ ಸಮಾಜಕ್ಕೆ ರಕ್ಷಣೆ ಒದಗಿಸಿ, ತಪ್ಪಿಸ್ಥರ ಮೇಲೆ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಅವರು ಆಗ್ರಹಿಸಿದರು.

ಸಹ ಕಾರ್ಯದರ್ಶಿ ಎಂ.ಕೆ. ಅಜಯಕುಮಾರ್, ಖಜಾಂಚಿ ಬಿ.ಪದ್ಮರಾಜ್, ಸದಸ್ಯರುಗಳಾದ ಅನಂತರಾಜ ಸಗರಿ, ಓ.ಕೆ. ಪದ್ಮರಾಜ, ಎಚ್.ಬಿ.ಮಹಾವೀರ, ರಾಯಪ್ಪ ಇಜಾರಿ, ಇಜಾರಿ ಮಹಾವೀರ, ಶೀತಲ್ ಪ್ರಸಾದ, ಕೆ.ಶಾಂತರಾಜ, ಪ್ರಸನ್ನಕುಮಾರ ಜೈನ್, ಅಶೋಕ, ಗೌತಮ್ ಜೈನ್, ವಿಜಯರಾಜ, ರಾಕೇಶ್, ಮಹಾವೀರ ಭಂಡಾರಿ, ಮೆಣಸಿನಕಾಯಿ ಅಶೋಕ, ಅರುಣಕುಮಾರ, ನಯನ ಪದ್ಮರಾಜ್, ವೀಣಾ ಪಂಡಿತ, ಪದ್ಮ ಜೈನ್, ಯು.ಪಿ.ಸುಜಾತ, ತನುಶ್ರೀ, ರಕ್ಷಿತ, ನಳಿತಾ ಮೆಣಸಿನಕಾಯಿ, ಚಂದ್ರಪ್ರಭ ಪಂಡಿತರು ಸೇರಿದಂತೆ ಜೈನ ಸಮುದಾಯದವರು ಪಾಲ್ಗೊಂಡಿದ್ದರು.

# ನ್ಯಾ.ಮೂರ್ತಿಗಳ ನೇಮಕ

**(1ನೇ ಪುಟದಿಂದ)** ಇದರಿಂದಾಗಿ 34 ಸಂಖ್ಯಾಬಲದ ಸುಪ್ರೀಂ ಕೋರ್ಟ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ನ್ಯಾಯಮೂರ್ತಿಗಳ ಸಂಖ್ಯೆ 32ಕ್ಕೆ ಏರಿಕೆಯಾಗಿದೆ.

## ಸುಲೋಚನಮ್ಮ ದೇವಿ ಬುರುಕುಲೆ ನಿಧನ



ದಾವಣಗೆರೆ ಹಗೆದಿಬ್ಬ ಸರ್ಕಲ್ ಹತ್ತಿರದ ನಿವಾಸಿ ಸುಲೋಚನಮ್ಮ ದೇವಿ ಬುರುಕುಲೆ (81) ಇವರು ದಿನಾಂಕ 12.07.2023ರ ಬುಧವಾರ ರಾತ್ರಿ 8 ಗಂಟೆಗೆ ದೈವಾಧೀನರಾದರು. ಓರ್ವ ಪುತ್ರ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 13.07 2023ರ ಗುರುವಾರ ಮಧ್ಯಾಹ್ನ 1 ಗಂಟೆಗೆ ನಗರದ ಹಳೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

# ಬಿಜೆಪಿ-ಕಾಂಗ್ರೆಸ್‌ಗಳಿಂದ ಧರಣಿ

ಬೆಂಗಳೂರು, ಜು.12 - ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕುಸಿದಿದೆ ಎಂದು ಬಿಜೆಪಿ ಧರಣಿ ನಡೆಸಿದರೆ, ರಾಹುಲ್ ಗಾಂಧಿ ಅವರ ರಾಜಕೀಯ ಜೀವನ ಮುಗಿಸಲು ಕೇಂದ್ರ ಸರ್ಕಾರ ಪಿತೂರಿ ನಡೆಸುತ್ತಿದೆ ಎಂದು ಆರೋಪಿಸಿ, ಆಡಳಿತಾರೂಢ ಕಾಂಗ್ರೆಸ್ ನಾಯಕರು ಪ್ರತಿಭಟನೆ ನಡೆಸಿದರು.

ಆಡಳಿತ ಮತ್ತು ಪ್ರತಿ ಪಕ್ಷ ಒಂದಲ್ಲಾ ಒಂದು ಕಾರಣಕ್ಕೆ ಬೀದಿಗಿಳಿದು ಹೋರಾಟ ನಡೆಸಿ, ಸಂಚಾರ ದಟ್ಟಣೆ ಉಂಟು ಮಾಡಿದರು. ಧರಣಿ ಸಂದರ್ಭದಲ್ಲಿ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಬಿಜೆಪಿಗೆ ಪರ್ಯಾಯವಾಗಿ ಬೆಳೆಯುವ ಪಕ್ಷ ಮತ್ತು ನಾಯಕರನ್ನು ರಾಜಕೀಯವಾಗಿ ಮುಗಿಸಲಾಗುತ್ತಿದೆ ಎಂದು ದೂರಿದರು.

ಕುತಂತ್ರದಿಂದ ಸತ್ಯವನ್ನು ಮುಚ್ಚಿಡಲಾಗದು, ಬಿಜೆಪಿಯ ನೀತಿಗಳಿಗೆ ನಮ್ಮ ಧಿಕ್ಕಾರವಿದೆ. ಅವರು ಏನೇ ಮಾಡಿದರೂ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಯುಪಿಎ ಅಧಿಕಾರದ ಗದ್ದುಗೆ ಹಿಡಿಯುವುದಿಲ್ಲ ಎಂದರು.

ಮತ್ತೊಂದೆಡೆ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಗೆ ಸಂಬಂಧಿಸಿದ ಧರಣಿ ನಡೆಸಿದ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕರ್ನಾಟಕದಲ್ಲಿ ಜಂಗಲ್ ರಾಜ್ಯ ಶುರುವಾಗಿದೆ ಎಂದರು.

ಸಾಮಾನ್ಯರು ಭಯ, ಭೀತಿ ಇಲ್ಲದೆ ಓಡಾಡುವಂತಿಲ್ಲ. ಜೈನ ಮುನಿ ಕೊಲೆಯಾಗಿದೆ. ನಮ್ಮ ಕಾರ್ಯಕರ್ತರ ಕೊಲೆಯಾಗಿದೆ. ಜನ ಸಾಮಾನ್ಯರ ಕೊಲೆಯಾಗಿದೆ. ಇಬ್ಬರು ಟೆಕ್ಕಿಗಳ ಕೊಲೆಯಾಗಿದೆ. ಕೊಲೆ ಮಾಡಿ ಆ ವ್ಯಕ್ತಿ ತನ್ನ ಇನ್ ಸ್ಟಾ ಗ್ರಾಂನಲ್ಲಿ ಹಾಕುತ್ತಾನೆ ಎಂದರು.

ಕೊಲೆಗಡುಕರಿಗೆ ಯಾವುದೇ ಭಯ ಇಲ್ಲ. ಪೊಲೀಸರ ಮೇಲೆ ಒತ್ತಡ ಹೇರಲಾಗುತ್ತಿದೆ. ಅವ್ಯವಹಾರ ತಡೆಯಲು ಹೋಗಿದ್ದ ಪೊಲೀಸ್ ಅಧಿಕಾರಿಯನ್ನೇ ಕೊಲೆ ಮಾಡಲಾಗಿದೆ. ಹಿರಿಯ ಅಧಿಕಾರಿಗಳು ಸರ್ಕಾರದ ಮುಂದೆ ತಲೆವಾಗಿ ಅವರ ಮುಂದೆ ನಿಂತಿದ್ದಾರೆ. ಹೀಗಾಗಿ ಕೊಲೆಗಡುಕರಿಗೆ ಯಾವುದೇ ಭಯವಿಲ್ಲದಂತಾಗಿದೆ. ದಪ್ಪ ಚರ್ಮದ ಸರ್ಕಾರ ನಮ್ಮ ಮನವಿಗೆ ಸ್ಪಂದಿಸುತ್ತಿಲ್ಲ ಎಂದು ಆರೋಪಿಸಿದರು.

ಕಾನೂನು ಸುವ್ಯವಸ್ಥೆ ಕಲ್ಪಿಸಲು ಡಿಜಿ ಐಜಿಯನ್ನು ಕರೆಸಿಕೊಂಡು ಸೂಚನೆ ನೀಡುವಂತೆ ರಾಜ್ಯಪಾಲರಿಗೆ ಮನವಿ ಮಾಡಿದ್ದೇವೆ. ಹಾಗೂ ಇಲ್ಲಿನ ಪರಿಸ್ಥಿತಿಯನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರುವಂತೆ ಮನವಿ ಮಾಡಿದ್ದೇವೆ. ಅವರು ಹಿರಿಯ ಅಧಿಕಾರಿಗಳನ್ನು ಕರೆಯಿಸಿಕೊಂಡು ಮಾತನಾಡುವುದಾಗಿ ಹೇಳಿದ್ದಾರೆ. ರಾಜ್ಯಪಾಲರು ರೀತಿಯ ಸೂಚನೆ ನೀಡುತ್ತಾರೆ. ನೋಡಿಕೊಂಡು ಜನರ ಬಳಿಗೆ ತೆಗೆದುಕೊಂಡು ಹೋಗುತ್ತೇವೆ ಎಂದು ಹೇಳಿದರು.

KA/SK/CTA-275/2021-2023. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಪಡೆವ ಕೈ ಶುದ್ಧವಾಗಿದ್ದರೆ ಕೊಡುವ ಕೈ ಕೊರತೆ ಕಾಣದು

## ಉಚಿತ ರಗ್, ಬೆಡ್‌ಶೀಟ್ ವಿತರಣಾ ಸಮಾರಂಭದಲ್ಲಿ ಸತ್ಯ ಸಾಯಿ ಸಮಿತಿ ಸಂಯೋಜಕಿ ಎಂ.ಯೋಗಿತಾ

ಹರಿಹರ, ಜು,12- ದಾನವನ್ನು ಪಡೆಯುವ ಕೈಗಳು ಪರಿಶುದ್ಧವಾಗಿದ್ದರೆ, ಕೊಡುವಂತಹ ಕೈಗಳಿಗೆ ಕೊರತೆ ಬರುವುದಿಲ್ಲ ಎಂದು ಸತ್ಯ ಸಾಯಿ ಸೇವಾ ಸಮಿತಿಯ ಮಹಿಳಾ ಸಂಯೋಜಕರಾದ ಎಂ. ಯೋಗಿತಾ ಅಭಿಪ್ರಾಯಿಸಿದರು.



ನಗರದ ಅಮರಾವತಿ ಬಳಿ ಇರುವ ಶ್ರೀ ಮರುಳಸಿದ್ಧೇಶ್ವರ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲಾ ಮಕ್ಕಳಿಗೆ ಸತ್ಯ ಸಾಯಿ ಸೇವಾ ಸಮಿತಿಯ ವತಿಯಿಂದ ಉಚಿತ ರಗ್, ಬೆಡ್‌ಶೀಟ್ ವಿತರಣಾ ಸಮಾರಂಭದಲ್ಲಿ ಅವರು ಮಾತನಾಡಿದರು.

ನಾವು ಮಾಡುವ ಪ್ರತಿಯೊಂದು ಸಮಾಜ ಮುಖಿ ಕಾರ್ಯಕ್ಕಾಗಿ ದಾನಿಗಳ ಸಹಕಾರ ಬಹುಮುಖ್ಯವಾಗಿ ಇರುತ್ತದೆ. ಆದರೆ ದಾನಿಗಳಿಂದ ಪಡೆಯುವ ಸಮಯದಲ್ಲಿ ಅವರ ಮನಸ್ಸಿಗೆ ತಟ್ಟುವಂತೆ ಸಮಸ್ಯೆಗಳ ವಿಚಾರ ಗಳನ್ನು ತಿಳಿಸಿದಾಗ ಅಗತ್ಯವಿರುವ ವಸ್ತುಗಳನ್ನು ಪೂರೈಸಿಕೊಳ್ಳಬಹುದು. ಒಳ್ಳೆಯ ಸಮಾಜಮುಖಿ ಕಾರ್ಯಗಳನ್ನು ನಿರ್ವಹಿಸುವ ಸಮಯದಲ್ಲಿ ದಾನಿಗಳಿಂದ ಪಡೆದು ಅದನ್ನು ಸರಿಯಾದ ರೀತಿಯಲ್ಲಿ ಸದ್ಬಳಕೆ ಮಾಡಿದಾಗ ಕೊಟ್ಟಂತಹ ದಾನಿಗಳಿಗೆ ಶ್ರೇಯಸ್ಸು ಮತ್ತು ಪಡೆದುಕೊಂಡು ಸಮಾಜಕ್ಕೆ ಒಳ್ಳೆಯದು ಮಾಡಿದವರಿಗೂ ಶ್ರೇಯಸ್ಸು ಲಭಿಸುತ್ತದೆ ಎಂದು ಹೇಳಿದರು.

ಸತ್ಯ ಸಾಯಿ ಸೇವಾ ಸಮಿತಿಯ ಕೃಷ್ಣಪ್ಪ ಮಾತನಾಡಿ, ಹಿಂದೆ ಇಲ್ಲಿನ ಮಕ್ಕಳಿಗೆ ಸತ್ಯ ಸಾಯಿ ಸೇವಾ ಸಮಿತಿಯ ವತಿಯಿಂದ ಪ್ರಸಾದ ವ್ಯವಸ್ಥೆ ಮಾಡಲಾದ ಸಂದರ್ಭದಲ್ಲಿ ಮಕ್ಕಳಿಗೆ ಬೆಡ್ ಶೀಟುಗಳ ಕೊರತೆ ಇರುವುದನ್ನು ಮನಗಂಡು ಈಗ ಮಕ್ಕಳಿಗೆ ಉಚಿತವಾಗಿ ಬೆಡ್ ಸೀಟುಗಳನ್ನು ವಿತರಣೆ ಮಾಡಲಾಗು ತ್ತಿದೆ. ಇದಕ್ಕೆ ಸಹಕರಿಸಿರುವ ಎಲ್ಲರಿಗೂ ಕೃತಜ್ಞತೆ ಸಲ್ಲಿಸುವುದಾಗಿ ಹೇಳಿದರು.

ರೈತ ಸಂಘದ ಮುಖಂಡ ಪರಮೇಶ್ವರಪ್ಪ ಮಾತನಾಡಿ, ಮಾನವನ ಸೇವೆ ದೇವರ ಸೇವೆ ಎಂದು ಭಾವಿಸಿ ಯಾರು ಶ್ರಮಿಸುತ್ತಾರೋ ಅವರನ್ನು ಸಮಾಜ ಗೌರವಿಸುತ್ತದೆ. ಪುಟ್ಟಪರ್ತಿ ಸಾಯಿಬಾಬಾ ಮಂದಿರದಲ್ಲಿ, ಭಕ್ತರು ಎಷ್ಟೇ ಸಿರಿವಂತರ ಸಾಲಿನಲ್ಲಿ ಇದ್ದರೂ ಎಲ್ಲರಂತೆ ಸೇವೆಯನ್ನು ಅರ್ಪಿಸಲು ಮುಂದಾಗುತ್ತಾರೆ. ಅಲ್ಲಿನ ವ್ಯವಸ್ಥೆ ನಮಗೆ ಒಳ್ಳೆಯ ಕೆಲಸವನ್ನು ಮಾಡ ಬೇಕೆಂದು ಪ್ರೇರಣೆ ನೀಡಿತು ಎಂದು ಹೇಳಿದರು.

ಶಂಕರ್ ಕುಲಕರ್ಣಿ ಮಾತನಾಡಿ, ಮನೆಯಲ್ಲಿ ಒಂದು ಮಗು ಅಂಗವಿಕಲವಾಗಿ ಜನಿಸಿದ ಸಮಯದಲ್ಲಿ ಅದರ ಬಗ್ಗೆ ತಾತ್ಸಾರ ಮಾಡುವುದು ಸರ್ವೇ ಸಾಮಾನ್ಯ, ಆದರೆ ಸಂಸ್ಥೆಯು ಅಂಗವಿಕಲರಿಗೆ ಆಸರೆಯಾಗಿರುವುದು ಶ್ಲಾಘನೀಯ ಕಾರ್ಯವಾಗಿದೆ ಎಂದು ಹೇಳಿದರು.

ಮರುಳಸಿದ್ಧೇಶ್ವರ ಬುದ್ಧಿಮಾಂದ್ಯ ಮಕ್ಕಳ ಶಾಲೆಯ ನಿವೃತ್ತ ಮುಖ್ಯ ಶಿಕ್ಷಕ ಮಹೇಶ್ವರಪ್ಪ ಮಾತನಾಡಿ, ನಮ್ಮ ಸಂಸ್ಥೆಯ ಮೂಲಕ ಸುಮಾರು 80 ಬುದ್ಧಿಮಾಂದ್ಯ ಮಕ್ಕಳಿಗೆ ಶಿಕ್ಷಣ, ವಸತಿ ಸೌಕರ್ಯ ಒದಗಿಸುವ ಕಾರ್ಯವನ್ನು ಮೂರು ದಶಕಗಳಿಂದ ಮಾಡುತ್ತಾ ಬಂದಿದ್ದು, ದಾನಿಗಳೂ ಸಹ ತಮ್ಮ ಶಕ್ತಿ ಅನುಸಾರ ದಾನವಾಗಿ ವಿವಿಧ ವಸ್ತುಗಳನ್ನು ನೀಡುತ್ತಾ ಬಂದಿದ್ದಾರೆ. ಅದನ್ನು ಸರಿಯಾದ ರೀತಿಯಲ್ಲಿ ಸದ್ಬಳಕೆ ಮಾಡಲಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಆರ್.ಬಿ. ಮಹಾಜನ್ ಶೆಟ್ಟಿ, ವೀರಣ್ಣ ಫೈನಾನ್ಸ್, ಮಹೋನ್, ಹರೀಶ್ ಪಾಟೀಲ್, ನಾಗರಾಜ್ ಪೂಜಾರ್, ಶಂಕರ್ ಕುಲಕರ್ಣಿ, ಅನುಸೂಯಮ್ಮ, ಪಾಪಮ್ಮ, ಗೀತಾ ಕಬಾಡೆ, ಶಶಿಕಲಾ, ಸುಜಾತಮ್ಮ, ಮಂಗಳಮ್ಮ, ಕವಿತಾ, ಶಿಕ್ಷಕಿ ಎಂ. ಶೋಭಾ, ಹಾಲಮ್ಮ ಬಿ.ಎಸ್. ಶೋಭಾ, ಎಂ.ಮಮತಾ, ಪ್ರೇಮ, ಅನಿತಾ, ರಾಖೇಶ್ ಇತರರು ಹಾಜರಿದ್ದರು.

# ಕಾಸಿಗಾಗಿ ಪೋಸ್ಟಿಂಗ್ ಗ್ಯಾರಂಟಿ ಹೆಚ್.ಡಿ.ಕೆ. ಗಂಭೀರ ಆರೋಪ



ಬೆಂಗಳೂರು, ಜು. 12 - ರಾಜ್ಯದ ಜನತೆಗೆ ಐದು ಅಂಶಗಳ ಗ್ಯಾರಂಟಿ ನೀಡಿದ್ದ ಕಾಂಗ್ರೆಸ್ ಪಕ್ಷವು, ಅಧಿಕಾರಕ್ಕೆ ಬಂದ ಮೇಲೆ ಕಾಸಿಗಾಗಿ ಪೋಸ್ಟಿಂಗ್ ಗ್ಯಾರಂಟಿ ನೀಡಲು ಹೊರಟಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಹೆಚ್.ಡಿ. ಕುಮಾರಸ್ವಾಮಿ ಅವರು ಗಂಭೀರ ಆರೋಪ ಮಾಡಿದ್ದಾರೆ.

ವಿಧಾನಸಭೆಯಲ್ಲಿ ಇಂದು ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಎಲ್ಲ ಇಲಾಖೆಗಳಲ್ಲಿ ವರ್ಗಾವಣೆಗೆ ದರ ನಿಗದಿ ಆಗಿದೆ. ಅದಕ್ಕೆ ಪೂರಕವಾಗಿ ಕೃಷಿಗಾಗಿ ಕೃಷಿ ಇಲಾಖೆಯಲ್ಲಿ ನಿಗದಿ ಮಾಡಿರುವ ದರಪಟ್ಟಿಯ ಕಾಗದ ಪತ್ರವನ್ನು ಪ್ರದರ್ಶಿಸಿದರು.

ಈ ಕಾಗದ ಪತ್ರವನ್ನು ಸಭಾಧ್ಯಕ್ಷರು ಹಾಗೂ ಮುಖ್ಯಮಂತ್ರಿ ಅವರಿಗೆ ಕಳಿಸಿಕೊಡುವುದಾಗಿ ಹೇಳಿದ ಅವರು, ಹಿಂದೆ ಇದೇ ಕಾಂಗ್ರೆಸ್ ಪಕ್ಷ ಹಿಂದಿನ ಬಿಜೆಪಿ ಸರ್ಕಾರದ ವಿರುದ್ಧ ವರ್ಗಾವಣೆಯ ರೇಟ್ ಕಾರ್ಡ್ ಹೊರಡಿಸಿತ್ತು ಎಂದರು.

ಇದೇ ವೇಳೆ ಕುಮಾರಸ್ವಾಮಿ ಅವರು ಹಿಂದಿನ ಬಿಜೆಪಿ ಸರ್ಕಾರದ ವಿರುದ್ಧ ಕಾಂಗ್ರೆಸ್ ಪಕ್ಷವು ಮಾಧ್ಯಮಗಳಲ್ಲಿ ನೀಡಿದ್ದ ಹಗರಣಗಳ ರೇಟ್ ಕಾರ್ಡ್ ಜಾಹೀರಾತನ್ನು ಪ್ರದರ್ಶಿಸಿದರು.

ಹಿಂದೆ ನೀವು ಬಿಜೆಪಿ ಸರ್ಕಾರದ ವಿರುದ್ಧ ರೇಟ್ ಕಾರ್ಡ್ ಹಾಕಿದ್ದೀರಿ. ಮುಂದೆ ನಿಮ್ಮ ವಿರುದ್ಧ ರೇಟ್ ಕಾರ್ಡ್ ಹೊರಡಿಸಬೇಕಾಗುತ್ತದೆ. ಅದರಿಂದ ಈಗಲೇ ಎಚ್ಚೆತ್ತುಕೊಂಡು ಸರಿ ಮಾಡಿಕೊಳ್ಳಿ ಎನ್ನುವ ಸದುದ್ದೇಶದಿಂದ ಹೇಳುತ್ತಿದ್ದೇನೆ ಎಂದು ಕುಮಾರಸ್ವಾಮಿ ಹೇಳಿದರು.

ನಿಮ್ಮ ಗ್ಯಾರಂಟಿಗಳನ್ನು ನಾನು ವಿರೋಧ ಮಾಡುವುದಿಲ್ಲ. ಸ್ವಾಗತ ಮಾಡುತ್ತೇನೆ, ನೀವು ನುಡಿದಂತೆ ನಡೆಯುತ್ತಿಲ್ಲ ಎಂದು ಹೇಳುತ್ತಿಲ್ಲ, ನಡೆಯಲು ಪ್ರಯತ್ನ ಮಾಡುತ್ತಿದ್ದೀರಿ. ಆದರೆ, ಈ ಗ್ಯಾರಂಟಿಗಳ ಸೈಡ್ ಎಫೆಕ್ಟ್ ಗಳ ಬಗ್ಗೆ ಏನು ಮಾಡಿದ್ದೀರಿ? ಗ್ಯಾರಂಟಿಗಳ ಬಾಧೆಗೆ ತುತ್ತಾದವರಿಗೆ ನೀವು ಏನಾದರೂ ಒಳ್ಳೆಯದು ಮಾಡಬೇಕಲ್ಲವೇ? ಎಂದು ಅವರು ಒತ್ತಾಯ ಮಾಡಿದರು.

ಗೃಹಜ್ಯೋತಿ ಅಂತ ಮಾಡಿದ್ದೀರಿ. ಆದರೆ, 200 ಯೂನಿಟ್ ಉಚಿತ ಎಂದವರು ಈಗ ಸರಾಸರಿ ಲೆಕ್ಕ ಹೇಳಿಕೊಂಡು ಜನರಿಗೆ ಹೊರೆ ಹಾಕುತ್ತಿದ್ದೀರಿ. ಅನಿಯಂತ್ರಿತ ದರಕ್ಕೆ ವಿದ್ಯುತ್ ಖರೀದಿ ಮಾಡಿ ಜನರಿಗೆ ಮೋಸ ಮಾಡಲಾಗಿದೆ. ಹಿಂದೆ ವಿದ್ಯುತ್ ಖರೀದಿ ಬಗ್ಗೆ ತನಿಖೆ ಮಾಡಲು ಸದನ ಸಮಿತಿ ರಚನೆ ಮಾಡಿದ್ದೀರಿ. ಆ ಸಮಿತಿ ಹಣೇಬರಹ ಏನಾಯಿತು ಎನ್ನುವುದು ಗೊತ್ತಿದೆ. ಇವತ್ತಿನ ಉಪ ಮುಖ್ಯಮಂತ್ರಿ ಅವರಿಗೆ ಎಲ್ಲವೂ ಚೆನ್ನಾಗಿ ಗೊತ್ತಿದೆ ಎಂದರು.

ಒಂದು ಕಡೆ ಮನಸೋ ಇಚ್ಛೆ ದುಡ್ಡು ಕೊಟ್ಟು ವಿದ್ಯುತ್ ಖರೀದಿ ಮಾಡಿ ಬೊಕ್ಕಸಕ್ಕೆ ನಷ್ಟ ಉಂಟು ಮಾಡುತ್ತೀರಿ. ಇನ್ನೊಂದು ಕಡೆ ಆ ನಷ್ಟ ತುಂಬಿಕೊಳ್ಳಲು ವಿದ್ಯುತ್ ದರ ಏರಿಕೆ ಮಾಡಿ ಜನರ ಮೇಲೆ ಹೊರೆ ಹೇರುತ್ತೀರಿ. ಇದ್ಯಾವ ನ್ಯಾಯ ಎಂದು ಅವರು ಪ್ರಶ್ನೆ ಮಾಡಿದರು.

ಸಿಬಿಐ ತನಿಖೆ ನಡೆದರೆ ಈ ಎಲ್ಲಾ ಅಕ್ರಮಗಳು ಆಚೆಗೆ ಬರುತ್ತವೆ. ಸಿಬಿಐ ತನಿಖೆಗೆ ವಹಿಸಿ ಎಂದು ಅವರು ಹೇಳಿದರು.

# ಅವಲಕ್ಕಿ ಮಿಲ್‌ನಲ್ಲಿ ಕಳ್ಳತನ: ಇಬ್ಬರ ಬಂಧನ

ದಾವಣಗೆರೆ, ಜು.12- ಮಂಡಕ್ಕಿ ಭಟ್ಟಿಯ ಅವಲಕ್ಕಿ ಮಿಲ್‌ನಲ್ಲಿ ನಡೆದ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ನಗರದ ಖಾದರ್ ಬಾಷ ಮತ್ತು ಮುಭಾರಕ್ ಬಂಧಿತರಾಗಿದ್ದು, ಇವರಿಂದ ಕಳ್ಳತನ ಮಾಡಲಾಗಿದ್ದ 86,030 ರೂ. ವಶಪಡಿಸಿಕೊಂಡಿದ್ದಾರೆ. ಮಂಡಕ್ಕಿ ಭಟ್ಟಿ 1ನೇ ಕ್ರಾಸ್‌ನಲ್ಲಿರುವ ಅನ್ವರ್ ಸಾಬ್ ಅವರ ಅವಲಕ್ಕಿ ಮಿಲ್‌ನಲ್ಲಿ ನಿನ್ನೆ ಕಳ್ಳತನವಾದ ಬಗ್ಗೆ ದೂರು ದಾಖಲಾಗಿತ್ತು.

ದೂರು ದಾಖಲಾದ 24 ಗಂಟೆಯೊಳಗೆ ಪ್ರಕರಣ ಬೇಧಿಸಿರುವ ಪಿಎಸ್‌ಐ ಶ್ರೀಮತಿ ಪುಷ್ಪಲತಾ ಮತ್ತು ಸಿಬ್ಬಂದಿಗಳಾದ ಮಂಜುನಾಥ ನಾಯ್ಕ, ತಿಪ್ಪೇಸ್ವಾಮಿ ಬಿ, ಕೃಷ್ಣ ಎನ್, ವೆಂಕಟೇಶ, ನಾಗರಾಜ ಡಿ.ಬಿ, ಹರೀಶ್ ಎಸ್.ಬಿ ಅವರುಗಳನ್ನೊಳಗೊಂಡ ತಂಡವು ಪ್ರಕರಣ ಪತ್ತೆ ಹಚ್ಚಿದ ತಂಡವನ್ನು ಎಸ್ಪಿ ಡಾ.ಅರುಣ್ ಕೆ. ಪ್ರಶಂಸಿಸಿದ್ದಾರೆ.

# ಬಿಜೆಪಿಯಿಂದ ದ್ವೇಷದ ರಾಜಕಾರಣ

(1ನೇ ಪುಟದಿಂದ) ಮೇಲಿನ ದ್ವೇಷದ ರಾಜಕಾರಣವನ್ನು ಕೈಬಿಡಬೇಕೆಂದು ಮಂಜಪ್ಪ ಮನವಿ ಮಾಡಿದರು.

ಮೌನ ಸತ್ಯಾಗ್ರಹದಲ್ಲಿ ಪಾಲಿಕೆ ಮೇಯರ್ ವಿನಾಯಕ ಪೈಲ್ವಾನ್, ಮುಖಂಡರಾದ ಮುದೇಗೌಡ್ರು ಗಿರೀಶ್, ಕೆ.ಜಿ. ಶಿವಕುಮಾರ್, ಎಸ್. ಮಲ್ಲಿಕಾರ್ಜುನ್, ಅಯೂಬ್ ಪೈಲ್ವಾನ್, ಎ. ನಾಗರಾಜ್, ಗಡಿಗುಡಾಳ್ ಮಂಜುನಾಥ್, ಅನಿತಾಬಾಯಿ ಮಾಲತೇಶರಾವ್ ಜಾಧವ್, ಎ.ಬಿ. ರಹೀಂಸಾಬ್ ಮತ್ತಿತರರು ಪಾಲ್ಗೊಂಡಿದ್ದರು.

# ಹಾಸ್ಟೆಲ್ ವಿದ್ಯಾರ್ಥಿನಿಯರನ್ನು ಮಕ್ಕಳಂತೆ ನೋಡಿಕೊಳ್ಳಬೇಕು



ಚನ್ನಗಿರಿ, ಜು. 12- ನಮ್ಮ ಮನೆಯಂತೆ ಹಾಸ್ಟೆಲ್ಲನ್ನು, ವಿದ್ಯಾರ್ಥಿನಿಯರನ್ನು ಮಕ್ಕಳಂತೆ ನೋಡಿಕೊಳ್ಳಬೇಕು. ಗುಣಮಟ್ಟದ ಆಹಾರ ನೀಡುವ ಜೊತೆಗೆ ಸರ್ಕಾರ ನೀಡುವ ಎಲ್ಲಾ ಸೌಲಭ್ಯಗಳು ತಲುಪಬೇಕೆಂದು ಶಾಸಕ ಬಸವರಾಜು ಶಿವಗಂಗಾ ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ ನೀಡಿದರು.

**ಶಾಸಕ ಬಸವರಾಜು**

ಪಟ್ಟಣದ ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯಕ್ಕೆ ಭೇಟಿ ನೀಡಿ ಪರಿಶೀಲಿಸಿ, ವಿದ್ಯಾರ್ಥಿನಿಯರೊಂದಿಗೆ ಹಾಸ್ಟೆಲ್ ವ್ಯವಸ್ಥೆ ಬಗ್ಗೆ ಚರ್ಚಿಸಿದರು. ಗುಣ ಮಟ್ಟದ ಆಹಾರ ವಿತರಣೆ ಮತ್ತು ಮಾಡುವ ಕೆಲಸದಲ್ಲಿ ಲೋಪ ಕಂಡು ಬಂದರೆ ಕ್ರಮ ಜರುಗಿಸುವುದಾಗಿ ಎಚ್ಚರಿಸಿದರು. ಅಡುಗೆಗೆ ಬಳಸುವ ಆಹಾರ ಪದಾರ್ಥಗಳ ಗುಣಮಟ್ಟವನ್ನು ಪರೀಕ್ಷಿಸಬೇಕು. ಆಹಾರದಲ್ಲಿ ಯಾವುದೇ ವ್ಯತ್ಯಾಸ ಕಂಡು ಬಂದರೂ ಅದಕ್ಕೆ ಸಂಬಂಧಪಟ್ಟ ಸಿಬ್ಬಂದಿ ಜವಾಬ್ದಾರರು. ಓದುವ ಬಡ ಮಕ್ಕಳಿಗೆ ಯಾವುದೇ ಸಮಸ್ಯೆಯಾಗದಂತೆ ನೋಡಿಕೊಳ್ಳಬೇಕೆಂದು ಸೂಚಿಸಿದರು. ಊಟದ ಸಂದರ್ಭದಲ್ಲಿ ವಾರ್ಡನ್ ಕಡ್ಡಾಯವಾಗಿ ಹಾಜರಿರಬೇಕು. ಶುದ್ಧ ಕುಡಿಯುವ ನೀರನ್ನು ಪೂರೈಸಬೇಕು. ಶೌಚಾಲಯ ಸೇರಿದಂತೆ ಅಡುಗೆ ಮನೆಯನ್ನೂ ಸ್ವಚ್ಛವಾಗಿಟ್ಟುಕೊಳ್ಳಬೇಕು. ಮನೆ ಮಕ್ಕಳಂತೆ ಹಾಸ್ಟೆಲ್ ವಿದ್ಯಾರ್ಥಿನಿ ಯರನ್ನು ನೋಡಿಕೊಳ್ಳಬೇಕೆಂದರು.

# ಜಿಲ್ಲಾ ಕಸಾಪದಿಂದ ಎಸ್ಸೆಸ್ಸೆಂಗೆ ಸನ್ಮಾನ



ದಾವಣಗೆರೆ, ಜು. 12 - ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಅವರ ನೇತೃತ್ವದಲ್ಲಿ ಅವರ ನಿವಾಸದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಅಭಿನಂದಿಸಲಾಯಿತು.

ಇದೇ ಸಂದರ್ಭದಲ್ಲಿ ಮಾತನಾಡಿದ ವಾಮದೇವಪ್ಪ, ಈ ಹಿಂದೆ ನಿಗದಿಯಾಗಿದ್ದ ಮೂರನೇ ವಿಶ್ವ ಕನ್ನಡ ಸಮ್ಮೇಳನವನ್ನು ದಾವಣಗೆರೆ ನಗರದಲ್ಲಿಯೇ ನಡೆಸುವಂತಾ ಗಬೇಕೆಂದು ಕೋರಿಕೆಯನ್ನು ಮಂಡಿಸಿದಾಗ, ಸಚಿವರು ಸಹಮತ ಸೂಚಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷರು, ಎಸ್.ಎಸ್.ವಿ ಸಂಘದ ಅಧ್ಯಕ್ಷ ಎಚ್ .ಆರ್. ಬಸವರಾಜಪ್ಪ, ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಬಿ. ದಿಳ್ಯಪ್ಪ, ಜಿಲ್ಲಾ ಕಸಾಪದ ನಿಕಟ ಪೂರ್ವ ಅಧ್ಯಕ್ಷ ಡಾ. ಎಚ್.ಎಸ್. ಮಂಜುನಾಥ್ ಕುರ್ಕಿ, ಸಾಹಿತ್ಯ ಪರಿಷತ್‌ನ ಹಿರಿಯ ಸದಸ್ಯರುಗಳಾದ ವೈ. ವಸಂತಪ್ಪ, ಎಸ್.ಆರ್ ಶಿರಗಂಬಿ, ಜನತಾ ಬಜಾರ್ ಅಧ್ಯಕ್ಷ ಜಿ.ಡಿ.ಗುರುಸ್ವಾಮಿ, ಕೆ.ಸಿ. ಲಿಂಗರಾಜ್ ಆನೆಕೊಂಡ ಉಪಸ್ಥಿತರಿದ್ದರು.

# ಸಂಚಾರಿ ನಿಯಮಗಳನ್ನು ಪಾಲಿಸಲು ಕರೆ



ದಾವಣಗೆರೆ, ಜು. 12- ವಾಹನಗಳು ಯಾವುದೇ ಇರಲಿ, ಚಲಾಯಿಸಲು ಅನುಮತಿ ಕಡ್ಡಾಯವಾಗಿದ್ದು, ಪ್ರತಿಯೊಬ್ಬರೂ ಸಂಚಾರಿ ನಿಯಮಗಳನ್ನು ಪಾಲಿಸ ಬೇಕು ಎಂದು ಸಂಚಾರಿ ಪೊಲೀಸ್ ವೃತ್ತ ವಿಭಾಗದ ಸಹಾಯಕ ಸಬ್‌ಇನ್ಸ್‌ಪೆಕ್ಟರ್ ಜಯಪ್ಪ ತಿಳಿಸಿದರು.

ನಗರದ ಗಂಗೂಬಾಯಿ ಹಾನಗಲ್ ಪಾರ್ಕ್ (ಟ್ರಾಫಿಕ್ ಪಾರ್ಕ್)ನಲ್ಲಿ ದಿ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್, ಕರ್ನಾಟಕ ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆ, ಜಿಲ್ಲಾ ಪೊಲೀಸ್ ಇಲಾಖೆ ಸಹಯೋಗದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್, ಕಬ್ಸ್, ಬುಲ್ ಬುಲ್ಸ್ ಮಕ್ಕಳಿಗೆ ಆಯೋಜಿಸಿದ್ದ ಸಂಚಾರಿ ನಿಯಮಗಳ ಜಾಗೃತಿ, ಅರಿವು ಕಾರ್ಯಕ್ರಮದಲ್ಲಿ ಅವರು ಮಾಹಿತಿ ನೀಡಿದರು.

ವಾಹನಗಳಲ್ಲಿ 3 ಜನರು ತೆರಳಬಾರದು, ಹೆಲ್ಮೆಟ್ ಇಲ್ಲದೇ ವಾಹನ ಚಲಾಯಿಸಬಾರದು. ಅಪ್ರಾಪ್ತರಾದ ನೀವುಗಳು 18 ವರ್ಷವಾದ ನಂತರ ಅನುಮತಿ ಪತ್ರವನ್ನು ಪಡೆದ ನಂತರ ವಾಹನಗಳನ್ನು ಚಲಾಯಿಸಬೇಕು.

ಎಲ್ಲೆಂದರಲ್ಲಿ ಅಡ್ಡಾದಿಡ್ಡಿಯಾಗಿ ವಾಹನಗಳನ್ನು ನಿಲ್ಲಿಸಬಾರದು, ನಿಗದಿತ ಸ್ಥಳಗಳಲ್ಲಿ ಮಾತ್ರ ವಾಹನಗಳನ್ನು ಪಾರ್ಕಿಂಗ್ ಮಾಡಬೇಕು ಸೇರಿದಂತೆ ಹಲವಾರು ಸಂಚಾರಿ ನಿಯಮಗಳ ಕುರಿತು ಮಾಹಿತಿ

**ಎಎಸ್‌ಐ ಜಯಪ್ಪ**

ನೀಡಿದ ಅವರು, ಏನೇ ತಪ್ಪುಗಳು ಕಂಡುಬಂದಲ್ಲಿ ಇಲಾಖೆಯಿಂದ ದಂಡ ವಿಧಿಸಲಾಗುವುದು. ಇಲ್ಲದೇ ಇದ್ದರೆ ಅವರ ಹೆಸರಿಗೆ ದಂಡದ ನೋಟೀಸ್ ತಲುಪಿಸಲಾಗುವುದು ಎಂದರು.

ಸಂಚಾರಿ ಪೊಲೀಸ್ ಠಾಣೆಯ ಪೊಲೀಸ್ ಅಧಿಕಾರಿ ಬಸವರಾಜ್, ಸ್ಕೌಟ್ಸ್ ಮತ್ತು ಗೈಡ್ಸ್ ಕಬ್ಸ್, ಬುಲ್ ಬುಲ್ಸ್ ಮಕ್ಕಳಿಗೆ ಪಾರ್ಕ್‌ನಲ್ಲಿರುವ ಟ್ರಾಫಿಕ್ ರೂಲ್ಸ್ ಫಲಕಗಳನ್ನು ತೋರಿಸಿ, ಅವುಗಳ ಬಗ್ಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಸ್ಕೌಟ್ ಮಾಸ್ಟರ್ ಟಿ. ಎಂ.ರವೀಂದ್ರ ಸ್ವಾಮಿ, ಶಶಿಕುಮಾರ್, ಗೈಡ್ ಕ್ಯಾಪ್ಟನ್ ಅನಿತಾ ಹಾಗೂ ಎಚ್.ಎಂ. ರಜನಿ, ಪೋಷಕರು ಹಾಗೂ ಸೆಂಟ್ ಫಾಲ್ಸ್ ಹೈಸ್ಕೂಲ್ ಗೈಡ್ಸ್ ಹಾಗೂ ಸೆಂಟ್ ಫಾಲ್ಸ್ ಸೆಂಟ್ರಲ್ ಸ್ಕೂಲ್ ಗೈಡ್ಸ್, ಶ್ರೀ ತರಳಬಾಳು ಶಾಲೆಯ ಗೈಡ್ಸ್, ಸ್ಕೌಟ್ಸ್, ಕಬ್ಸ್, ಬುಲ್ ಬುಲ್ಸ್, ಮಾಗನೂರು ಬಸಪ್ಪ ಸ್ಕೌಟ್ಸ್, ಬಾಪೂಜಿ ಓಪನ್ ಸ್ಕೌಟ್ ಟ್ರೂಪ್, ಮದರ್ ತೆರೇಸಾ ಗೈಡ್ ಕಂಪನಿ ಮಕ್ಕಳು ಭಾಗವಹಿಸಿದ್ದರು.

# ಎಲ್‌ಕೆಜಿಗೆ ಲಕ್ಷ, ಎಂಬಿಎ ಶುಲ್ಕಕ್ಕೆ ಅಲಕ್ಷೆ

(1ನೇ ಪುಟದಿಂದ) ನೆರವು ಹಾಗೂ ಹೂಡಿಕೆ ಸಿಗುತ್ತಿದೆ. ಸರ್ಕಾರಿ ಉನ್ನತ ಶಿಕ್ಷಣ ಸಂಸ್ಥೆಗಳ ಉತ್ತಮ ದಿನಗಳು ಮುಗಿಯುತ್ತಿವೆ ಎಂದು ಸುಭಾಸ್ ಕಳವಳ ವ್ಯಕ್ತಪಡಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಲೆಕ್ಕಪರಿಶೋಧಕ ಅಥಣಿ ವೀರಣ್ಣ, ಈ ಹಿಂದೆ ಕೈಗಾರಿಕೆಗಳನ್ನು ನಿಯಂತ್ರಿಸುವ ಕಾನೂನುಗಳಿದ್ದವು. ಇದರಿಂದಾಗಿ ಕೆಲವೇ ಕಂಪನಿಗಳಿಗೆ ಉತ್ಪಾದನಾ ಅವಕಾಶ ಸಿಗುತ್ತಿತ್ತು. ಈಗ ಉದಾರೀಕರಣ, ಖಾಸಗೀಕರಣ ಹಾಗೂ ಜಾಗತೀಕರಣವಾಗಿ ಹೆಚ್ಚು ಉದ್ಯಮಗಳಿಗೆ ಅವಕಾಶ ಸಿಗುತ್ತಿದೆ ಎಂದರು.

ದಾವಣಗೆರೆ ವಿ.ವಿ. ಕುಲಪತಿ ಪ್ರೊ. ಬಿ.ಡಿ. ಕುಂಬಾರ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದ ವೇದಿಕೆಯಲ್ಲಿ ಕೆ.ಎಂ.ಎಫ್. ಆಡಳಿತ ವಿಭಾಗದ ನಿರ್ದೇಶಕ ಬಿ.ಪಿ. ಸುರೇಶ್, ಐ.ಎಸ್.ಇ.ಸಿ. ಸಂಸ್ಥೆಯ ಕೆ.ಬಿ.ರಾಮಪ್ಪ, ಪರೀಕ್ಷಾಂಗ ಕುಲಸಚಿವ ಕೆ. ಶಿವಶಂಕರ್, ನಿರ್ವಹಣಾ ಶಾಸ್ತ್ರ ವಿಭಾಗದ ಮುಖ್ಯಸ್ಥ ಜೆ.ಕೆ. ರಾಜು, ಕಾರ್ಯಕ್ರಮದ ಸಂಯೋಜಕ ಆರ್. ಶಿಶಿಧರ್ ಉಪಸ್ಥಿತರಿದ್ದರು.

ಮನೋಜ್ ಹಾಗೂ ಭರತ್ ಪ್ರಾರ್ಥಿಸಿದರು. ರಮೇಶ್ ಚಂದ್ರಹಾಸ್ ಸ್ವಾಗತಿಸಿದರು.

### ಉಪನ್ಯಾಸಕರೂ ಆನ್‌ಲೈನ್ ಪಾಠ ಬಳಸಿಕೊಳ್ಳಿ

ಆನ್‌ಲೈನ್‌ನಲ್ಲಿ ಸಿಗುವ ಉಚಿತ ಪಾಠಗಳು ಸಾಕಷ್ಟು ಗುಣಮಟ್ಟದ್ದಾಗಿವೆ. ಇವುಗಳನ್ನು ಉಪನ್ಯಾಸಕರು ಬಳಸಿಕೊಳ್ಳಬೇಕು. ಅತ್ಯುತ್ತಮವಾಗಿರುವಂಥದ್ದನ್ನು ತಾವೇ ವಿದ್ಯಾರ್ಥಿಗಳಿಗೆ ತೋರಿಸಬೇಕು ಎಂದು ವಿಶ್ರಾಂತ ಕುಲಪತಿ ಪ್ರೊ. ಎಂ.ಎಸ್. ಸುಭಾಸ್ ಹೇಳಿದರು.

ವಿದ್ಯಾರ್ಥಿಗಳು ಈಗಾಗಲೇ ಅತ್ಯುತ್ತಮ ಆನ್‌ಲೈನ್ ಶಿಕ್ಷಣಕ್ಕೆ ತೆರೆದುಕೊಂಡಿದ್ದಾರೆ. ಉಪನ್ಯಾಸಕರೂ ಸಹ ಇದರಿಂದ ಕಲಿಯಬೇಕು ಹಾಗೂ ಅಳವಡಿಸಿಕೊಳ್ಳಬೇಕು. ಇಲ್ಲವಾದರೆ ವಿದ್ಯಾರ್ಥಿಗಳು ಉಪನ್ಯಾಸಕರ ಬೆನ್ನ ಹಿಂದೆ ನಗುವ ಪರಿಸ್ಥಿತಿ ಬರುತ್ತದೆ ಎಂದು ಎಚ್ಚರಿಸಿದರು.

# ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಡಿಸಿಗೆ ಪತ್ರ

(1ನೇ ಪುಟದಿಂದ) ಪತ್ರ ಬರೆದರೂ ಫಲ ನೀಡದ್ದರಿಂದ ಪೌರಾಯುಕ್ತ ಐಗೂರು ಬಸವರಾಜ್ ಸದರಿ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೋರಿ, ಜೂ.8 ರಂದು ಪತ್ರ ಬರೆದಿದ್ದಾರೆಂದು ತಿಳಿದು ಬಂದಿದೆ.

ಹಲವೆಡೆ ನೆಲದೊಳಗೆ ಯುಜಿಡಿ ಪೈಪ್ ಲೈನ್ ಪಕ್ಕದಲ್ಲೇ ಜಲಸಿರಿ ಪೈಪ್‌ಲೈನ್ ಅಳವಡಿಸಲಾಗಿದೆ, ವಿವಿಧ ವಾರ್ಡುಗಳಲ್ಲಿ ಚರಂಡಿಗಳಲ್ಲೆ ಜಲಸಿರಿ ನೀರಿನ ಪೈಪ್ ಅಳವಡಿಸಲಾಗಿದೆ.

ಕಾಲ, ಕ್ರಮೇಣ ಯುಜಿಡಿ ಅಥವಾ ಚರಂಡಿಯ ತ್ಯಾಜ್ಯ ನೀರು ಜಲಸಿರಿ ಪೈಪ್‌ನೊಳಗೆ ಹರಿದರೆ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಲಿದೆ. ಆಗಿರುವ ಲೋಪಗಳನ್ನು ಸರಿಪಡಿಸಬೇಕು. ನಿರ್ಲಕ್ಷ್ಯವಹಿಸಿದ ಸಂಬಂಧಿತ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮಕೈಗೊಳ್ಳಬೇಕೆಂದು ಪಿ.ಜೆ.ಮಹಾಂತೇಶ್ ಡಿಸಿಯವರಿಗೆ ನೀಡಿದ ದೂರಿನಲ್ಲಿ ಆಗ್ರಹಿಸಿದ್ದರು.

**ಕಾಲ ಹರಣ:** ದೂರು ನೀಡಿದ ಆರು ತಿಂಗಳಾದರೂ ಜಿಲ್ಲಾಡಳಿತ ಕಾಲ ಹರಣ ಮಾಡಿದೆ. ಮೇಲ್ನೋಟಕ್ಕೆ ಕಾಣುವ ಕಳಪೆ ಹಾಗೂ ನಿರ್ಲಕ್ಷ್ಯದ ಕಾಮಗಾರಿ ಕೈಗೊಂಡವರ ವಿರುದ್ಧ ಕಾನೂನು ಕ್ರಮ ಕೈಗೊಂಡಿಲ್ಲ. ರಾಜ್ಯದ ವಿವಿಧೆಡೆ ಕಲುಷಿತ ನೀರನ್ನು ಸೇವಿಸಿ ಹಲವರು ಪ್ರಾಣ ಕಳೆದುಕೊಂಡಿದ್ದಾರೆ, ಹಲವರು ಆಸ್ಪತ್ರೆಗೆ ದಾಖಲಾಗಿದ್ದಾರೆ. ಡಿಸಿಯವರ ಅಹವಾಲು ಸ್ವೀಕಾರ ಸಭೆ ಕಾಟಾಚಾರದ್ದಾಗಿದೆ ಎಂದು ಮಹಾಂತೇಶ್ ಹೇಳಿಕೆಯಲ್ಲಿ ಆರೋಪಿಸಿದ್ದಾರೆ.

**ನೀರಿನ ಬಿಲ್ ಕಟ್ಟಬೇಡಿ:** ಸರ್ಕಾರದ ಕೋಟ್ಯಾಂತರ ರೂ. ಅನುದಾನದಲ್ಲಿ ಸರ್ಕಾರದ ಏಜೆನ್ಸಿಗಳಿಂದಲೇ ನಡೆಯುತ್ತಿರುವ ಜಲಸಿರಿ ಕಾಮಗಾರಿ ನ್ಯೂನತೆಗಳಿಂದ ಕೂಡಿದೆ. ನಗರದ ಜನರ ಜೀವದ ಜೊತೆಗೆ ಚೆಲ್ಲಾಟವಾಡಲಾಗುತ್ತಿದೆ. ಹೇಗೋ ಕಾಮಗಾರಿ ಮುಗಿಸಿ, ಜಾಗ ಖಾಲಿ ಮಾಡುವ ಧಾವಂತದಲ್ಲಿ ಜಲಸಿರಿ ಯೋಜನೆ ಅಧಿಕಾರಿಗಳಿದ್ದಾರೆ. ನ್ಯೂನತೆಗಳನ್ನು ಸರಿಪಡಿಸುವವರೆಗೂ ನಗರದ ಜನತೆ ಜಲಸಿರಿ ನೀರಿನ ಬಿಲ್ ಶುಲ್ಕ ಪಾವತಿ ಮಾಡಬಾರದೆಂದು ಅವರು ಹೇಳಿಕೆಯಲ್ಲಿ ಮನವಿ ಮಾಡಿದ್ದಾರೆ.

# ಟೊಮ್ಯಾಟೋ ಪೂರೈಕೆಗೆ ಕೇಂದ್ರದ ಮಧ್ಯ ಪ್ರವೇಶ

(1ನೇ ಪುಟದಿಂದ) ಬೆಲೆಗಳ ಇಳಿಕೆಯಾಗಲಿದೆ ಎಂದು ಸಚಿವಾಲಯ ತಿಳಿಸಿದೆ.

ಟೊಮ್ಯಾಟೋ ಅನ್ನು ದೇಶದ ಎಲ್ಲಾ ರಾಜ್ಯಗಳಲ್ಲೂ ಬೇರೆ ಬೇರೆ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ಆದರೆ, ದಕ್ಷಿಣ ಮತ್ತು ಪೂರ್ವದ ಪ್ರಾಂತ್ಯಗಳಿಂದ ದೇಶದ ಒಟ್ಟು ಬೇಡಿಕೆಯ ಶೇ.56 – 58ರಷ್ಟನ್ನು ಪೂರೈಸಲಾಗುತ್ತದೆ. ಡಿಸೆಂಬರ್‌ನಿಂದ ಫೆಬ್ರವರಿ ಅವಧಿಯಲ್ಲಿ ಟೊಮ್ಯಾಟೋ ಪೂರೈಕೆ ಪ್ರಮಾಣ ಹೆಚ್ಚಾಗಿರುತ್ತದೆ.

ಟೊಮ್ಯಾಟೋ ಬೆಳೆಯುವ ಸಮಯ ಹಾಗೂ ಬೆಳೆಯುವ ಪ್ರಮಾಣ ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿದೆ.

ಹೀಗಾಗಿ ಪೂರೈಕೆಯಲ್ಲಿ ಕಾಲ ಕಾಲಕ್ಕೆ ಏರಿಳಿತವಾಗುತ್ತಿದೆ. ಹವಾಮಾನ ವೈಪರೀತ್ಯದ ಕಾರಣದಿಂದಲೂ ಟೊಮ್ಯಾಟೋ ಪೂರೈಕೆಗೆ ಅಡ್ಡಿಯಾಗಿ ಬೆಲೆಯಲ್ಲಿ ಏರಿಳಿತವಾಗುತ್ತದೆ.

# ಮುಸ್ಲಿಂ ಬಾಂಧವ್ಯ ವೇದಿಕೆ ಅಧ್ಯಕ್ಷರಾಗಿ ಅನೀಸ್ ಪಾಷಾ

ದಾವಣಗೆರೆ, ಜು. 12- ಸಾಮಾಜಿಕ ಬಾಂಧವ್ಯದ ಆಶಯ ಹೊಂದಿರುವ ಮುಸ್ಲಿಂ ಸಮುದಾಯದ ಧರ್ಮ ಗುರುಗಳು, ಲೇಖಕರು, ಚಿಂತಕರು, ಸಾಹಿತಿಗಳು ಮತ್ತು ಸಾಧಕರನ್ನು ಒಳಗೊಂಡ 'ಮುಸ್ಲಿಂ ಬಾಂಧವ್ಯ ವೇದಿಕೆ'ಯ ವಾರ್ಷಿಕ ಪದ ಪ್ರದಾನ ಸಮಾರಂಭ ನಗರದ ಬಾಪೂಜಿ ಸಭಾ ಭವನದಲ್ಲಿ ನಡೆಯಿತು.



ವೇದಿಕೆಯ ನೂತನ ಪದಾಧಿಕಾರಿಗಳಿಗೆ ನಿವೃತ್ತ ನ್ಯಾಯಾಧೀಶ ವಿಜಯಪುರದ ನಬಿರಸೂಲ್ ಮಹಮದಾಪುರ ಪದಪ್ರದಾನಗೈದರು. ದಾವಣಗೆರೆಯ ನ್ಯಾಯವಾದಿ ಅನೀಸ್ ಪಾಷಾ ಅಧ್ಯಕ್ಷರಾಗಿ, ಉಡುಪಿಯ ಮುಷ್ತಾಕ್ ಹೆನ್ನಾಬೈಲ್ ಕಾರ್ಯದರ್ಶಿಯಾಗಿ ಆಯ್ಕೆಯಾದರು.

ಈ ವೇಳೆ ಮಾತನಾಡಿದ ನಬಿರಸೂಲ್ ಮಹಮದಾಪುರ ಅವರು, ಸೌಹಾರ್ದ ಸಮಾಜ ನಿರ್ಮಾಣಕ್ಕಾಗಿ ಬಹಳಷ್ಟು ವೇದಿಕೆ-ಸಂಘಟನೆಗಳನ್ನು ರಾಜ್ಯ ಕಂಡಿದೆ. ಆದರೆ ಈ ವೇದಿಕೆ ಸಮುದಾಯದ ಅತ್ಯಂತ ಪ್ರಜ್ಞಾವಂತರು ಮತ್ತು ಪ್ರಬುದ್ಧ ಸಾಧಕರಿಂದ ಕೂಡಿದ ಸಂಘಟನೆಯಾಗಿದೆ ಎಂದರು.

ಸಮುದಾಯದ ಸರ್ವಕ್ಷೇತ್ರದ ಆಯ್ದ ಸಾಧಕರನ್ನು ಹೊಂದಿರುವ ರಾಜ್ಯದ ಬೇರೆ ಬೇರೆ ಭಾಗದವರಿಂದ ಕೂಡಿದ ಮುಸ್ಲಿಂ ಸಮುದಾಯದ ಮೊದಲ ಸಂಘಟನೆ ಇದಾಗಿದೆ ಎಂದು ಹೇಳಿದರು.

ವೇದಿಕೆಯ ನೂತನ ಅಧ್ಯಕ್ಷ ಅನಿಸ್ ಪಾಷಾ ಮಾತನಾಡಿ, ಯಾವುದೇ ಒಂದು ಸಮುದಾಯ ಮುಂದುವರೆಯಬೇಕಾದರೆ, ಆ ಸಮುದಾಯದ ನಾಯಕರ ಮುಂದಾಳತ್ವದ ಅವಶ್ಯಕತೆ ಇದೆ. ಆದರೆ ಮುಸ್ಲಿಂ ಸಮುದಾಯ ದಲ್ಲಿ ಈಗ ನಾಯಕತ್ವದ ಕೊರತೆ ಇದೆ. ಈ ಸಂಘಟನೆಯು ಮುಂದಿನ ದಿನಗಳಲ್ಲಿ ಪ್ರತಿಯೊಂದು ಸಮುದಾಯದ ಮಧ್ಯ ಬಾಂಧವ್ಯದ ಕೊಂಡಿಯನ್ನು ಗಟ್ಟಿಗೊಳಿಸುವ ಕೆಲಸ ಮಾಡುತ್ತದೆ ಎಂದು ಹೇಳಿದರು.

2024-25 ನೇ ಸಾಲಿಗೆ ಆಯ್ಕೆಯಾದ ಕಾರ್ಯದರ್ಶಿ ಡಾ. ಹಕೀಮ್ ತೀರ್ಥಹಳ್ಳಿ ನೂತನ ಅಧ್ಯಕ್ಷರ ಪರಿಚಯ ಮಾಡಿದರು. ಸದಸ್ಯ ಅಸ್ಲಮ್ ಹೈಕಾಡಿ ನೂತನ ಕಾರ್ಯದರ್ಶಿಯವರ ಪರಿಚಯ ಮಾಡಿದರು. ಕಾರ್ಯದರ್ಶಿ ಲೇಖಕ ಮುಷ್ತಾಕ್ ಹೆನ್ನಾಬೈಲ್ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ.ಸೈಯದ್ ನಿಜಾಮುದ್ದೀನ್ ಕಾರ್ಯಕ್ರಮ ನಿರೂಪಿಸಿದರು. ಅಬ್ದುಲ್ ರೌಫ್ ವಂದಿಸಿದರು.

ವೇದಿಕೆಯಲ್ಲಿ ಧರ್ಮಗುರುಗಳು ಹಾಗೂ ವೇದಿಕೆಯ ಗೌರವಾಧ್ಯಕ್ಷರಾದ ಮಂಗಳೂರಿನ ಎಸ್. ಬಿ. ದಾರಿಮಿ, 2024-25ರ ಸಾಲಿಗೆ ಆಯ್ಕೆಯಾದ ಅಧ್ಯಕ್ಷ ಹಾವೇರಿಯ ಹಿರಿಯ ಕವಿ ಖಾದರ್ ಮೊಹಿಯುದ್ದೀನ್ ಉಪಸ್ಥಿತರಿದ್ದರು.

ಕಾರ್ಯಕ್ರಮದ ನಂತರ ಸೌಹಾರ್ದ ಕಾರ್ಯಕ್ರಮದ ಭಾಗವಾಗಿ ಆವರಗೊಳ್ಳ ಪುರವರ್ಗ ಹಿರೇಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿಗಳನ್ನು ಶ್ರೀಮಠದಲ್ಲಿ ಮುಸ್ಲಿಂ ಬಾಂಧವ್ಯ ವೇದಿಕೆಯ ನಿಯೋಗ ಭೇಟಿಯಾಗಿ ಮಾತುಕತೆ ನಡೆಸಿತು.

# ಹರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಅಧ್ಯಕ್ಷರಾಗಿ ಬಿ.ಸಿ. ಉಮಾಪತಿ ಅವಿರೋಧ ಆಯ್ಕೆ



ದಾವಣಗೆರೆ, ಜು. 12- ನಗರದ ಹರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ಸ್ಥಾನಕ್ಕೆ ಬಿ.ಸಿ. ಉಮಾಪತಿ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಎಂ. ದೊಡ್ಡಪ್ಪ ಶನಿವಾರ ಅವಿರೋಧವಾಗಿ ಆಯ್ಕೆಯಾಗಿರುವುದಾಗಿ ಚುನಾವಣಾಧಿಕಾರಿ ಆರ್.ಶಿವಪ್ಪ ಘೋಷಿಸಿದ್ದಾರೆ.

ಈ ಸಂದರ್ಭದಲ್ಲಿ ಅವಿರೋಧವಾಗಿ ಹೊಸ ಆಡಳಿತ ಮಂಡಳಿಗೆ ನಿರ್ದೇಶಕರಾಗಿ ಆಯ್ಕೆಯಾಗಿದ್ದ ಮಲ್ಲನಗೌಡ ಎಸ್, ಅಂದನೂರು ಮುರುಗೇಶಪ್ಪ, ಅವ್ವಣ್ಣಪ್ಪ ಹೆಚ್ ಎಸ್, ಹಾಲೇಶ್ ಅಂಗಡಿ, ಚೈತನ್ಯಕುಮಾರ ಸಿ.ಬಿ.ಸ್ವಾಮಿ ಎಸ್.ಎಂ (ವಾಣಿ ಶಿವಣ್ಣ), ಕೈದಾಳೆ ಶಿವಶಂಕರ್, ನಾಗರಾಜ ಹೆಚ್ ಎಂ, ಹೆಚ್ ಎಸ್. ಯೋಗೇಶ್, ಅನಿತಾ ಸಿ.ಪಿ, ಪುಷ್ಪಾವತಿ ಹೆಚ್.ವಿ, ಕಾರ್ಯದರ್ಶಿ ಚನ್ನಮಲ್ಲಿಕಾರ್ಜುನ ಕೆ. ಸಿಬ್ಬಂದಿ ಮಲ್ಲಿಕಾರ್ಜುನ ಎಂ, ಗುರುಪ್ರಸಾದ ವೈ. ಹಾಜರಿದ್ದರು.

# ಕರ್ತವ್ಯದಲ್ಲಿ ವಿಶೇಷ ಸಾಧನೆಗೈದ ನೈರುತ್ಯ ರೈಲ್ವೆ ಸಿಬ್ಬಂದಿಗಳಿಗೆ ಪ್ರಶಸ್ತಿ ಪ್ರದಾನ

ದಾವಣಗೆರೆ, ಜು. 12 - ರೈಲ್ವೆಯ ವಿವಿಧ ವಿಭಾಗಗಳ ಸಿಬ್ಬಂದಿಗಳು ತಮ್ಮ ಕರ್ತವ್ಯ ಸಮಯದಲ್ಲಿ ಕರ್ತವ್ಯ ಪ್ರಜ್ಞೆ ಮತ್ತು ವೃತ್ತಿಪರತೆಯಲ್ಲಿ ವಿಶೇಷ ಸಾಧನೆಗೈದ ಸಿಬ್ಬಂದಿಗಳಿಗೆ ನೈರುತ್ಯ ರೈಲ್ವೆಯ ಪ್ರಧಾನ ವ್ಯವಸ್ಥಾಪಕ ಸಂಜೀವ್ ಕಿಶೋರ್ ಅವರು ಪ್ರಶಸ್ತಿ ನೀಡಿ ಗೌರವಿಸಿದರು. ಪ್ರಶಸ್ತಿಗಳಿಗೆ ಭಾಜನರಾದ ಸಿಬ್ಬಂದಿಗಳ ವಿವರ :

✦ **ಮುಖೇಶ ಕುಮಾರ ಮತ್ತು ಆಕಾಶ ಚಿಕಟೆ ಖಿಶಾಬ್** : ಮುಖೇಶ ಕುಮಾರ್ ಅವರು ಹೊಳಲ್ಕೆರೆಯಲ್ಲಿ ಗ್ಯಾಂಗ್‌ಮೇಟ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಆಕಾಶ ಚಿಕಟೆ ಖಿಶಾಬ್ ಅವರು ರಾಮಗಿರಿಯಲ್ಲಿ ಸ್ಟೇಷನ್ ಮ್ಯಾನೇಜರ್ ಆಗಿದ್ದಾರೆ. ಮುಖೇಶ್ ಕುಮಾರ್ ಅವರು ಮೇ 29 ರಂದು ಕೆಲಸದ ಸಮಯದಲ್ಲಿ ಗೂಡ್ಸ್ ರೈಲಿನ ವ್ಯಾಗನ್‌ಯೊಂದರ ಬಾಗಿಲು ತೆರೆದಿರುವುದನ್ನು ಗಮನಿಸಿ, ಸಂಬಂಧಿಸಿದ ಮೇಲಾಧಿಕಾರಿ ಮತ್ತು ರಾಮಗಿರಿಯಲ್ಲಿರುವ ಸ್ಟೇಷನ್ ಮ್ಯಾನೇಜರ್ ಆಕಾಶ ಚಿಕಟೆ ಖಿಶಾಬ್ ಅವರಿಗೆ ಮಾಹಿತಿ ತಿಳಿಸಿದ್ದಾರೆ.

ತಕ್ಷಣವೇ ಗೂಡ್ಸ್ ರೈಲು ನಿಲ್ಲಿಸಿದ ಪರಿಣಾಮ ಮುಂದಾಗಬಹುದಾದ ಅನಾಹುತವನ್ನು ತಪ್ಪಿಸಿ ಕರ್ತವ್ಯ ಪ್ರಜ್ಞೆ ಮೆರೆದಿದ್ದಾರೆ.



✦ **ರವಿ ಇ. ನಾಯ್ಡು** : ರವಿ ಇ. ನಾಯ್ಡು ಅವರು ಬೆಂಗಳೂರಿನಲ್ಲಿ ಕ್ಲರ್ಕ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಏಪ್ರಿಲ್ 27 ರಂದು ಬೆಂಗಳೂರಿನಿಂದ ಬಂಗಾರಪೇಟೆ ಕಡೆಗೆ ರೈಲಿನಲ್ಲಿ ಪ್ರಯಾಣಿಸುತ್ತಿರುವ ಸಮಯದಲ್ಲಿ ರೈಲಿನ ಬೋಗಿಯೊಂದರಲ್ಲಿ ಕರ್ಕಶ ಶಬ್ಧ ಕೇಳಿಸಿದೆ. ತಕ್ಷಣವೇ ಸಂಬಂಧಿಸಿದ ಅಧಿಕಾರಿಗಳಿಗೆ ಮಾಹಿತಿ ತಿಳಿದ್ದಾರೆ. ಸಂಬಂಧಿಸಿದ ಅಧಿಕಾರಿಗಳು ಮುಂದಿನ ನಿಲ್ದಾಣದಲ್ಲಿ ಸುರಕ್ಷತಾ ಕ್ರಮಕೈಗೊಂಡು ರೈಲನ್ನು ನಿಲ್ಲಿಸಿದ ಪರಿಣಾಮ ಮುಂದೆ ಸಂಭವಿಸಬಹುದಾದ ಅವಘಡವನ್ನು ತಪ್ಪಿಸಿದಂತಾಗಿದೆ.

✦ **ಖಾದರ್ ನವಾಜ್ ಖಾನ್** : ಖಾದರ್ ನವಾಜ್ ಖಾನ್ ಅವರು ಸರ್.ಎಂ.ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರಿನ ಸಿ ಅಂಡ್ ಡಬ್ಲ್ಯೂ ವಿಭಾಗದಲ್ಲಿ ಜ್ಯೂನಿಯರ್ ಎಂಜಿನಿಯರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಮೇ 30 ರಂದು ರೈಲಿನ ಸುರಕ್ಷತಾ ತಪಾಸಣೆ/ದುರಸ್ತಿಯ ಸಂದರ್ಭದಲ್ಲಿ ಪ್ರಾಥಮಿಕ ಸ್ಪ್ರಿಂಗ್ ಬ್ರೇಕೇಜ್ ಆಕ್ಸಲ್‌ನಲ್ಲಿ ತಾಂತ್ರಿಕ ತೊಂದರೆಯನ್ನು ಗಮನಿಸಿದ್ದಾರೆ. ಮುಂದೆ ರೈಲು ಚಲಿಸುವ ಸಮಯದಲ್ಲಿ ಬೋಗಿಗಳು ಬೇರ್ಪಟ್ಟು ಅಪಾಯವಾಗುವ ಸಂಭವ ಇರುತ್ತದೆ. ಕರ್ತವ್ಯ ಸಮಯದಲ್ಲಿ ಅತ್ಯಂತ ಜಾಗೃತಿ ವಹಿಸಿ ಪತ್ತೆ ಹಚ್ಚಿದ್ದಾರೆ.

✦ **ಪ್ರಭಾತ್ ಕುಮಾರ್ ಮಂಡಲ್** : ಪ್ರಭಾತ್ ಕುಮಾರ್ ಮಂಡಲ್ ಅವರು ಸ್ವಾನ್ಸರ್ಡೆಂ - ಕೂರ್ಚೋರೆಂ ನಿಲ್ದಾಣ ಸಮೀಪದ ಗೇಟ್ ನಂ-26ರಲ್ಲಿ ಗೇಟ್‌ಮ್ಯಾನ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಮೇ 30 ರಂದು ರಾತ್ರಿ ಕೆಲಸದ ಸಮಯದಲ್ಲಿ ಗೂಡ್ಸ್ ರೈಲಿನ ವ್ಯಾಗನ್‌ಯೊಂದರಲ್ಲಿನ ಹಾಟ್ ಆಕ್ಸಲ್ ಆಗಿರುವುದನ್ನು ಗಮನಿಸಿ, ಮುಂದಿನ ಸ್ಟೇಷನ್ ಮ್ಯಾನೇಜರ್ ಅವರಿಗೆ ಮಾಹಿತಿ ತಿಳಿಸಿದ್ದಾರೆ. ಇದರಿಂದ ಮುಂದೆ ಆಗಬಹುದಾದ ಅವಘಡವನ್ನು ತಪ್ಪಿಸಿ, ಸುರಕ್ಷತಾ ಕ್ರಮಗಳನ್ನು ಕೈಗೊಂಡಿದ್ದಾರೆ.

**ಖಾದರ್ ನವಾಜ್ ಖಾನ್ ಮತ್ತು ಜೀತ್ರೇಂದ್ರ ಕುಮಾರ್** : ಖಾದರ್ ನವಾಜ್ ಖಾನ್ ಮತ್ತು ಜಿತೆಂದ್ರ ಕುಮಾರ್ ಅವರುಗಳು ಸರ್.ಎಂ.ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರಿನ ಸಿ ಅಂಡ್ ಡಬ್ಲ್ಯೂ ವಿಭಾಗದಲ್ಲಿ ಜ್ಯೂನಿಯರ್ ಎಂಜಿನಿಯರ್ ಮತ್ತು ಟೆಕ್ನೀಷಿಯನ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಮೇ 30 ರಂದು ರೈಲಿನ ಸುರಕ್ಷತಾ ತಪಾಸಣೆ/ದುರಸ್ತಿಯ ಸಂದರ್ಭದಲ್ಲಿ ಬೋಗಿಯ ಪ್ರಾಥಮಿಕ ಸ್ಪ್ರಿಂಗ್ ಬ್ರೇಕೇಜ್ ಆಕ್ಸಲ್‌ನಲ್ಲಿ ತಾಂತ್ರಿಕ ತೊಂದರೆಯಿಂದ ಗ್ರೀಸ್ ಸೋರಿಕೆಯಾಗುತ್ತಿರುವುದನ್ನು ಗಮನಿಸಿದ್ದಾರೆ. ಇಲ್ಲದಿದ್ದರೆ ರೈಲು ಮುಂದೆ ಚಲಿಸುವ ಸಮಯದಲ್ಲಿ ಬೋಗಿಗಳು ಬೇರ್ಪಟ್ಟು ಅವಘಡ ಸಂಭವಿಸುವ ಅವಕಾಶವನ್ನು ತಪ್ಪಿಸಿರುತ್ತಾರೆ.

ತುರ್ತು ಸಂದರ್ಭಗಳಲ್ಲಿ ಸಮಯ ಪ್ರಜ್ಞೆ ತೋರಿದ ರೈಲ್ವೆ ಸಿಬ್ಬಂದಿಗಳಿಗೆ ಪ್ರಧಾನ ವ್ಯವಸ್ಥಾಪಕರು ಸನ್ಮಾನಿಸಿದರು.

ಸಮಾರಂಭದಲ್ಲಿ ಹೆಚ್ಚುವರಿ ಪ್ರಧಾನ ವ್ಯವಸ್ಥಾಪಕ ಯು. ಸುಬ್ಬರಾವ್, ಪ್ರಧಾನ ಮುಖ್ಯ ಸುರಕ್ಷತಾ ಅಧಿಕಾರಿ ಎ.ಪಿ. ಶರ್ಮಾ ಹಾಗೂ ಎಲ್ಲಾ ವಿಭಾಗದ ಹಿರಿಯ ಅಧಿಕಾರಿಗಳು ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

## ರಾಜ್ಯ ಮಟ್ಟದ ಕೃಷಿ ಪಂಡಿತ, ಜಿಲ್ಲಾ, ತಾಲ್ಲೂಕು, ಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿಗೆ ಅರ್ಜಿ ಆಹ್ವಾನ

ದಾವಣಗೆರೆ, ಜು. 12 - ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡಿದ ಜಿಲ್ಲೆಯ ರೈತರಿಗೆ ಪ್ರಸಕ್ತ ಸಾಲಿನ ರಾಜ್ಯ ಮಟ್ಟದ ಕೃಷಿ ಪಂಡಿತ ಪ್ರಶಸ್ತಿ ಹಾಗೂ ಜಿಲ್ಲಾ, ತಾಲ್ಲೂಕು ಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿ ಮತ್ತು ಜಿಲ್ಲಾ ಮಟ್ಟದ ಗುಂಪು ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಕೃಷಿ ಪಂಡಿತ ಪ್ರಶಸ್ತಿಗೆ ಅರ್ಜಿ ಸಲ್ಲಿಸುವ ರೈತರು ಕೃಷಿಯಲ್ಲಿ ಸಮಗ್ರ ಕೃಷಿ ಪದ್ಧತಿ, ಬೆಳೆ ಪದ್ಧತಿಗಳು ಮತ್ತು ಬೆಳೆ ವೈವಿಧ್ಯೀಕರಣ, ಸಾವಯವ ಕೃಷಿ, ಕೃಷಿ ಯಂತ್ರೋಪಕರಣ ಅಭಿವೃದ್ಧಿ, ನೀರಿನ ಸಾಮರ್ಥ ಬಳಕೆ, ಇನ್ನಿತರೆ ಯಾವುದಾದರು ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡಿರಬೇಕು. ರೈತ ಮಹಿಳೆಯರಿಂದ ಪ್ರತ್ಯೇಕವಾಗಿ ಹಾಗೂ ಆತ್ಮ ಯೋಜನೆಯಡಿ ಕೃಷಿಯಲ್ಲಿ ಸಮಗ್ರ ಬೆಳೆ ಪದ್ದತಿ, ಸಮಗ್ರ ನೀರು ನಿರ್ವಹಣೆ, ಸಾವಯವ ಕೃಷಿ, ವೈಜ್ಞಾನಿಕ ಯಂತ್ರೋಪಕರಣಗಳ ಬಳಕೆ, ತೋಟಗಾರಿಕೆ, ಹೈನುಗಾರಿಕೆ, ಕೋಳಿ ಸಾಕಾಣಿಕೆ, ಮೀನುಗಾರಿಕೆ, ರೇಷ್ಮೆ ಬೇಸಾಯ, ಹೈಟೆಕ್ ಹಸಿರುಮನೆ ಅಳವಡಿಕೆ, ಕೃಷಿ ಸಂಸ್ಕರಣೆ, ಅರಣ್ಯ ಕೃಷಿ, ಆಡು, ಕುರಿ, ಮೊಲ ಸಾಕಾಣಿಕೆ ಚಟುವಟಿಕೆಯಲ್ಲಿ ಸಾಧನೆ ಮಾಡಿದವರು ತಾಲ್ಲೂಕು ಮಟ್ಟ, ಜಿಲ್ಲಾ ಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿಗೆ ಮತ್ತು ಜಿಲ್ಲಾ ಮಟ್ಟದ ಆಸಕ್ತ ಗುಂಪು ಪ್ರಶಸ್ತಿಗೆ ಅರ್ಹರಾಗಿರುತ್ತಾರೆ.

ಅರ್ಹ ರೈತರು ಇದೇ ದಿನಾಂಕ 24 ರೊಳಗಾಗಿ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಜಿಲ್ಲೆಯ ಎಲ್ಲಾ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ಹಾಗೂ ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದೆಂದು ಜಂಟಿ ಕೃಷಿ ನಿರ್ದೇಶಕರು ಹಾಗೂ ಯೋಜನಾ ನಿರ್ದೇಶಕರಾದ ಶ್ರೀನಿವಾಸ್ ಚಿಂತಾಲ್ ತಿಳಿಸಿದ್ದಾರೆ.

## ಡಾ.ನಿರ್ಮಲಾ ಕೇಸರಿ ದತ್ತಿ ಉಪನ್ಯಾಸ

ದಾವಣಗೆರೆ, ಜು. 12- ದಾವಣ ಗೆರೆ ಜಿಲ್ಲಾ ಘಟಕ ಮಕ್ಕಳ ವಿಭಾಗದ ಸಹಯೋಗದೊಂದಿಗೆ, ಮಕ್ಕಳ ವಿಭಾಗ ಎಸ್‌ಎಸ್‌ಐಎಂಎಸ್ ಮತ್ತು ರಿಸರ್ಚ್ ವಿಭಾಗ, ಜೆಜೆಎಂಎಂಸಿ ಇವರಿಂದ ಡಾ. ನಿರ್ಮಲಾ ಕೇಸರಿ ದತ್ತಿ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ದತ್ತಿ ಉಪನ್ಯಾಸಕರಾಗಿ ಮಂಗಳೂರಿನ ಎಜೆ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ಹಾಗೂ ಐಎಪಿ ಮಾಜಿ ರಾಷ್ಟ್ರೀಯ ಅಧ್ಯಕ್ಷ ಪ್ರೊಫೆಸರ್ ಡಾ. ಸಂತೋಷ ಸೋಹನ್, ಡಾ. ಜಿ.ಬಿ. ಬಸವರಾಜ್, ಡಾ. ಗುರುಪ್ರಸಾದ್, ಡಾ. ಪ್ರೀತಿ ಗಲಗಲಿ, ಡಾ. ಕಲ್ಲೇಶ ಹೆಬ್ಬಾಳ, ಡಾ. ಜಿ.ಎಸ್. ಲತಾ, ಡಾ. ಬಸವಂತಪ್ಪ, ಡಾ. ಸುರೇಶ್ ಗಂಡಾಪಲ್ಲಿ, ಡಾ. ಆರ್. ಅಶ್ವಿನಿ, ಡಾ. ಛಾಯಾ, ಡಾ. ಮಧು, ಪೂಜಾ ಉಪಸ್ಥಿತರಿದ್ದು, ಅನೇಕ ವಿಷಯಗಳ ಬಗ್ಗೆ ಚರ್ಚಿಸಿದರು.

ಡಾ. ಶರಣಗೌಡ ಪಾಟೀಲ್, ಡಾ. ಅರುಣ್‌ಕುಮಾರ್ ಅಜ್ಜಪ್ಪ, ಡಾ. ವೀರೇಶ್‌ಬಾಬು, ಡಾ. ಭವ್ಯ, ಮಕ್ಕಳ ಖ್ಯಾತ ಹಿರಿಯ ವೈದ್ಯರುಗಳಾದ ಡಾ. ಸಿ.ಆರ್. ಬಾಣಾಪುರ ಮಠ, ಡಾ. ಸುರೇಶ್‌ಬಾಬು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಡಾ. ಬಿ.ಎಸ್. ಪ್ರಸಾದ್ ಕಾರ್ಯ ಕ್ರಮವನ್ನು ಉದ್ಘಾಟಿಸಿದರು. ಡಾ. ಕಾಳಪ್ಪನವರ್ ಸ್ವಾಗತಿಸಿ, ನಿರ್ಮಲಾ ಕೇಸರಿ ಅವರ ಕಾರ್ಯವೈಖರಿ ಹಾಗೂ ಅವರಿಗೆ ಮಕ್ಕಳ ಬಗ್ಗೆ ಇದ್ದ ಅಪಾರ ಪ್ರೀತಿ, ಸಾಮಾಜಿಕ ಕಳಕಳಿ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿದರು. ಡಾ. ಸಹನ ರವಿಕುಮಾರ್ ಹಾಗೂ ಡಾ.ಮಾಳವಿಕ ಕಾರ್ಯಕ್ರಮ ನಿರೂಪಿಸಿದರು. ಡಾ. ಚಂದ್ರಶೇಖರ ಗೌಳಿ ವಂದಿಸಿದರು.

## ಕುರುಬರ ಸಂಘದಿಂದ ಪ್ರತಿಭಾ ಪುರಸ್ಕಾರ

ಹರಿಹರ, ಜು.12- ಹರಿಹರ ತಾಲ್ಲೂಕು ಕುರುಬರ ಸಂಘದ ವತಿಯಿಂದ 2022 2023ನೇ ಶೈಕ್ಷಣಿಕ ವರ್ಷದಲ್ಲಿ ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದು ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಹಾಲುಮತ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸೇವೆ, ಸಾಧನೆ ಮಾಡಿರುವ ಹಿರಿಯರಿಗೆ ಸನ್ಮಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ. ವಿದ್ಯಾರ್ಥಿಗಳು ದಾಖಲಾತಿಯೊಂದಿಗೆ ಇದೇ ದಿನಾಂಕ 20 ರೊಳಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಡಾ. ಕರಿಬಸಯ್ಯ ಮಠದ (89086 30199) ಅವರನ್ನು ಸಂಪರ್ಕಿಸಬಹುದು.

## ಮಳೆಗೆ ತಕ್ಕಂತೆ ಬೆಳೆ ನಿರ್ವಹಣೆ ಕ್ರಮ; ರೈತರಿಗೆ ಸಲಹೆ

ದಾವಣಗೆರೆ, ಜು.12- 2023ರ ಜೂನ್ ಕೊನೆವರೆಗೆ ಕೊರತೆಯಾಗಿ ಉಳಿದಿದ್ದ ಮುಂಗಾರು ಮಳೆ, ಜುಲೈ ಮೊದಲ ವಾರದಲ್ಲಿ ಮಲೆನಾಡು ಭಾಗಗಳಲ್ಲಿ ಜೋರಾಗಿ ಬಂದಿದೆ. ಅರೆ ಮಲೆನಾಡಿನಲ್ಲಿ ತಕ್ಕ ಮಟ್ಟಿಗೆ ಬಂದಿದ್ದರೆ, ಬೆಳವಲದ ಬಹುತೇಕ ಕಡೆ ಕೊರತೆ ಸ್ಥಿತಿಯಲ್ಲಿಯೇ ಮುಂದುವರೆದಿದೆ. ಈ ಹಿನ್ನಲೆಯಲ್ಲಿ, ಬೆಳೆ ನಿರ್ವಹಣೆ ಕುರಿತು ಅನುಸರಿಸಬೇಕಾದ ಕೃಷಿ ಕಾರ್ಯಗಳ ಕುರಿತಂತೆ ವರದಾ ಕೃಷಿಕರ ವೇದಿಕೆ ಕೆಲವು ಸಲಹೆ ನೀಡಿದೆ. ಅವು ಕೆಳಗಿನಂತಿವೆ.

ಈಗಾಗಲೇ ಬಿತ್ತನೆಯಾದ ಬೆಳೆಗಳಲ್ಲಿ ಎಡೆ ಹೊಡೆಯುವುದು, ಬೋದು ಏರಿಸುವುದು.

ತೇವಾಂಶ ಮಟ್ಟ, ಪಡೆದ / ಪಡೆಯುವ ಮಳೆಗನುಗುಣವಾಗಿ ಮೇಲ್ಗೊಬ್ಬರ ಕೊಡುವುದು. ಚುಕ್ಕೆ ಲದ್ದಿ ಹುಳು, ರಸ ಹೀರುವ ಕೀಟಗಳ ನಿರ್ವಹಣೆ.

ಹತ್ತಿಯಲ್ಲಿ ಕಾಂಡದ ಮೂತಿ ಹುಳು, ರಸ ಹೀರುವ ಕೀಟಗಳ ಬಾಧೆ, ಸತತ ಮಳೆಯಿಂದ ಹೂವು ಕೊಳೆ ಹತೋಟಿ

ಪೋಷಕಾಂಶಗಳ ಸಿಂಪಡಣೆಯಿಂದ



ತೇವದ ಬಾಧೆ ತಡೆಯಲು ಸಾಧ್ಯ.

ಶೇಂಗಾ, ಸೋಯಾ ಅವರೆ ಇತ್ಯಾದಿಗಳಲ್ಲಿ ಬುಡಕೊಳೆ, ಎಲೆ ಚುಕ್ಕೆ ರೋಗ ಹತೋಟಿ (ಸಾಕಷ್ಟು ಕೊಟ್ಟಿಗೆ ಗೊಬ್ಬರ ಬಳಸಿದಲ್ಲಿ ರೋಗ ಬಾಧೆ ಸಾಧ್ಯತೆ ಕಡಿಮೆ). ಇದುವರೆಗೆ ಬಿತ್ತನೆಯಾಗದ ಮತ್ತು ಮುಂಗಾರಿ ಬೆಳೆ ಬೆಳೆಯುವ ಜಮೀನುಗಳಲ್ಲಿ.. ಬೀಜೋಪಚರಿಸಿ ಮೆಕ್ಕೆಜೋಳ, ಸಿರಿಧಾನ್ಯ , ಸೋಯಾ ಅವರೆ ಬಿತ್ತನೆ ಮುಂದುವರೆಸಬಹುದು.

ರಸಗೊಬ್ಬರದ ಪ್ರಮಾಣ ತುಂಬಾ ಹಿಡಿತದಲ್ಲಿರಲಿ. ಮೆಣಸಿನಗಿಡದ ಸಿದ್ಧ ಮಡಿಯಿಂದ ಅಗಿಗಳನ್ನು ತಂದು ಟ್ರೈಕೋಡರ್ಮಾ ಮತ್ತು ಅಜಾಡಿರಕ್ಟಿನ್ (ಅಥವಾ ಕಾರ್ಬಂಡೈಜಿಂ ಮತ್ತು ಕ್ಲೋರ್ ಪೈರಿಫಾಸ್) ಗಳ ದ್ರಾವಣದಲ್ಲಿ ಅದ್ದಿ ನೆಡಬೇಕು. ತಡ ಬಿತ್ತನೆಯಿಂದ ಇಳುವರಿ ಕಡಿಮೆಯಾಗು ವುದರಿಂದ, ಹತ್ತಿ ಬಿತ್ತನೆ ಮುಂದುವರೆಸಬಾರದು.

ಕಳೆ ನಾಶಕ ಬಳಸುವ ಮುನ್ನ ಕಳೆ - ಬೆಳೆ ಹಂತ, ತೇವಾಂಶ ಸ್ಥಿತಿ ಗಮನಿಸಬೇಕು. (ಬಹುತೇಕ ಬಿತ್ತನೆ ನಂತರ ಬಳಸುವ ಕಳೆನಾಶಕ ಗಳು ಕಳೆಗಳು 2-4 ಎಲೆ ಹಂತದಲ್ಲಿರುವಾಗ ಮಾತ್ರ. ಕಾರ್ಯ ಮಾಡುತ್ತವೆ.)

ಬೆಳೆಗಳಲ್ಲಿ ರಸಗೊಬ್ಬರ ಉಗ್ಗಿದರೆ ಅವು ಕಳೆ ಬಾಧೆ ಹೆಚ್ಚಲು ಕಾರಣವಾಗುವವು. ಎಳೆ ಶೆಡ್ಡಿ ಮೂಲಕ ಸಾಲು ಬಿತ್ತನೆಯಿಂದ ಗೊಬ್ಬರಗಳ ಸಮರ್ಥ ಬಳಕೆ ಸಾಧ್ಯ. * ಶಿಫಾರಸ್ಸಿನಂತೆ ಜಿಂಕ್, ಬೋರಾನ್, ಕ್ಯಾಲ್ಸಿಯಂ, ಗಂಧಕ ಬಳಕೆ ಅತ್ಯಗತ್ಯ. ಅನಗತ್ಯವಾಗಿ ಯೂರಿಯಾ ಬಳಕೆ ಮಾಡಬಾರದು.

ತಜ್ಞರ , ವಿಸ್ತರಣಾ ಕಾರ್ಯಕರ್ತರ, ಯಶಸ್ವಿ ಅನುಭವಸ್ಥರ ಸಲಹೆಗಳಿಗೆ ಆದ್ಯತೆ ಇರಲಿ.

## ಜೈನ ಮುನಿಗಳ ಹತ್ಯೆ: ಮುಸ್ಲಿಂ ಬಾಂಧವ್ಯ ವೇದಿಕೆ ಖಂಡನೆ

ದಾವಣಗೆರೆ, ಜು.12- ಚಿಕ್ಕೋಡಿಯಲ್ಲಿ ನಡೆದಿರುವ ಜೈನಮುನಿ ಶ್ರೀ ಕಾಮಕುಮಾರ ನಂದಿ ಮಹಾರಾಜರ ಭೀಕರ ಹತ್ಯೆಯನ್ನು ಮುಸ್ಲಿಂ ಬಾಂಧವ್ಯ ವೇದಿಕೆ ತೀವ್ರವಾಗಿ ಖಂಡಿಸಿದೆ.

ಸಮಾಜದಲ್ಲಿ ಅಪರಾಧ ಪ್ರಕರಣಗಳು ಕಳೆದ ಹಲವು ವರ್ಷಗಳಿಂದ ಹೆಚ್ಚಾಗಲು ಕಾನೂನಿನ ಭಯ ಇಲ್ಲದಿರುವುದೇ ಮುಖ್ಯ ಕಾರಣ. ನಿಷ್ಪಕ್ಷಪಾತ ತನಿಖೆ ನಡೆಸಿ, ಅಪರಾಧದಲ್ಲಿ ಭಾಗಿಯಾದ ಆರೋಪಿಗಳನ್ನು ಸಮುದಾಯ, ಧರ್ಮಗಳ ಸೀಮೆಗಳಿಗೆ ಒಳಪಡಿಸದೇ ಸೂಕ್ತ ತನಿಖೆ ನಡೆಸಿ ಕಠಿಣವಾಗಿ ಶಿಕ್ಷಿಸಿಸುವ ಮೂಲಕ ಭವಿಷ್ಯದಲ್ಲಿ ಇಂತಹದ್ದು ನಡೆಯದಂತೆ ನೋಡಿಕೊಳ್ಳಬೇಕಿದೆ ಎಂದು ವೇದಿಕೆ ಅಧ್ಯಕ್ಷ ಅನಿಸ್ ಪಾಷಾ ತಿಳಿಸಿದ್ದಾರೆ.

ಪಕ್ಷ, ಜಾತಿ, ಧರ್ಮಗಳ ಆಧಾರದ ಮೇಲೆ ಅಪರಾಧವೂ ಕೂಡ ಕಾನೂನಿನ ದುರ್ಬಳಕೆಯ ಮೂಲಕ ರಕ್ಷಣೆ ಹೊಂದುತ್ತಾ ಬಂದಿರುವುದು ದುರಂತವೇ ಸರಿ ಎಂದು ಹೇಳಿದ್ದಾರೆ.

ಅಪರಾಧಿಗಳಿಗೆ ಮಾಡುವ ಪ್ರತ್ಯಕ್ಷ, ಪರೋಕ್ಷ ರಕ್ಷಣೆಯೇ ಅಪರಾಧಗಳಿಗೆ ಪ್ರೇರಣೆಯಾಗಿ ಸರ್ವ ಸಮುದಾಯಗಳು ಇದರಿಂದ ಸಂಕಷ್ಟ ಅನುಭವಿಸುವಂತಾಗುತ್ತದೆ. ರಾಜ್ಯದ ನೂತನ ಸರ್ಕಾರ ಈ ಹತ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ಅಪರಾಧಿಗಳಿಗೆ ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಳ್ಳದಂತೆ ಕ್ರಮ ಕೈಗೊಳ್ಳಲಿ ಎಂದು ಒತ್ತಾಯಿಸಿದ್ದಾರೆ.

ಪೊಲೀಸ್ ಇಲಾಖೆ ಕೂಡ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಅನಿಸ್ ಪಾಷಾ ಮತ್ತು ಕಾರ್ಯದರ್ಶಿ ಮುಷ್ತಾಕ್ ಹೆನ್ನಾಬೈಲ್ ಆಗ್ರಹಿಸಿದ್ದಾರೆ.


**ಅಪಾರ್ಟ್‌ಮೆಂಟ್‌ನಲ್ಲಿ ಎರಡು ಮನೆಗಳು ಭೋಗ್ಯಕ್ಕೆ ಇದೆ**
ದಾವಣಗೆರೆ ಸಿಟಿ ಎಸ್.ಎಸ್ ಬಡಾವಣೆ 'ಎ' ಬ್ಲಾಕ್ ನೇತಾಜಿ ಸುಭಾಷ್‌ಚಂದ್ರ ಬೋಸ್ ಇಂಡೋರ್ ಸ್ಟೇಡಿಯಂ ಹತ್ತಿರ, ಎಸ್. ಸ್ಕೈಯರ್ ಡ್ಯೂ ಪ್ವರ್ ಅಪಾರ್ಟ್‌ಮೆಂಟ್‌ನಲ್ಲಿ ವಾಸ್ತು ಪ್ರಕಾರ ಅಳವಡಿಸಿರುವ ಲಿಫ್ಟ್, ನೀರು ಹಾಗೂ ಎಲ್ಲಾ ಸೌಕರ್ಯವಿರುವ ಅಪಾರ್ಟ್‌ಮೆಂಟ್‌ನಲ್ಲಿ ಎರಡು ಮನೆಗಳು ಭೋಗ್ಯಕ್ಕಿವೆ. - ಬಿ.ಎಸ್. ಸಂತೋಷ್
96322 67555

**ಸೈಟುಗಳು ಮಾರಾಟಕ್ಕಿವೆ**
ಶನೇಶ್ವರ ದೇವಸ್ಥಾನ ಹಿಂಭಾಗ ಗ್ಲೋಬಲ್ ಸ್ಕೂಲ್ ಹತ್ತಿರ 30x50, 30x50 South ಅಕ್ಕ-ಪಕ್ಕ,
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಹೊಸ ಕುಂದವಾಡದ ಹತ್ತಿರ ಸರ್ಕಾರಿ ನೌಕರರ ಬಡಾವಣೆಯ ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x40 ಪಶ್ಚಿಮ-ದಕ್ಷಿಣ ಕಾರ್ನರ್, 30x40 ಪಶ್ಚಿಮ, 30x40 ಪೂರ್ವ, 30x50 ಪೂರ್ವ, 30x50 ಉತ್ತರ.
ಸ್ವಾಮಿ ಏಜೆಂಟ್, ವಿದ್ಯಾನಗರ.
97421 44715

**ಬಾಡಿಗೆಗೆ**
ಹಳೇ ಪಿ.ಬಿ. ರಸ್ತೆ, ಶ್ರೀಗಂಧ ಲಾಡ್ಜ್ ಪಕ್ಕದಲ್ಲಿ
1. ಗ್ರೌಂಡ್ ಫ್ಲೋರ್ - 800 ಅಡಿ
2. ಮೊದಲನೇ ಮಹಡಿ - 4000 ಅಡಿ
3. ಎರಡನೇ ಮಹಡಿ - 4000 ಅಡಿ
4. Terrace Floor - 4000 ಅಡಿ
5. Basement - 4000 ಅಡಿ
ಸಂಪರ್ಕಿಸಿ : ಮೊ. 94480 28103

**ತಕ್ಷಣ ಬೇಕಾಗಿದ್ದಾರೆ**
ಅನುಭವಿ ಕಂಪ್ಯೂಟರ್ ಆಪರೇಟರ್ ಕೆಲಸಕ್ಕೆ ಮಹಿಳೆಯರು ತಕ್ಷಣ ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು.
95354 37451

**ಬಾಡಿಗೆಗೆ ಇದೆ**
ಹೋಟೆಲ್ ಮಾಡಲು ಕಬ್ಬಿಣದ ಹೊಸ ಗಾಡಿ ಬಾಡಿಗೆಗೆ ಇದೆ.
ಸಂಪರ್ಕಿಸಿ :
90080 92650

**ಕಮರ್ಷಿಯಲ್ ಅಥವಾ ಇಂಡಸ್ಟ್ರಿಯಲ್ ಸೈಟುಗಳು ಮಾರಾಟಕ್ಕಿವೆ**
ಸೋನಾಲಿಕ ಟ್ರ್ಯಾಕ್ಟರ್ ಷೋರೂಮ್ ಹಿಂಭಾಗ, 40x68 ಅಳತೆಯ 2 ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ :
ಮೋಹನ್ ರಿಯಲ್ ಎಸ್ಟೇಟ್ ಏಜೆನ್ಸೀಸ್
ಮೊ : 97424 34049

**ಬೇಕಾಗಿದ್ದಾರೆ**
ತಕ್ಷಣ ಸೇಲ್ಸ್ ಗರ್ಲ್ಸ್, ಸೇಲ್ಸ್ ಬಾಯ್ಸ್ ಹಾಗೂ ಹೆಲ್ಪರ್ ಬೇಕಾಗಿದ್ದಾರೆ. ಸಂಪರ್ಕಿಸಿ :
ಗಂಗಾವತಿ ಸಿಲ್ಕ್ಸ್ ಸ್ಯಾರಿ ಸೆಂಟರ್, ಬಿನ್ನಿ ಕಂಪನಿ ರೋಡ್, ದಾವಣಗೆರೆ -1.

**ಸೈಟುಗಳು ದೊರೆಯುತ್ತವೆ**
ಡಾಲರ್ಸ್‌ಕಾಲೋನಿ ಬನಶಂಕರಿ ಬಡಾವಣೆ, ಶಕ್ತಿನಗರ, ಡಿಸಿಎಂ, ಜಯನಗರ ಹಾಗೂ ಇತರೆ ಬಡಾವಣೆಗಳಲ್ಲಿ 30x40, 30x50 ಸೈಟುಗಳು & ಕಮರ್ಷಿಯಲ್ ಸೈಟುಗಳು, ಜಮೀನುಗಳು ಉತ್ತಮ ದರದಲ್ಲಿ ದೊರೆಯುತ್ತವೆ.
97315 12365

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಲೇಔಟ್‌ನಲ್ಲಿ 40x70 East, 40x70 Corner, 40x63 East, 30x40 West, 40 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**EC / ಇಸಿ, E-swathu, Khatha Change Building Licence & Other Property Documents**
96118-66449

**ಕೇರ್ ಟೇಕರ್**
ವಯೋವೃದ್ಧರನ್ನು ನಮ್ಮಲ್ಲೇ ಇರಿಸಿಕೊಂಡು ನೋಡಿಕೊಳ್ಳಲಾಗುವುದು, ಸ್ಪೆಷಲ್ ರೂಮ್ಸ್ ಮತ್ತು ಕೇರಿಂಗ್ ರೂಮ್ಸ್ ಇರುತ್ತವೆ, 24 ಗಂಟೆ ಕೇರ್‌ಟೇಕರ್ ಇರುತ್ತಾರೆ, ಸಂಪರ್ಕಿಸಿ :
89711 92936

**ಚಿಕ್ಕ ಮನೆಗಳು ಬಾಡಿಗೆಗೆ**
ಶಕ್ತಿ ನಗರದಲ್ಲಿ ಚಿಕ್ಕ ಮನೆಗಳು ಬಾಡಿಗೆಗೆ ದೊರೆಯುತ್ತವೆ.
94484 39639

**ಬೇಕಾಗಿದ್ದಾರೆ**
ದೈಹಿಕ ಶಿಕ್ಷಕರು- ಬಿ.ಎ.ಬಿಪಿ.ಇಡಿ-1
ಅನುಭವಿ ಅಕೌಂಟೆಂಟ್ : ಬಿ.ಕಾಂ.-1, (ಕಂಪ್ಯೂಟರ್ ಮತ್ತು ಟ್ಯಾಲಿ ಅನುಭವವಿರಬೇಕು)
ಆಸಕ್ತರು ಕೂಡಲೇ ಸಂಪರ್ಕಿಸಿ.
ಮೊ.ನಂ. 98440 38668

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ. ಸ್ಥಳ : ದೊಡ್ಡಬಾತಿ
2 ಕೆಜಿ ಪ್ಲಾಸ್ಟಿಕ್ ಕವರ್ ರೂ. 30/-
88920 08800

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಶ್ರೀ ಅಂಜನಿಪುತ್ರ ಹೋಂ ಕೇರ್ ಸರ್ವೀಸ್**
ವಯೋವೃದ್ಧರನ್ನು, ವಯೋವೃದ್ಧ ರೋಗಿಗಳನ್ನು ನೋಡಿಕೊಳ್ಳಲು ಬೇಕಾಗಿದ್ದಲ್ಲಿ ಸಂಪರ್ಕಿಸಿ :
99024 64522, 96864 55820
(ಮಹಿಳೆಯರು ಹಾಗೂ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ)

**ವಯೋವೃದ್ಧರ ಆರೈಕೆ ಕೇಂದ್ರ**
ನಮ್ಮಲ್ಲಿ ವೃದ್ಧರು, ವೃದ್ಧೆಯರನ್ನು ಬೆಡ್ ರಿಡನ್ ಪೇಷೆಂಟ್‌ಗಳನ್ನು ನಮ್ಮಲ್ಲೇ ಇರಿಸಿಕೊಂಡು ನೋಡಿಕೊಳ್ಳಲಾಗುವುದು, ಉತ್ತಮ ಆರೈಕೆಗಾಗಿ ಸಂಪರ್ಕಿಸಿ :
89711 92936, 97410 64663

**ಸೈಟ್ ಮಾರಾಟಕ್ಕೆ**
ಡಾಲರ್ಸ್ ಕಾಲೋನಿ (40x51) ಪಶ್ಚಿಮ, ಕುಂದುವಾಡ ಸೈಟ್ 44 (30x50) ಪಶ್ಚಿಮ ನೈರುತ್ಯ ಮೂಲೆ & ಸೈಟ್ 43 (30x50) ಪಶ್ಚಿಮ (ಅಕ್ಕ-ಪಕ್ಕ)
ಫೋ. : 97404 47907

**URGENT REQUIREMENT**
MATHS TEACHER (HIGHER PRIMARY) B.Sc., B.Ed., PM Method
ENGLISH TEACHER (HIGH SCHOOL) M.A. / B.A., B.Ed., English Major
pvsprimary@gmail.com
99809 33292, 97410 52600, 97401 37642

**ಸೈಟುಗಳು ಮಾರಾಟಕ್ಕಿವೆ**
ಶಿವಗಂಗಾ ಚೌಟ್ರಿ ಹಿಂಭಾಗ ಬಂಗ್ಲೆ ಸೈಟು 40 ಅಡಿ ರಸ್ತೆಗೆ ದಕ್ಷಿಣ 60x83, KHB ಕಾಲೋನಿಯಲ್ಲಿ ಪಶ್ಚಿಮ 40x60, ಅಮರನಾಥ ಲೇಔಟ್‌ನಲ್ಲಿ ಪೂರ್ವಕ್ಕೆ 30x35.5
ಬಸವರಾಜ. N
98440 84229

**ಬಿಲ್ಡಿಂಗ್ ಬಾಡಿಗೆಗೆ/ ಲೀಸ್/ಮಾರಾಟಕ್ಕೆ**
ಹರಿಹರ ಟೆಂಪಲ್ ರಸ್ತೆಯಲ್ಲಿ ಹೊಸ ಭರಂಪುರದಲ್ಲಿ 15x50 ಅಳತೆಯ ಕಾರ್ನರ್ ಸೈಟ್ 40 ಅಡಿ ಮುಂದೆ ಪಾರ್ಕಿಂಗ್ ಇರುವ ಬಿಲ್ಡಿಂಗ್ ಬಾಡಿಗೆಗೆ/ ಲೀಸ್/ಮಾರಾಟಕ್ಕಿದೆ ಸಂಪರ್ಕಿಸಿ :
81236 46828

**REQUIERED**
Experienced Accountant in Tally Prime candidate to Famous Jewellary Shop, Davanagere. Contact :
99649 32113
88808 89524

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
PUC or any Degree.
ವಿಳಾಸ : ಕಾವೇರಿ ಮೆಡಿಹೌಸ್ ಪ್ರೈ.ಲಿ., ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ - 577 002.

**TO-LET**
1. Corner commercial hall at 7th Main, P J Extension, suitable for Doctor Consultation available for rent. 2. 2BHK, 2nd floor available for rent at 8th Main, P J Extension. Contact :
76764 92366

**ಬೇಕಾಗಿದ್ದಾರೆ**
ಯುರೇಖಾ ಫೋರ್ಬ್ಸ್ ಕಂಪನಿಯಲ್ಲಿ ITI, PUC, Degree ಆದವರು Sales Excutive ಆಗಿ ಕೆಲಸ ಮಾಡಲು ಬೇಕಾಗಿದ್ದಾರೆ. Male/ Female. Basic Salary, Bonus + Incentive ಇರುತ್ತದೆ.
99807 65583, 63625 27541

**JOB PLACEMENT AVAILABLE**
SAUDI ARABI-DUBAI + OMAN QATAR - KUWAIT + EUROPE + CANADA, UK and USA.
Rumaan Enterprises Tours & Travels
7795445340, 88619 49530

**ಸ್ಲೀಪಿಂಗ್ ಪಾರ್ಟ್ನರ್ ಬೇಕಾಗಿದ್ದಾರೆ**
ನಮ್ಮ ಟ್ರೇಡಿಂಗ್ ಬ್ಯುಸಿನೆಸ್ ನಲ್ಲಿ ಹೂಡಿಕೆ ಮಾಡಿ, ಪ್ರತಿ ತಿಂಗಳು ಸ್ಥಿರ ಹಾಗೂ ಉತ್ತಮ ಲಾಭ ಗಳಿಸಿ.
76767 50280

**WANTED TEACHERS**
BSc., BEd-3, PCM/CBZ, NTC-2 clerk-B.Com.,
Interested candidates can immediately apply to
VINAYAKA CONVENT Ganeshpet. Kalikadevi Road Dvg.
VINAYAKA PUBLIC SCHOOL kondajji road, near HP gas godown Dvg.
95356 10817
(we will be given attractive salary to right candidates)

**DOBERMAN PUPPY FOR SALE**
Only One 1 month old male Daberman puppy available
83103 98956, 94488 50051

**ಬೇಕಾಗಿದ್ದಾರೆ**
ಬಂಗಾರದ ಅಂಗಡಿಯಲ್ಲಿ ಕನಿಷ್ಠ 2 ವರ್ಷದ ಅನುಭವವಿರುವ 20 ರಿಂದ 25 ವರ್ಷದ ಯುವಕರು ಕೆಲಸಕ್ಕೆ ಬೇಕಾಗಿದ್ದಾರೆ.
Bio-dataದೊಂದಿಗೆ ಸಂಪರ್ಕಿಸಿರಿ:
89700 11711

**2 BHK HOUSE FOR RENT/LEASE**
near podar international in J.H. Patel Badavane, Davangere.
95358 41058

**ಹೊಸ ಮನೆ ಮಾರಾಟಕ್ಕಿದೆ**
ಮಹಾಲಕ್ಷ್ಮಿ ಬಡಾವಣೆಯಲ್ಲಿ 30x50 ಸೈಟ್‌ನಲ್ಲಿ ಪಶ್ಚಿಮ ದಿಕ್ಕಿನ ವಾಸ್ತು ಪ್ರಕಾರ ಇರುವ 2 ಬೆಡ್ ರೂಂನ ಹೊಸ ಮನೆ ಮಾರಾಟಕ್ಕೆ ಇದೆ.
98448 82366


**Hotel Cook & staff**
ಪ್ರತಿಷ್ಠಿತ ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡಲು ಅನುಭವ ಇರುವ ಒಳ್ಳೆ Cooks & Staff ಬೇಕಾಗಿದ್ದಾರೆ.
Call : 81475 47421

**ದಾನೇಶ್ ಹೋಂ ಡೆಕೋರ್**
(ಗೃಹ ಅಲಂಕಾರಿಕ ಹೂಗಳು ಮತ್ತು ಮೀನುಗಳ ಅಂಗಡಿಯಲ್ಲಿ) ಕೆ.ಟಿ.ಜೆ. ನಗರ ಹಾಗೂ ಜಯನಗರ ದಾವಣಗೆರೆ ಇಲ್ಲಿ ಕೆಲಸಕ್ಕೆ ಮಹಿಳೆಯರು ಹಾಗೂ ಯುವಕರು ಬೇಕಾಗಿದ್ದಾರೆ.
ಆಕರ್ಷಕ ಸಂಬಳ ನೀಡಲಾಗುವುದು
98453 70694

**ನ್ಯೂ ಹೈಟೆಕ್ ವಯೋವೃದ್ಧರ ಆರೈಕೆ ಕೇಂದ್ರ (ರಿ)**
ಸೇವೆಗಳು:
* 24 ಗಂಟೆ ಕೇರ್ ಟೇಕಿಂಗ್
* ಸ್ಪೆಷಲ್ ರೂಮ್ಸ್ ವಿತ್ ಅಟ್ಯಾಚ್ ಬಾತ್ ರೂಂ
* ವೈದ್ಯಕೀಯ ಸೇವೆಗಳು
* ಶುಚಿ & ರುಚಿಯಾದ ಊಟ
ಇನ್ನೂ ಇತ್ಯಾದಿ ಸೇವೆಗಳನ್ನು ನೀಡಲಾಗುವುದು.
ಮನೆಯಲ್ಲಿ ನೋಡಿಕೊಳ್ಳಲಾಗದ ಮತ್ತು ನಿವೃತ್ತಿ ಹೊಂದಿರುವ ವಯೋವೃದ್ಧರಿಗೆ, ಅಂಗವಿಕಲ ವೃದ್ಧರಿಗೆ ಮೇಲೆ ಸೂಚಿಸಿರುವ ಸೇವೆಗಳನ್ನು ನೀಡಿ, ನಮ್ಮಲ್ಲೇ ಇರಿಸಿಕೊಂಡು ಅವರಿಗೆ ಉತ್ತಮ ಆರೈಕೆ ಮಾಡಲಾಗುವುದು.
ಸಂಪರ್ಕಿಸಿ
89711 92936, 97410 64663

**ಗ್ಯಾಸ್ ಗೀಜರ್**
Fully Automatic 2990/- Rs.
R.O. +UV ವಾಟರ್ ಫಿಲ್ಟರ್, 5490/-
ಸೇಲ್ಸ್ & ಸರ್ವೀಸ್‌ಗಾಗಿ ಸಂಪರ್ಕಿಸಿ :
ಮರುತ್ ಎಂಟರ್ ಪ್ರೈಸಸ್
ವೈಎಂಸಿ ಕಾಂಪ್ಲೆಕ್ಸ್, ಹದಡಿ ರಸ್ತೆ, ಸ್ಟೇಡಿಯಂ ಎದುರು, ದಾವಣಗೆರೆ.
98868 96574, 98458 67574

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು, ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಬೇಕಾಗಿದ್ದಾರೆ**
B.A., B.Ed., ಮತ್ತು B.Sc., B.Ed., (PCM/CBZ) ಶಿಕ್ಷಕರು ಹಾಗೂ ಆಯಾ ಬೇಕಾಗಿದ್ದಾರೆ.
ನಂದಗೋಕುಲ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ
ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್ 6ನೇ ಕ್ರಾಸ್‌ನಲ್ಲಿರುವ ಹೊಸ RTO ಕಚೇರಿ ಹಿಂಭಾಗ, ಕೊಂಡಜ್ಜಿ ರಸ್ತೆ, ದಾವಣಗೆರೆ.
ಕಾರ್ಯದರ್ಶಿ, 99640 17729

**ಬೇಕಾಗಿದ್ದಾರೆ**
PUC /DEGREE ಆದ ಮಹಿಳೆಯರು ರ್‍ಯಾಕ್‌ನಿಂದ ಸ್ಟಾಕ್ ತೆಗೆಯಲು ಮಹಿಳೆಯರು ಔಷಧಿ ಅಂಗಡಿಗೆ ಬೇಕಾಗಿದ್ದಾರೆ.
ಭೇಟಿ ಸಮಯ ಸಂಜೆ: 6-30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ ಬಡಾವಣೆ, ದಾವಣಗೆರೆ.

**AVOID MOSQUITOES**
Mosquito Nets For Doors & Windows
SRI GOWRI ENTERPRISES
#7C2, 4th Cross, Near, Shaneshwara Temple Karur Industrial-Area, P.B. Road, DVG-6.
72049 94628

**PART TIME JOBS**
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ
(ಕೊರಿಯರ್ ಸೌಲಭ್ಯವಿದೆ)
91487 33213

**WANTED LABOURS**
Job-customer handling
Raju General Stores
Church Road, Beside to Church, P.J. Extn., Davangere.
85535 50436

**WANTED TELE SALES EXECUTIVE**
Urban Money is Looking Female Tele Sales Executive for office job Candidate should have Tele Sales experience in loans preferable
Good Salary + Incentives
Contact - 99805 70746

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ನೇರ ಪರೀಕ್ಷೆಗಳು**
PUC - ARTS / COMM/SCIENCE
NTC - ನರ್ಸರಿ ಟೀಚರ್ಸ್ ಟ್ರೇನಿಂಗ್.
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ -2 ವರ್ಷ. (Regular)
ಶ್ರೀ ಗಂಗೋತ್ರಿ ಕಮ್ಯುನಿಟಿ ಕಾಲೇಜ್ ಲಾಯರ್ ರೋಡ್ ,ದಾವಣಗೆರೆ.
86602 35013

**HOUSE FOR RENT**
2 BHK North facing with Borewell & Muncipal water and parking facility available at 11th Main, Opp. Indoor Stadium, S.S. Layout A Block.
AHMED 94481 34006

**ಅಧಿಕೃತ ಚೀಟಿ ಸಂಸ್ಥೆ**
ರೂ. 1 ಲಕ್ಷದ ಚೀಟಿ ಪ್ರಾರಂಭ 50 ಸದಸ್ಯರು, 1,400 ರಿಂದ 2,000ರೂ ವರೆಗೆ. ಸಂಪರ್ಕಿಸಿ
ಸ್ಕಂದ ಚಿಟ್ ಫಂಡ್ಸ್ (ರಿ.)
78997 75159

**WANTED Teachers**
Maths Teacher -1
6361662669

**ನಂ.1. ವಶೀಕರಣಂ**
ಕನ್ನಡ, ತೆಲುಗು, ಹಿಂದಿ ಭಾಷೆಯಲ್ಲಿ ಭವಿಷ್ಯ, ಸ್ತ್ರೀ-ಪುರುಷರ ಎಲ್ಲಾ ರೀತಿಯ ಸಮಸ್ಯೆಗಳಿಗೆ ಪರಿಹಾರ ಹೇಳುತ್ತಾರೆ.
ಶ್ರೀ ಲಕ್ಷ್ಮಿಕಾಂತ್ ಗುರೂಜಿ, ಆಂಧ್ರಪ್ರದೇಶ ಲಾಯರ್ ರಸ್ತೆ, ದಾವಣಗೆರೆ.
9740064163

**ಆತಿಥ್ಯ ರೆಸ್ಟೋರೆಂಟ್**
ಶುದ್ಧ ತಾಜಾ ಮಸಾಲಾ ದೋಸೆ ಹಿಟ್ಟು ದೊರೆಯುತ್ತದೆ.
ಸಂಪರ್ಕಿಸಿ :
81475 47421

**ಬೇಕಾಗಿದ್ದಾರೆ**
ಹೋಂ ಅಪ್ಲೈಯನ್ಸ್‌ನಲ್ಲಿ ಅನುಭವ ಇರುವ ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ.
ಸಂಪರ್ಕಿಸಿ.
95910 17008

**HOUSE FOR RENT (2 BHK)**
# 3887, Old RTO Office, MCC `B' Block, Near Ayyappa swamy temple, Davanagere.
96111 04206

# ವಿಪಕ್ಷ ನಾಯಕರಾಗಿ ಹೆಚ್ಡಿಕೆ ಖಚಿತ : ಲಕ್ಷ್ಮಣ್ ಸವದಿ



ಬೆಂಗಳೂರು, ಜು.12 - ವಿರೋಧ ಪಕ್ಷದ ನಾಯಕರಾಗಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಆಯ್ಕೆ ಖಚಿತ ಎಂದು ಮಾಜಿ ಉಪ ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ಹಿರಿಯ ಸದಸ್ಯ ಲಕ್ಷ್ಮಣ್ ಸವದಿ ವಿಧಾನಸಭೆಯಲ್ಲಿ ಹೇಳಿದರು.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಜೆಡಿಎಸ್ ಸದಸ್ಯ ಜಿ.ಟಿ.ದೇವೇಗೌಡ ಮಾತನಾಡುವಾಗ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಯಾವ ಕಾರಣಕ್ಕೆ ಅಧಿಕಾರದಿಂದ ಕೆಳಗಿಳಿಸಿ ಏತಕ್ಕೆ ಹಿಂಬದಿಗೆ ಸರಿಸಿದರು ಎಂಬುದನ್ನು ಬಿಜೆಪಿ ಇದುವರೆಗೂ ಬಹಿರಂಗಪಡಿಸಿಲ್ಲ. ಪ್ರತಿಪಕ್ಷದ ನಾಯಕನ್ನು ಆಯ್ಕೆ ಮಾಡಿಕೊಳ್ಳಲು ಆಗುತ್ತಿಲ್ಲ ಏಕೆ? ಎಂದು ಪ್ರಶ್ನಿಸಿದರು.

ಇವರ ಸಮಕಾಲೀನರಾದ ಸಹಕಾರಿ ಧುರೀಣ ಸವದಿ ತಕ್ಷಣವೇ ಮೇಲೆದ್ದು, ಗೌಡರೇ ಇದೆಲ್ಲವೂ ತಿಳಿದಿರಬೇಕಲ್ಲ. ಪ್ರತಿಪಕ್ಷದ ನಾಯಕನ ಸ್ಥಾನ ನಿಮ್ಮ ಮನೆಬಾಗಿಲಿಗೆ ಹುಡುಕಿಕೊಂಡು ಬರುತ್ತಿದೆ. ರಾಜ್ಯ ಬಿಜೆಪಿಯಲ್ಲಿನ ಆಂತರಿಕ ಕಚ್ಚಾಟದಿಂದ ವರಿಷ್ಠರು ರೋಸಿ ಹೋಗಿದ್ದಾರೆ. ನಾನು ಆ ಪಕ್ಷದಲ್ಲಿದ್ದವನು, ನನಗೂ ವರಿಷ್ಠರ ಸಂಪರ್ಕವಿದೆ. ಇದರ ಆಧಾರದ ಮೇಲೆ ಕುಮಾರಸ್ವಾಮಿ ಅವರನ್ನು ಪ್ರತಿಪಕ್ಷದ ನಾಯಕನ ಸ್ಥಾನಕ್ಕೆ ತರಲು ಬಿಜೆಪಿ ವರಿಷ್ಠರು ಮುಂದಾಗಿದ್ದಾರೆ.

ಇದೇ ಕಾರಣಕ್ಕೆ ರಾಜ್ಯಾಧ್ಯಕ್ಷರನ್ನು ನೇಮಕ ಮಾಡಿಲ್ಲ. ಪ್ರತಿಪಕ್ಷದ ನಾಯಕನನ್ನು ಆಯ್ಕೆ ಮಾಡಿಲ್ಲ. ಜೆಡಿಎಸ್ ಬಾಗಿಲಿಗೆ ಅಧಿಕಾರ ಬರುತ್ತಿದೆ ಗೌಡರೇ ಎಂದು ಹೇಳಿದರು.

# ಫೋಟೋ, ವಿಡಿಯೋಗ್ರಾಫರ್ ಸಂಘಕ್ಕೆ ರಾಜಶೇಖರ್, ಮಲ್ಲೇಶ್ ಆಯ್ಕೆ



ದಾವಣಗೆರೆ, ಜು.12- ತಾಲ್ಲೂಕು ಫೋಟೋ ಮತ್ತು ವೀಡಿಯೋ ಗ್ರಾಫರ್ಸ್ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಮಲ್ಲೇಶ್ ಎಚ್.ಪಟೇಲ್ ಹಾಗೂ ಗ್ರಾಮಾಂತರ ವಲಯದ ಅಧ್ಯಕ್ಷರಾಗಿ ಕೊಂಡಜ್ಜಿ ಎಸ್.ರಾಜಶೇಖರ್ ಆಯ್ಕೆಯಾಗಿದ್ದಾರೆ.

ಸಂಘದ ಕಚೇರಿಯಲ್ಲಿ ಸಂಘದ ಗೌರವಾಧ್ಯಕ್ಷ ಬಿ.ಮಂಜುನಾಥ್ ಅಧ್ಯಕ್ಷತೆಯಲ್ಲಿ ಮೊನ್ನೆ ನಡೆದ ವಿಶೇಷ ಸಭೆಯಲ್ಲಿ ಇವರೊಂದಿಗೆ ಸಂಘಟನಾ ಕಾರ್ಯದರ್ಶಿಯಾಗಿ ರಾಜು ಬಿ.ಕುಂದವಾಡ, ಸಹ ಕಾರ್ಯದರ್ಶಿಯಾಗಿ ಡಿ.ರಂಗನಾಥ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು ಎಂದು ಸಂಘದ ಅಧ್ಯಕ್ಷ ಎಂ.ಮನು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷರಾದ ಎಸ್.ಚಂದ್ರಶೇಖರ್, ಮಾಲತೇಶ ಜಾಧವ್, ಖಜಾಂಚಿ ಎ.ಎಸ್.ಗಣೇಶ್, ಜಂಟಿ ಕಾರ್ಯದರ್ಶಿ ಕೆ.ದೇವೇಂದ್ರಪ್ಪ, ಸಂಚಾಲಕ ಎಚ್.ಎಫ್.ಸಂಜಯ್, ನಿರ್ದೇಶಕರಾದ ಬಿ.ಎಂ.ಪಂಚಾಕ್ಷರಯ್ಯ, ಬಿ.ಕೆ.ಸುರೇಶ್, ಗೌರವ ಸಲಹೆಗಾರರಾದ ಸಂತೋಷ್ ದೊಡ್ಮನಿ ಇತರರು ಇದ್ದರು.

# ಇಂದು ಕೀಲು-ಮೂಳೆ ಸವೆತ ತಪಾಸಣೆ

ಡಾ|| ಡಿ.ಎಸ್. ಸತ್ಯೇಂದ್ರರಾವ್ ಲೆಗಸಿ ಅಂಡ್ ರಿಸರ್ಚ್ ಫೌಂಡೇಶನ್ ವತಿಯಿಂದ ಕೀಲು-ಮೂಳೆ ಸವೆತದ ತಪಾಸಣೆ ಮತ್ತು ಚಿಕಿತ್ಸಾ ಹಾಗೂ ಎಲ್ಲಾ ತರಹದ ನೋವುಗಳ ನಿರ್ಮೂಲನೆಗೆ - ಮಿರಾಕಲ್ ಥೆರಪಿ ಶಿಬಿರವು ಇಂದು ಅಕ್ಷರಧಾಮ ನಿಲಯದಲ್ಲಿ ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ರವರೆಗೆ ನಡೆಯಲಿದೆ. 20 ವರ್ಷ ಮೇಲ್ಪಟ್ಟವರು, ಹೆಣ್ಣುಮಕ್ಕಳು, ಮೈ-ಕೈ ನೋವಿರುವವರು, ಸಕ್ಕರೆ ಕಾಯಿಲೆಯಿಂದ ಬಳಲುತ್ತಿರುವ ಸಾರ್ವಜನಿಕರು ಹಾಗೂ ಆರೋಗ್ಯಾಸಕ್ತರು ಈ ಶಿಬಿರದ ಸದುಪಯೋಗ ಪಡೆದುಕೊಳ್ಳಬಹುದಾಗಿದೆ. ವಿವರಕ್ಕೆ ಸಂಪರ್ಕಿಸಿ : 91640 63608, 98441 24418

# ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮದ ತಳಹದಿಯ ಮೇಲೆ ಮಕ್ಕಳಿಗೆ ಶಿಕ್ಷಣ ನೀಡಬೇಕು



**ಭಾರತ ಸೇವಾದಳ ಜಿಲ್ಲಾಧ್ಯಕ್ಷ ಪ್ರೊ. ಚನ್ನಪ್ಪ ಕರೆ**

ದಾವಣಗೆರೆ, ಜು. 12 - ವಿದ್ಯಾರ್ಥಿಗಳಿಗೆ ವಿಶೇಷವಾದ ಮತ್ತು ವಿನೂತನವಾದ ಶಿಕ್ಷಣವನ್ನು ನೀಡುವುದಾದರೆ ಶಿಕ್ಷಕರಿಗೆ ಪುನಶ್ಚೇತನ ತರಬೇತಿಗಳ ಅಗತ್ಯತೆ ಇದೆ ಎಂದು ಭಾರತ ಸೇವಾದಳ ಜಿಲ್ಲಾ ಅಧ್ಯಕ್ಷ ಪ್ರೊ. ಎಚ್. ಚನ್ನಪ್ಪ ಪಲ್ಲಾಗಟ್ಟೆ ಅಭಿಪ್ರಾಯ ಪಟ್ಟರು.

ಭಾರತ ಸೇವಾದಳ ಭವನದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಇವರ ಸಹಯೋಗದಲ್ಲಿ ಇಂದು ಆಯೋಜಿಸಲಾಗಿದ್ದ ತಾಲ್ಲೂಕು ಮಟ್ಟದ ಸೇವಾದಳ ತರಬೇತಿ ಪಡೆದ ಶಿಕ್ಷಕರ ಪುನಶ್ಚೇತನ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬ ಶಿಕ್ಷಕರು ಸೇವಾದಳದ ಉದ್ದೇಶಗಳನ್ನು ತಿಳಿದುಕೊಂಡು ಸೇವಾದಳದ ವಾರ್ಷಿಕ ಕೈಪಿಡಿಯಂತೆ ಮಹಾತ್ಮ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮದ ತಳಹದಿಯ ಮೇಲೆ ಮಕ್ಕಳಿಗೆ ಶಿಕ್ಷಣವನ್ನು ನೀಡಬೇಕೆಂದು ಕರೆ ನೀಡಿದರು.

ಪ್ರಭಾರಿ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳಾದ ಎನ್. ಮಂಜುಳಾ ಮಾತನಾಡಿ, ಪ್ರತಿಯೊಂದು ಶಾಲೆಗಳಲ್ಲೂ ಸೇವಾದಳ ಘಟಕವನ್ನು ಆರಂಭಿಸಬೇಕೆಂದು ಶಿಕ್ಷಕರಿಗೆ ತಿಳಿಸಿದರು.

ಇದೇ ಸಂದರ್ಭದಲ್ಲಿ ಭಾರತ ಸೇವಾದಳದ ನೇತಾರ ದಿ. ಮುನಿಸ್ವಾಮಿ ಅವರ ಭಾವಚಿತ್ರಕ್ಕೆ ಪುಷ್ಪ ನಮನವನ್ನು ಸಲ್ಲಿಸಿ ಗೌರವ ಸಮರ್ಪಣೆಯನ್ನು ಮಾಡಲಾಯಿತು. ನಿಟುವಳ್ಳಿ ಪ್ರೌಢಶಾಲೆಯ ಸೇವಾದಳ ವಿದ್ಯಾರ್ಥಿನಿ ಕ್ಯಾನ್ಸರ್ ನಿಂದ ಬಳಲುತ್ತಿದ್ದು ಅವರಿಗೆ ಆರ್ಥಿಕ ಸಹಾಯ ಧನವನ್ನು ನೀಡಲಾಯಿತು.

ತಾಲ್ಲೂಕು ದೈಹಿಕ ಶಿಕ್ಷಣ ಪರೀಕ್ಷಕ ಹುಸೇನ್ ಪೀರ್, ಸೇವಾದಳ ತಾಲ್ಲೂಕು ಸಮಿತಿ ಉಪಾಧ್ಯಕ್ಷರಾದ ಕೆ. ಆರ್. ಸಿದ್ದೇಶಪ್ಪ, ತಾಲ್ಲೂಕು ಸೇವಾದಳ ಕೋಶ್ಯಾಧ್ಯಕ್ಷ ಎಸ್. ಎನ್. ರಮೇಶ್, ದೈಹಿಕ ಶಿಕ್ಷಣ ಸಂಘದ ಪದಾಧಿಕಾರಿಗಳಾದ ಗಣೇಶ್, ಶ್ರೀನಿವಾಸ್, ಸಂತೋಷ್, ಸತ್ಯನಾರಾಯಣ್ ಉಪಸ್ಥಿತರಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ತಾಲ್ಲೂಕು ಅಧ್ಯಕ್ಷ ಹಾಸಬಾವಿ ಕರಿಬಸಪ್ಪ ವಹಿಸಿದ್ದರು. ವಲಯ ಸಂಘಟಕರಾದ ಎಂ. ಅಣ್ಣಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಎ.ಆರ್. ಗೋಪಾಲಪ್ಪ ಸ್ವಾಗತಿಸಿದರು. ರಾಘವೇಂದ್ರ ವಂದಿಸಿದರು.

# ಹಿಂದುಳಿದ ವರ್ಗದ ಅಭಿವೃದ್ಧಿಗೆ ಶ್ರಮಿಸಿದ ಮಹಾನ್ ವ್ಯಕ್ತಿ



**'ಎಲ್.ಜಿ. ಹಾವನೂರ್ ಆಶಯಗಳಿಗೆ 50 ವರ್ಷ'ದ ಕಾರ್ಯಕ್ರಮ**

ದಾವಣಗೆರೆ, ಜು.12- ಎಲ್.ಜಿ. ಹಾವನೂರ್ ಅವರು ನಾಯಕ ಸಮಾಜದ ಕಣ್ಮಣಿ, ಹಿಂದುಳಿದ ವರ್ಗಗಳ ಸರ್ವೋತೋಮುಖ ಅಭಿವೃದ್ಧಿಗೆ ಶ್ರಮಿಸಿದ ಮಹಾನ್ ವ್ಯಕ್ತಿ ಎಂದು ನಾಯಕ ಸಮಾಜದ ಅಧ್ಯಕ್ಷ ಬಿ. ವೀರಣ್ಣ ಹೇಳಿದರು.

ನಗರದ ನಾಯಕ ವಿದ್ಯಾರ್ಥಿ ನಿಲಯದಲ್ಲಿ ಜರುಗಿದ 'ಎಲ್.ಜಿ. ಹಾವನೂರ್ ಆಶಯಗಳಿಗೆ 50 ವರ್ಷ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು

ಆಗಿನ ಮುಖ್ಯಮಂತ್ರಿ ದೇವರಾಜ ಅರಸು ಅವರ ಬಲಗೈಯಾಗಿದ್ದ ಹಾವನೂರು ಹಿಂದುಳಿದ ವರ್ಗಗಳಿಗೆ ಸರ್ಕಾರಿ ಹುದ್ದೆಗಳನ್ನು ಮೀಸಲಿಡಬೇಕೆಂದು ಹೇಳಿದ ಮೊದಲಿಗರು. ಮೀಸಲಾತಿ ವಿಚಾರದಲ್ಲಿ ಮುಂದುವರೆದ ಜನಾಂಗದವರು ಮತ್ತು ಹಿಂದುಳಿದವರು ಹಾವನೂರು ಅವರ ಆಶಯಗಳನ್ನು ಅರ್ಥೈಸಿಕೊಳ್ಳದೆ ಅವರನ್ನು ವಿರೋಧಿಸಿದರು, ಅಷ್ಟೇ ಅಲ್ಲಾ ಅವರನ್ನು ಮುಗಿಸಲು ಪ್ರಯತ್ನಿಸಿದರು. ಅವರ ಮಕ್ಕಳು ಓದುತ್ತಿದ್ದ ಶಾಲೆಗೆ ಹೋಗಿ ಗಲಾಟೆ ಮಾಡಿದರು. ಆದಾಗ್ಯೂ ಛಲ ಬಿಡದೆ ಸಂಪೂರ್ಣವಾಗಿ ಹಿಂದುಳಿದ ವರ್ಗದ ವರದಿಯನ್ನು ಜಾರಿಗೆ ತಂದರು. ಇದನ್ನು ಸುಪ್ರೀಂ ಕೋರ್ಟ್ ನಲ್ಲಿ ಮೀಸಲಾತಿ ವಿರೋಧಿಗಳು ಚಾಲೆಂಜ್ ಮಾಡಿದರು.

ಕಾನೂನು ಪಂಡಿತರಾಗಿದ್ದ ಎಲ್.ಜಿ. ಹಾವನೂರ್ ವರದಿ ಸುಪ್ರೀಂ ಕೋರ್ಟ್‌ನಲ್ಲಿ ಅಂಗೀಕಾರ ಆಯಿತು. ಅದೇ ಸಂದರ್ಭದಲ್ಲಿ ತುರ್ತು ಪರಿಸ್ಥಿತಿ ಜಾರಿ ಬಂದಿದ್ದರಿಂದ ಪ್ರತಿಭಟನೆ ಮಾಡುವವರು ಮೂಲೆ ಗುಂಪಾದರು. ಇವರ ವರದಿಯಿಂದ ಲಕ್ಷಾಂತರ ಜನರು ಉದ್ಯೋಗ, ಬಡ್ತಿ, ಆರ್ಥಿಕ ಸಹಾಯ ಪಡೆದಿದ್ದಾರೆ. ಇಂತಹ ಮಹಾನ್ ವ್ಯಕ್ತಿಯ ಫೋಟೋವನ್ನು ಪ್ರತಿಯೊಬ್ಬ ಹಿಂದುಳಿದವರು ಹಾಕಿಕೊಂಡು ಸ್ಮರಣೆ ಮಾಡುವಂತಹ ಕೆಲಸ ಮಾಡಬೇಕಾಗಿದೆ ಎಂದರು.

ಈ ಸಂದರ್ಭದಲ್ಲಿ ನಾಯಕ ವಿದ್ಯಾರ್ಥಿ ನಿಲಯದ ಉಪಾಧ್ಯಕ್ಷ ಎನ್.ಎಂ.ಆಂಜನೇಯ ಗುರೂಜಿ, ಕಾರ್ಯದರ್ಶಿ ಶ್ಯಾಗಲೆ ಕೆ.ಆರ್. ಮಂಜುನಾಥ್, ಮಾಜಿ ನಗರಸಭೆ ಸದಸ್ಯರುಗಳಾದ ಕರಿಗಾರ್ ಬಸಪ್ಪ, ಉಸ್ಮಾನ್, ಹೊಂಡದ ಸರ್ಕಲ್ ಬಸ್ ಮಂಜಣ್ಣ, ದೇವರಬೆಳಕೆರೆ ಮಹೇಶ್ವರಪ್ಪ, ಪ್ರಜ್ವಲ್ ಎಸ್.ಕೆ.ಸ್ವಾಮಿ ಇತರರು ಹಾಜರಿದ್ದರು.

# ರೈತ ವಿರೋಧಿ ನೀತಿ ಅನುಸರಿಸುತ್ತಿರುವ ಸಿಎಂ

**ಬಿಜೆಪಿ ಮುಖಂಡ ಪಾಲಾಕ್ಷಗೌಡ್ರು ಆರೋಪ**

ದಾವಣಗೆರೆ, ಜು. 12- ರೈತಪರ ಯೋಜನೆಗಳನ್ನು ಕೈಬಿಡುವ ಮೂಲಕ ರಾಜ್ಯ ಕಾಂಗ್ರೆಸ್ ಪಕ್ಷದವರು ದ್ವೇಷದ ರಾಜಕಾರಣ ಮಾಡುತ್ತಿದ್ದು, ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ರೈತ ವಿರೋಧಿ ನೀತಿ ಅನುಸರಿಸುತ್ತಿದ್ದಾರೆ ಎಂದು ಬಿಜೆಪಿ ಮುಖಂಡ ಪಾಲಾಕ್ಷಗೌಡ್ರು ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ಎಪಿಎಂಸಿ ತಿದ್ದುಪಡಿ ಕಾಯ್ದೆ ರದ್ದು, ವಿದ್ಯುತ್ ಬೆಲೆ ಏರಿಕೆ, ರೈತ ವಿದ್ಯಾನಿಧಿ, ಜಿಲ್ಲೆಗೊಂದು ಗೋಶಾಲೆ, ಭೂ ಸಿರಿ ಯೋಜನೆ, ಕಿಸಾನ್ ಸಮ್ಮಾನ್ ನಿಧಿ ಯೋಜನೆ, ರೈತ ಶಕ್ತಿ ಯೋಜನೆಗಳನ್ನು ಕೈಬಿಡುವ ಮೂಲಕ ರೈತ ವಿರೋಧಿ ಧೋರಣೆಯನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ಅನುಸರಿಸುತ್ತಿದೆ ಎಂದರು.

ಬಿಜೆಪಿ ಸರ್ಕಾರದಲ್ಲಿ ನೀರಾವರಿ ಯೋಜನೆಗಳಿಗೆ 23 ಸಾವಿರ ಕೋಟಿ ಅನುದಾನ ಒದಗಿಸಿದ್ದು, ಅದನ್ನು ಈಗ 19 ಸಾವಿರ ಕೋಟಿ ರೂ.ಗೆ ಇಳಿಕೆ ಮಾಡಲಾಗಿದೆ. ಮೇಕೆದಾಟು ಯೋಜನೆಗಾಗಿ ಕಾಂಗ್ರೆಸ್ ಪಾದಯಾತ್ರೆ ಮಾಡಿದ್ದು ಕೇವಲ ರಾಜಕೀಯ ಗಿಮಿಕ್‌ಗಾಗಿ ಎಂಬುದನ್ನು ನಿರೂಪಿಸಿದೆ ಎಂದು ಹೇಳಿದರು.

ಬಿಜೆಪಿ ಸರ್ಕಾರದಲ್ಲಿನ ಮಹತ್ತರ ಯೋಜನೆಗಳನ್ನು ಕೈಬಿಡುವ ಜೊತೆಗೆ ಮಠ ಮಾನ್ಯಗಳಿಗೂ ಅನುದಾನ ಕೈಬಿಟ್ಟಿದೆ. ಗೋ ಮಸೂದೆಯನ್ನು ಹಿಂಪಡೆಯುವ ಹುನ್ನಾರ ಕೂಡ ನಡೆಯುತ್ತಿದೆ ಎಂದು ದೂರಿದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಲೋಕಿಕೆರೆ ನಾಗರಾಜ್, ಮುಖಂಡರಾದ ಬಾತಿ ಶಿವಕುಮಾರ್, ಅಣಜಿ ಗುಡ್ಡೇಶ್, ಶಿವಪ್ರಕಾಶ್ ಉಪಸ್ಥಿತರಿದ್ದರು.

# ಹರಪನಹಳ್ಳಿ ತಾ. ಅರ್ಚಕರ ಸಂಘದ ಅಧ್ಯಕ್ಷರಾಗಿ ವಿಷ್ಣುವರ್ಧನ್ ಪೂಜಾರಿ



ಹರಪನಹಳ್ಳಿ, ಜು.12- ವಿದ್ಯಾಸಿರಿ ನಾಡಿನ ಹಿಂದೂ ದೇವಾಲಯಗಳ ಅರ್ಚಕರ, ಆಗಮಿಕರ ಮತ್ತು ಉಪಾದಿವಂತರ ಒಕ್ಕೂಟದ ತಾಲ್ಲೂಕು ಅಧ್ಯಕ್ಷರಾಗಿ ದೇವರತಿಮ್ಮಲಾಪುರದ ಶ್ರೀ ಲಕ್ಷ್ಮೀ ವೆಂಕಟೇಶ್ವರ ದೇವಾಲಯದ ಅರ್ಚಕ ವಿಷ್ಣುವರ್ಧನ್ ಪೂಜಾರಿ ಹಾಗೂ ಕಾರ್ಯದರ್ಶಿಯಾಗಿ ಹರಪನಹಳ್ಳಿ ಪಟ್ಟಣದ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಅರ್ಚಕ ಮಾರುತಿ ಪೂಜಾರ್ ಅವರನ್ನು ನೇಮಕ ಮಾಡಿ ಆದೇಶಿಸಲಾಗಿದೆ.

# ಹಡಗಲಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್‌ಗೆ ಅವಿರೋಧ ಆಯ್ಕೆ

ಹೂವಿನಹಡಗಲಿ, ಜು. 12- ಹೂವಿನಹಡಗಲಿಯ ಹಡಗಲಿ ಅರ್ಬನ್ ಕೋ-ಆಪರೇಟೀವ್ ಬ್ಯಾಂಕಿನ ಚುನಾವಣೆಗೆ ಸ್ಪರ್ಧಿಸಿದ್ದ 13 ಅಭ್ಯರ್ಥಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ.

ಸಾಮಾನ್ಯ ಕ್ಷೇತ್ರದಿಂದ ಶಿವಪ್ಪ ಗಡ್ಡಿಗೌಡ್ರ, ಜಿ.ವೇಣುಗೋಪಾಲ್ ಶೆಟ್ಟಿ, ಎಂ. ನಾಗಭೂಷಣ್, ಎಸ್.ಎಂ. ರವೀಂದ್ರ ಶೆಟ್ಟಿ, ವೀರೇಶ್ ಹಣ್ಣಿ, ಮುರುಗೇಶ ತುರುಕಾಣಿ, ರಮೇಶ್ ಮೇಟಿ, ಮಹಿಳಾ ಮೀಸಲು ಕ್ಷೇತ್ರದಿಂದ ಮಂಗಳಾ ಸೊಪ್ಪಿನ, ಹೆಚ್. ಸುಮಾ ವಿಜಯ, ಹಿಂದುಳಿದ ಎ ವರ್ಗದಿಂದ ಕೆ.ಎಂ. ಗಂಗಾಧರ, ಹಿಂದುಳಿದ ಬಿ ವರ್ಗದಿಂದ ಎನ್.ಎಂ. ವಹಾಬ್, ಪರಿಶಿಷ್ಟ ಜಾತಿಯಿಂದ ಲಾಲ್ಯಾನಾಯ್ಕ, ಪರಿಶಿಷ್ಟ ಪಂಗಡದಿಂದ ಬಿ. ದೇವೇಂದ್ರಪ್ಪ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ.

# ರೈತರಿಂದ ಬೆಳೆ ವಿಮಾ ನೋಂದಣಿಗೆ ಅರ್ಜಿ ಆಹ್ವಾನ

ದಾವಣಗೆರೆ, ಜು. 12 - ಮರು ವಿನ್ಯಾಸಗೊಳಿಸಲಾದ ಹವಮಾನ ಆಧಾರಿತ ಬೆಳೆ ವಿಮಾ ಯೋಜನೆಯಡಿ 2023-24ನೇ ಸಾಲಿನ ತೋಟಗಾರಿಕಾ ಬೆಳೆಗಳಿಗೆ ವಿಮಾ ನೋಂದಣಿಗೆ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ.

**ಮರು ವಿನ್ಯಾಸಗೊಳಿಸಿದ ಹವಾಮಾನ ಆಧಾರಿತ ವಿಮಾ ಯೋಜನೆ:** ಅಡಿಕೆ ಬೆಳೆ ವಿಮೆಯನ್ನು ಜಿಲ್ಲೆಯ ಎಲ್ಲಾ ತಾಲ್ಲೂಕುಗಳ, ಎಲ್ಲಾ ಗ್ರಾಮ ಪಂಚಾಯಿತಿಗಳ ರೈತರು, ಕಾಳು ಮೆಣಸು ಬೆಳೆ ವಿಮೆಗೆ ಚನ್ನಗಿರಿ ತಾಲ್ಲೂಕಿನ ಆಯ್ದ ಗ್ರಾಮ ಪಂಚಾಯಿತಿಗಳ ರೈತರು, ದಾಳಿಂಬೆ ಬೆಳೆ ವಿಮೆಗೆ ಚನ್ನಗಿರಿ, ದಾವಣಗೆರೆ ಮತ್ತು ಜಗಳೂರು ತಾಲ್ಲೂಕಿನ ಆಯ್ದ ಗ್ರಾಮಗಳು, ಮಾವು ಬೆಳೆ ವಿಮೆಗೆ ಚನ್ನಗಿರಿ ತಾಲ್ಲೂಕಿನ ಆಯ್ದ ಗ್ರಾಮಗಳು, ವೀಳ್ಯೆದೆಲೆ ಬೆಳೆ ವಿಮೆಗೆ ಹೊನ್ನಾಳಿ, ನ್ಯಾಮತಿ, ಚನ್ನಗಿರಿ, ದಾವಣಗೆರೆ ಮತ್ತು ಹರಿಹರ ತಾಲ್ಲೂಕಿನ ಆಯ್ದ ಗ್ರಾಮಗಳ ರೈತರು ನೋಂದಣಿ ಮಾಡಿಸಬಹುದು.

ರೈತರು ತಮ್ಮ ಬೆಳೆಗಳಿಗೆ ವಿಮಾ ಕಂತನ್ನು ಹತ್ತಿರದ ಬ್ಯಾಂಕ್, ಗ್ರಾಮ ಒನ್, ಹಾಗೂ ಸಾರ್ವಜನಿಕ ಸೇವಾ ಕೇಂದ್ರಗಳಲ್ಲಿ ಅರ್ಜಿಗಳನ್ನು ಸಲ್ಲಿಸಿ ವಿಮಾ ಯೋಜನೆಗೆ ಪಾವತಿಸಿ ನೋಂದಾಯಿಸಬಹುದು. ನೋಂದಣಿಯಾಗಲು ಇದೇ ದಿನಾಂಕ 15 ಕೊನೆಯ ದಿನಾಂಕವಾಗಿರುತ್ತದೆ. ಹೆಚ್.ಡಿ.ಎಫ್.ಸಿ ಇಆರ್‌ಜಿಓ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್ ವಿಮಾ ಸಂಸ್ಥೆಯ ಟೋಲ್ ಫ್ರೀ ನಂ.18002660700ಗೆ ಕರೆ ಮಾಡಬಹುದು. ಹೆಚ್ಚಿನ ಮಾಹಿತಿಗಾಗಿ ರೈತರು ತಾಲ್ಲೂಕು ಅಧಿಕಾರಿಗಳನ್ನು ಸಂಪರ್ಕಿಸಬಹುದು ಎಂದು ತೋಟಗಾರಿಕೆ ಉಪ ನಿರ್ದೇಶಕರು ತಿಳಿಸಿದ್ದಾರೆ.

# ಜೈನಮುನಿ ಹತ್ಯೆ : ರಾಣೇಬೆನ್ನೂರಿನಲ್ಲಿ ನಾಳೆ ಮೌನ ಮೆರವಣಿಗೆ



ರಾಣೇಬೆನ್ನೂರು, ಜು. 12 - ಚಿಕ್ಕೋಡಿ ತಾಲ್ಲೂಕಿನ ಹಿರೇಕೋಡಿ ನಂದಿ ಪರ್ವತ ಆಶ್ರಮದ ಜೈನ್ ಮುನಿ ಶ್ರೀ ಕಾಮಕುಮಾರ ನಂದಿ ಅವರನ್ನು ಬರ್ಬರವಾಗಿ ಹತ್ಯೆಗೈದ ಘಟನೆಯನ್ನು ಖಂಡಿಸಿ ರಾಣೇಬೆನ್ನೂರು ಜೈನ್ ಶ್ವೇತಾಂಬರ ಸಂಘದವರು ಆಚಾರ್ಯ ಮಹೇಂದ್ರಸಾಗರ ಸೂರೀಶ್ವರಜೀ ಅವರ ನೇತೃತ್ವದಲ್ಲಿ ನಾಡಿದ್ದು ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ರಂಗನಾಥ ನಗರದ ಜೈನ್ ದೇವಸ್ಥಾನದಿಂದ ತಹಶೀಲ್ದಾರ್ ಕಛೇರಿ ವರೆಗೆ ಮೌನ ಮೆರವಣಿಗೆ ಮೂಲಕ ತೆರಳಿ ತಹಶೀಲ್ದಾರ್ ಮೂಲಕ ರಾಜ್ಯಪಾಲ ಹಾಗೂ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದು ಸಂಘದ ಅಧ್ಯಕ್ಷ ಪ್ರಕಾಶ್ ಜೈನ್ ತಿಳಿಸಿದ್ದಾರೆ.

# ಕೊಬ್ಬರಿಗೆ ರಾಜ್ಯದಿಂದ 1,250 ರೂ. ಪ್ರೋತ್ಸಾಹ ಧನ

**(1ನೇ ಪುಟದಿಂದ)** ನೋಂದಾಯಿಸುವವರಿಗೂ ಪ್ರೋತ್ಸಾಹ ಧನ ದೊರೆಯಲಿದೆ ಎಂದು ಸ್ಪಷ್ಟಪಡಿಸಿದರು.

ರಾಜ್ಯಸರ್ಕಾರದಿಂದ ಇದುವರೆಗೆ 1,000 ರೂ. ಮಾತ್ರ ಪ್ರೋತ್ಸಾಹ ಧನ ನೀಡಲಾಗಿತ್ತು. ಇದೇ ಮೊದಲ ಬಾರಿಗೆ 1,250 ರೂ. ಪ್ರೋತ್ಸಾಹ ಧನ ಕೊಡಲಾಗುತ್ತಿದೆ ಎಂದರು. ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರವು ಬೆಂಬಲ ಬೆಲೆ ಯೋಜನೆಯಡಿ ಪ್ರತೀ ಕ್ವಿಂಟಾಲ್ ಕೊಬ್ಬರಿಗೆ 16,500 ರೂ.ವರೆಗೆ ಹೆಚ್ಚಿಸಬೇಕು. ಉತ್ಪಾದನೆಯ ಶೇ.25 ರಿಂದ ಶೇ.50ರಷ್ಟು ಖರೀದಿಗೆ ಅವಕಾಶ ನೀಡುವಂತೆ ಮನವಿ ಮಾಡಿದ್ದೇವೆ ಎಂದರು.

ಇದಕ್ಕೂ ಮುನ್ನ ಮಾತನಾಡಿದ ಆಡಳಿತ ಪಕ್ಷದ ಕೆ.ಎಂ.ಶಿವಲಿಂಗೇಗೌಡ ಕೊಬ್ಬರಿ ಖರೀದಿಗೆ ರಾಜ್ಯ ಸರ್ಕಾರ ಪ್ರತೀ ಕ್ವಿಂಟಾಲ್‌ಗೆ 1,250 ರೂ. ನೀಡುತ್ತಿರುವುದು ಸ್ವಾಗತಾರ್ಹ. ಆದರೂ ಕೊಬ್ಬರಿ ಬೆಳೆಯುವ ರೈತರ ಸಮಸ್ಯೆ ಬಗೆಹರಿಯುವುದಿಲ್ಲ. ಕೇಂದ್ರ ಸರ್ಕಾರ ಎಂಎಸ್‌ಪಿ ದರವನ್ನು ಪರಿಷ್ಕರಣೆ ಮಾಡಬೇಕೆಂದು ಒತ್ತಾಯಿಸಿದರು.

ಜೆಡಿಎಸ್ ಶಾಸಕ ಸಿ.ಎನ್.ಬಾಲಕೃಷ್ಣ ಮಾತನಾಡಿ, ಈಗಾಗಲೇ ಕೊಬ್ಬರಿಯನ್ನು ಬೆಂಬಲ ಬೆಲೆಯಡಿ ಮಾರಾಟ ಮಾಡಿದವರಿಗೂ ಪ್ರೋತ್ಸಾಹ ಧನ ನೀಡಬೇಕು. ಕೊಬ್ಬರಿ ಬೆಂಬಲ ಬೆಲೆ ಹೆಚ್ಚಳಕ್ಕೆ ಕೇಂದ್ರ ಸರ್ಕಾರದ ಬಳಿ ನಿಯೋಗ ಕೊಂಡೊಯ್ಯಬೇಕು. ಪ್ರೋತ್ಸಾಹ ಧನವನ್ನು ಪ್ರತೀ ಕ್ವಿಂಟಾಲ್‌ಗೆ 2,500 ರೂ.ಗೆ ಹೆಚ್ಚಿಸಬೇಕು ಎಂದು ಆಗ್ರಹಿಸಿದೆ. ಆಡಳಿತ ಪಕ್ಷದ ಮತ್ತೊಬ್ಬ ಶಾಸಕ ಷಡಕ್ಷರಿ ಮಾತನಾಡಿ, ಕೊಬ್ಬರಿ ಖರೀದಿ ಮಾಡುವ ಅವಧಿ ಹಾಗೂ ಪ್ರಮಾಣವನ್ನು ಹೆಚ್ಚಳ ಮಾಡಲು ಮನವಿ ಮಾಡಬೇಕೆಂದು ಕೋರಿದರು.

# ನಗರಸಭೆ ಅನುದಾನಕ್ಕಾಗಿ ಮನವಿ



**ಹರಿಹರ**

ಹರಿಹರ, ಜು. 12- ನಗರಸಭೆಯ ಅಧ್ಯಕ್ಷರಾದ ನಿಂಬಕ್ಕ ಚಂದಪೂರ್ ಅವರು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಅವರನ್ನು ಭೇಟಿ ಮಾಡಿ, ನಗರಸಭೆಯ ನಗರೋತ್ಥಾನ ಮತ್ತು ನಗರಸಭೆಯ ವಿಶೇಷ ಅನುದಾನ ಸೇರಿ 24 ಕೋಟಿ ರೂಪಾಯಿ ಹಣವನ್ನು ಶೀಘ್ರದಲ್ಲಿ ಬಿಡುಗಡೆ ಮಾಡುವಂತೆ ಮನವಿ ಮಾಡಿಕೊಂಡರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ನಗರಸಭೆ ಉಪಾಧ್ಯಕ್ಷ ಕೆ.ಜಿ. ಸಿದ್ದೇಶ್, ನಗರಸಭೆ ಸದಸ್ಯ ಪಿ.ಎನ್ ವೀರುಪಾಕ್ಷಪ್ಪ, ಪೌರಾಯುಕ್ತ ಐಗೂರು ಬಸವರಾಜ್, ಜೆಎಡಿಸ್ ಮುಖಂಡ ಸುರೇಶ್ ಚಂದಪೂರ್ ಇತರರು ಹಾಜರಿದ್ದರು.

# ಶ್ರೀರಾಮ್ ಬಡಾವಣೆ ಸರ್ಕಾರಿ ಶಾಲೆಯಲ್ಲಿ ಯೆಲ್ಲೋ ಡೇ ಆಚರಣೆ



ದಾವಣಗೆರೆ, ಜು. 12 - ನಗರದ ಶ್ರೀರಾಮ್ ಬಡಾವಣೆಯ ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 'ಯೆಲ್ಲೋ ಡೇ' ಆಚರಿಸಲಾಯಿತು. ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಮಕ್ಕಳಲ್ಲಿ ಹೊಸತನ, ಸಕಾರಾತ್ಮಕ ಹಾಗೂ ಬೌದ್ಧಿಕ ಸಾಮರ್ಥ್ಯದ ಬೆಳವಣಿಗೆಯ ಸಾಂಕೇತಿಕವಾಗಿ ಶಾಲೆಯ ಆಂಗ್ಲ ಭಾಷಾ ಶಿಕ್ಷಕರಾದ ನಾಗವೇಣಿ ಎ.ಎಲ್ ಮಾರ್ಗದರ್ಶನದಲ್ಲಿ 'ಯೆಲ್ಲೋ ಡೇ' ಆಚರಿಸಲಾಯಿತು.

# ಅಂತರರಾಷ್ಟ್ರೀಯ ಯೋಗಗುರು ಪರಶುರಾಮಪ್ಪಗೆ ಪ್ರಶಸ್ತಿ



ದಾವಣಗೆರೆ, ಜು. 12 - ಬೆಂಗಳೂರಿನ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಮೊನ್ನೆ ನಡೆದ ಕಾರ್ಯಕ್ರಮದಲ್ಲಿ ನಗರದ ಅಂತರರಾಷ್ಟ್ರೀಯ ಯೋಗ ಗುರು ಎನ್. ಪರಶುರಾಮಪ್ಪ ಅವರಿಗೆ ಲೈಫ್ ಅಚೀವ್‌ಮೆಂಟ್ ಅವಾರ್ಡ್9 ಪ್ರದಾನ ಮಾಡಲಾಯಿತು.

9ನೇ ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ಎಸ್.ಜಿ.ಎಸ್. ಅಂತರರಾಷ್ಟ್ರೀಯ ಯೋಗ ಫೆಡರೇಶನ್ ಕಾಲೇಜು ಮತ್ತು ಸಂಶೋಧನಾ ಕೇಂದ್ರ, ರಾಜ್ಯ ಯುವಜನ ಸೇವಾ ಕ್ರೀಡಾ ಇಲಾಖೆ, ಕೇಂದ್ರ ಸರ್ಕಾರದ ನೆಹರು ಯುವ ಕೇಂದ್ರ, ಕರ್ನಾಟಕ ಯೋಗಾಸನ ಸ್ಪೋರ್ಟ್ಸ್9 ಅಸೋಸಿಯೇಷನ್ ಸಹಯೋಗದಲ್ಲಿ ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಯೋಗ ಚಾಂಪಿಯನ್ ಶಿಪ್ ಕಾರ್ಯಕ್ರಮದಲ್ಲಿ ಪರಶುರಾಮಪ್ಪ ಅವರನ್ನು ಯೋಗ ಕ್ಷೇತ್ರದಲ್ಲಿನ ಸಾಧನೆಯನ್ನು ಗುರುತಿಸಿ ಈ ಅವಾಡ್ ಪ್ರದಾನ ಮಾಡಲಾಯಿತು.

ಈ ಸಂದರ್ಭದಲ್ಲಿ ಯುವಜನ ಸೇವಾ ಕ್ರೀಡಾ ಸಚಿವ ಎನ್. ನಾಗೇಂದ್ರ, ಕೆಎಸ್ ಎಂಎಸ್ ಸಿ ವ್ಯವಸ್ಥಾಪಕ ನಿರ್ದೇಶಕರು, ಎಸ್ ಜಿಎಸ್ ಅಂತರರಾಷ್ಟ್ರೀಯ ಯೋಗಾಸನ ಸ್ಪೋರ್ಟ್ಸ್9 ಫೆಡರೇಶನ್ ನಿರ್ದೇಶಕ ಎಸ್. ರಂಗಪ್ಪ, ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿಮಯ ಅಧ್ಯಕ್ಷ ಹಾಗೂ ಕರ್ನಾಟಕ ಯೋಗಾ ಸನ ಸ್ಪೋರ್ಟ್ಸ್9 ಅಸೋಸಿಯನ್ ಉಪಾಧ್ಯಕ್ಷ ಎಂ.ಲಕ್ಷ್ಮೀನಾರಾಯಣ, ಕೆ.ಎಸ್. ಶಕುಂತಲಾ ದೇವಿ, ಸುರೇಶ್ ಕುಮಾರ್, ಡಾ.ಎಂ. ನಿರಂಜನ ಮೂರ್ತಿ, ಎಜಿಕೆ ಜಯಪ್ರಕಾಶ್ ಸೇರಿದಂತೆ ಇನ್ನಿತರರು ಇದ್ದರು.

# ಹಡಪದ ಅಪ್ಪಣ್ಣ ಸಮಾಜ ಶಿಕ್ಷಣ, ಸಂಘಟನೆಗೆ ಒತ್ತು ನೀಡಬೇಕು : ಶ್ರೀ ಅನ್ನದಾನಿ ಭಾರತಿ ಸ್ವಾಮೀಜಿ



**ಮಲೇಬೆನ್ನೂರು**

ಮಲೇಬೆನ್ನೂರು, ಜು.12- ಹಡಪದ ಅಪ್ಪಣ ಸಮಾಜದವರು ತಮ್ಮ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡಿಸಿ, ಅವರು ಉನ್ನತ ಸ್ಥಾನಕ್ಕೆ ಹೋಗುವಂತೆ ಮಾಡಬೇಕೆಂದು ಹಡಪದ ಅಪ್ಪಣ್ಣ ಸಮಾಜದ ಗುರುಗಳಾದ ಶ್ರೀ ಅನ್ನದಾನಿ ಭಾರತಿ ಸ್ವಾಮೀಜಿ ಹೇಳಿದರು.

ಇಲ್ಲಿನ ಬಸವೇಶ್ವರ ಕಲ್ಯಾಣ ಮಂಟಪದಲ್ಲಿ ಹಡಪದ ಅಪ್ಪಣ್ಣ ಸಮಾಜದ ವತಿಯಿಂದ ಹಮ್ಮಿಕೊಂಡಿದ್ದ ವಚನಕಾರ ಹಡಪದ ಅಪ್ಪಣ್ಣ ಅವರ 889ನೇ ಜಯಂತಿ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಸಮಾಜದಲ್ಲಿರುವ ಮೂಢನಂಬಿಕೆ, ಮೌಢ್ಯ, ಅಸ್ಪೃಶ್ಯತೆ ಹೋಗಲಾಡಿಸಲು ಶಿಕ್ಷಣ, ಸಂಘಟನೆ ಪರಿಹಾರವಾಗಿದೆ ಎಂದು ಸ್ವಾಮೀಜಿ ಸಮಾಜದವರಿಗೆ ಅರಿವು ಮೂಡಿಸಿದರು.

ಸಮಾಜದ ಜಿಲ್ಲಾಧ್ಯಕ್ಷ ಶಶಿಧರ್, ತಾಲ್ಲೂಕು ಅಧ್ಯಕ್ಷ ಡಾ. ಉಮಾಪತಿ ಮಾತನಾಡಿದರು.

ಸಮಾಜದ ಮಲೇಬೆನ್ನೂರು ಘಟಕದ ಅಧ್ಯಕ್ಷ ಕೆ.ಪಿ. ನವೀನ್, ಗೌರವಾಧ್ಯಕ್ಷ ಬಸವರಾಜಪ್ಪ, ವೀರಭದ್ರಪ್ಪ, ಅಜ್ಜಪ್ಪ, ಹರಿಹರದ ಹಾಲೇಶ್, ಕುಂಬಳೂರಿನ ಭೀಮಪ್ಪ, ಕಾರ್ಯದರ್ಶಿ ಕೆ.ಬಿ. ಮಂಜುನಾಥ್, ಉಪಾಧ್ಯಕ್ಷ ಅಮರೇಶ್, ಸವಿತಾ ಸಮಾಜದ ಅಧ್ಯಕ್ಷ ಶ್ರೀನಿವಾಸ್ ಸೇರಿದಂತೆ ಮಲೇಬೆನ್ನೂರು ಹಾಗೂ ಸುತ್ತಮುತ್ತಲಿನ ಹಳ್ಳಿಗಳ ಹಡಪದ ಅಪ್ಪಣ್ಣ ಸಮಾಜದವರು ಭಾಗವಹಿಸಿದ್ದರು.


CHETANA VIDYA SAMSTE (R.)

**IMPERIAL PUBLIC SCHOOL**

Near DC Office, Davangere - 577 005.

**We are Hiring Teachers**

**WALK IN INTERVIEW**

| Qualification | Subject | Posts |
|---|---|---|
| B.A./M.A. B.Ed. | English | 2 |
| B.A./M.A. B.Ed. | Hindi | 2 |
| B.A./M.A. B.Ed. | Social Science | 2 |
| BP.Ed. | Physical Education | 2 |
| Any Degree | Manager | 1 |



**ಬೇಕಾಗಿದ್ದಾರೆ**

**ಶ್ರೀ ಮರುಳಸಿದ್ದೇಶ್ವರ ರೈಸ್‌ಮಿಲ್ ಬಾಡ**

ರೈಸ್‌ಮಿಲ್‌ನಲ್ಲಿ ಅಕೌಂಟೆಂಟ್ ಕೆಲಸ ಮಾಡಲು ಬಿ.ಕಾಂ. ಪದವೀಧರರು ಬೇಕಾಗಿದ್ದಾರೆ. ಸಂಪೂರ್ಣ ಕಂಪ್ಯೂಟರ್ ಜ್ಞಾನವಿರುವ ಮತ್ತು Tally ಅನುಭವವಿರುವವರಿಗೆ ಮೊದಲ ಆದ್ಯತೆ.

**ಊಟ, ವಸತಿ ಉಚಿತವಿರುತ್ತದೆ.**

**ಫೋ. : 95919 72869, 99722 22663**



**ಧರ್ಮಪ್ರವರ್ತ ರಾಜನಹಳ್ಳಿ ಹನುಮಂತಪ್ಪನವರ ಧರ್ಮಶಾಲಾ ಅಸೋಸಿಯೇಷನ್**

**ಪೂನಾ-ಬೆಂಗಳೂರು ರಸ್ತೆ, ದಾವಣಗೆರೆ 577 002.**

ಹದಡಿ ರಸ್ತೆಯ ನಮ್ಮ ಧರ್ಮಶಾಲೆಯ ಆವರಣದಲ್ಲಿ ಹೊಸದಾಗಿ ನಿರ್ಮಿಸಿರುವ ಮಳಿಗೆಗಳಲ್ಲಿ ಈ ಕೆಳಗಿನ 3 (ಮೂರು) ಮಳಿಗೆಗಳು ಬಾಡಿಗೆಗೆ ದೊರೆಯುತ್ತವೆ.

✻ ಮಳಿಗೆ ನಂ. 9 - 176.34 ಚದರ ಅಡಿ

✻ ಮಳಿಗೆ ನಂ. 10 - 178.00 ಚ. ಅಡಿ ✻ ಮಳಿಗೆ ನಂ. 15 - 206.63 ಚ.ಅಡಿ

ಆಸಕ್ತರು ಧರ್ಮಶಾಲೆಯ "ಹನುಮಂತಪ್ಪನವರ ಕಟ್ಟಡ" ದಲ್ಲಿರುವ ಆಡಳಿತ ಕಛೇರಿಯನ್ನು ಸಂಪರ್ಕಿಸಿ. ರೂ. 100/- ಶುಲ್ಕ ಸಲ್ಲಿಸಿ, ಟೆಂಡರ್ ಫಾರ್ಮ್ ಪಡೆದು ಭರ್ತಿ ಮಾಡಿದ ಫಾರ್ಮ್‌ಗಳನ್ನು ಕಛೇರಿಗೆ ತಲುಪಿಸಬೇಕು.

**(ದೂರವಾಣಿ : 94498 28834)**



## ಮತ್ತೆ ಮತ್ತೆ ಕಾಮಗಾರಿ: ಹೈರಾಣಾದ ಪ್ರಯಾಣಿಕರು

ದಾವಣಗೆರೆ ನಿಟುವಳ್ಳಿಯ ದುರ್ಗಾಂಬಿಕಾ ದೇವಸ್ಥಾನದ ಕಡೆಯಿಂದ ರಾಷ್ಟ್ರೋತ್ಥಾನ ಶಾಲೆ ಕಡೆ ಹೋಗುವ ಮಾರ್ಗವಿದು. ಇಲ್ಲಿನ ಪೈಪ್ ಲೈನ್ ಕಾಮಗಾರಿಯಿಂದ ಜನ ಬೇಸತ್ತಿದ್ದಾರೆ. ಇತ್ತೀಚೆಗಷ್ಟೇ ರಸ್ತೆ ಅಗೆಯಲೆಂದು ರಸ್ತೆ ಸಂಪರ್ಕ ಬಂದ್ ಮಾಡಲಾಗಿತ್ತು. ಈ ಮಾರ್ಗವಾಗಿ ತೆರಳುವ ವಾಹನಗಳು ಸುತ್ತಿಕೊಂಡು ಬೇರೆ ಮಾರ್ಗದಿಂದ ಹೋಗಬೇಕಾಗಿತ್ತು. ಇನ್ನೇನು ರಸ್ತೆ ಸಂಚಾರಕ್ಕೆ ಮುಕ್ತ ಎನ್ನುವಷ್ಟರಲ್ಲಿ ಮತ್ತೆ ಪೈಪ್ ಲೈನ್ ಕಾಮಗಾರಿ ಆರಂಭವಾಗಿದ್ದು, ಪ್ರಯಾಣಿಕರಿಕೆ ತಲೆ ನೋವಾಗಿ ಪರಿಣಮಿಸಿದೆ. ಆದಷ್ಟು ಶೀಘ್ರ ಕಾಮಗಾರಿ ಮುಗಿಸಿ ಓಡಾಡಲು ಅನುವು ಮಾಡಿಕೊಡಲಿ ಎಂಬುದು ಇಲ್ಲಿನ ನಾಗರಿಕರ ಆಗ್ರಹ.

## ಸಿರಿಗೆರೆಯಲ್ಲಿ ನಾಳೆ 'ಮರಣವೇ ಮಹಾನವಮಿ' ನಾಟಕ ಪ್ರದರ್ಶನ



ಸಿರಿಗೆರೆ, ಜು. 12- ತರಳಬಾಳು ಜಗದ್ಗುರು ಬೃಹನ್ಮಠದ ತರಳಬಾಳು ಕಲಾಸಂಘ ಮತ್ತು ಕನ್ನಡ, ಸಂಸ್ಕೃತಿ ಇಲಾಖೆ (ಬೆಂಗಳೂರು) ಇವರ ಸಹಭಾಗಿತ್ವದಲ್ಲಿ ನಾಡಿದ್ದು ದಿನಾಂಕ 14 ಮತ್ತು 15ರಂದು ಇಲ್ಲಿನ ಗುರುಶಾಂತೇಶ್ವರ ದಾಸೋಹ ಮಂಟಪದಲ್ಲಿ ಮರಣವೇ ಮಹಾನವಮಿ ನಾಟಕ ಪ್ರದರ್ಶನವು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಸಾನ್ನಿಧ್ಯದಲ್ಲಿ ಜರುಗಲಿದೆ.

ಸಾಹಿತಿ, ಪ್ರಸಿದ್ಧ ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್, ಭಾರತೀಯ ರಂಗಭೂಮಿ ಕಲಾವಿದ, ನಟ-ನಿರ್ದೇಶಕ ಪ್ರಕಾಶ್ ಬೆಳವಾಡಿ ಹಾಗೂ ಹಿರಿಯ ರಂಗ ನಿರ್ದೇಶಕ ಮಾಲತೇಶ್ ಬಡಿಗೇರ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಪ್ರಧಾನ ಕಾರ್ಯದರ್ಶಿ ಎಸ್.ಬಿ. ರಂಗನಾಥ್, ಆಡಳಿತಾಧಿಕಾರಿ ಹೆಚ್.ವಿ.ವಾಮದೇವಪ್ಪ ಹೆಸರಾಂತ ಗಾಯಕ ತೋಟಪ್ಪ ಉತ್ತಂಗಿ ಉಪಸ್ಥಿತರಿರುವರು.

ಶಾಲಾ-ಕಾಲೇಜು ವಿದ್ಯಾರ್ಥಿಗಳಿಂದ ಮಲ್ಲಕಂಬ, ನೀಲಾಂಬಿಕಾ ಪ್ರೌಢಶಾಲೆ, ಬಿ.ಎಲ್.ಆರ್ ಪ್ರೌಢಶಾಲೆ, ನರ್ಸರಿ, ಪ್ರೈಮರಿ ಪ್ರೌಢಶಾಲೆ, ತರಳಬಾಳು ಸಿ.ಬಿ.ಎಸ್.ಇ ಶಾಲೆಯ ಮಕ್ಕಳಿಂದ ವಚನ ಗಾಯನ ಹಾಗೂ ಮಲ್ಲಕಂಬ ಜರುಗುವುದು ಎಂದು ತರಳಬಾಳು ಕಲಾ ಸಂಘದ ಅಧ್ಯಕ್ಷ ರಾಜಶೇಖರಯ್ಯ ತಿಳಿಸಿದ್ದಾರೆ.

## ವಿದ್ಯುತ್ ದೀಪ, ಹಂಪ್ಸ್ ಅಳವಡಿಸುವಂತೆ ಒತ್ತಾಯಿಸಿ ಆಪ್‌ನಿಂದ ಧರಣಿ ಸತ್ಯಾಗ್ರಹ



ದಾವಣಗೆರೆ, ಜು. 12- ನಗರದ ಎಸ್.ಪಿ.ಕಚೇರಿಯಿಂದ ಅಕ್ತರ್ ರಜ್ಹಾ ಸರ್ಕಲ್‌ವರೆಗೂ ವಿದ್ಯುತ್ ದೀಪ ಹಾಗೂ ಹಂಪ್ಸ್ ಅಳವಡಿಸದಿರುವುದನ್ನು ವಿರೋಧಿಸಿ ಆಮ್ ಆದ್ಮಿ ಪಾರ್ಟಿ ಕಾರ್ಯಕರ್ತರು ಅಕ್ತರ್ ರಜ್ಹಾ ಸರ್ಕಲ್ ಬಳಿ ಧರಣಿ ಸತ್ಯಾಗ್ರಹ ನಡೆಸಿದರು.

ಇದೇ ವೇಳೆ ಪಕ್ಷದ ಮುಖಂಡ ಆದಿಲ್ ಖಾನ್ ಮಾತನಾಡಿ, ಎಸ್‌ಪಿ ಕಚೇರಿಯಿಂದ ಅಕ್ತರ್ ರಜ್ಹಾ ಸರ್ಕಲ್ ವರೆಗೆ ವಿದ್ಯುತ್ ಕಂಬಗಳನ್ನು ನೆಟ್ಟಿದ್ದಾರೆಯೇ ಹೊರತು, ವಿದ್ಯುತ್ ದೀಪಗಳನ್ನು ಅಳವಡಿಸದಿರುವುದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿದೆ ಎಂದರು.

ಆಮ್ ಆದ್ಮಿ ಪಕ್ಷದ ವತಿಯಿಂದ ಮಹಾನಗರ ಪಾಲಿಕೆ ಆಯುಕ್ತರು ಹಾಗೂ ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕರಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಪಾಲಿಕೆ ಕಾರ್ಯನಿರ್ವಾಹಕ ಅಭಿಯಂತರರಿಗೆ ಮನವಿ ಮಾಡಿದಾಗ ಜೂ. 20ರೊಳಗಾಗಿ ವಿದ್ಯುತ್ ದೀಪ ಅಳವಡಿಸುವ ಭರವಸೆ ನೀಡಿದ್ದರು. ಆದರೆ ಇದುವರೆಗೂ ಅಳವಡಿಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಧರಣಿ ಸತ್ಯಾಗ್ರಹದಲ್ಲಿ ಆಮ್ ಆದ್ಮಿ ಪಕ್ಷದ ಕೆ. ರವೀಂದ್ರ, ಅನ್ಸರ್, ಬಾಷಾ, ರಫೀಕ್ , ಶರೀಫ್ ಅಹಮದ್ ಮತ್ತಿತರರು ಭಾಗವಹಿಸಿದ್ದರು.

## ಕೆ.ಎ.ಎಸ್. ಉಚಿತ ತರಬೇತಿ

ದಾವಣಗೆರೆ, ಜು.12- ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಹಾಗೂ ಜಿಎಂ ತಾಂತ್ರಿಕ ಮಹಾವಿದ್ಯಾಲಯ ಇವರ ಸಂಯುಕ್ತಾಶ್ರಯದಲ್ಲಿ ಕರ್ನಾಟಕ ಲೋಕಸೇವಾ ಆಯೋಗ ನಡೆಸುವ ಕೆ.ಎ.ಎಸ್. ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆ ಬರೆಯಲಿರುವ ಅಭ್ಯರ್ಥಿಗಳಿಗೆ ಇದೇ ದಿನಾಂಕ 17 ರಿಂದ 26 ರವರೆಗೆ ಉಚಿತ ಪರೀಕ್ಷಾ ಪೂರ್ವ ತರಬೇತಿ ನಡೆಯಲಿದೆ.

ರೂಂ. ನಂ. 104, 3ನೇ ಮಹಡಿ, ಇಂಜಿನಿಯರಿಂಗ್ ಬ್ಲಾಕ್, ಜಿಎಂ ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಡೆಯುವ ತರಬೇತಿಗೆ ಹಾಜರಾಗಲಿಚ್ಛಿಸುವ ಅಭ್ಯರ್ಥಿಗಳು ಇದೇ ದಿನಾಂಕ 17ರ ಬೆಳಿಗ್ಗೆ 10 ಗಂಟೆಗೆ ತರಬೇತಿಗೆ ಹಾಜರಾಗ ಬೇಕು (ವಿವರಕ್ಕೆ ಸಂಪರ್ಕಿಸಿ : 7406323294 ಅಥವಾ 861816 6204) ಎಂದು ಉದ್ಯೋಗಾಧಿಕಾರಿ ಡಿ.ರವೀಂದ್ರ ತಿಳಿಸಿದ್ದಾರೆ.


## ವಿಶ್ವ ಜನಸಂಖ್ಯಾ ದಿನ : ಮೆಹೆಂದಳೆ ಕೊಲ್ಯಾಜ್ ಚಿತ್ರ ಬಿಡುಗಡೆ



ಹರಿಹರ, ಜು. 12 - ವಿಶ್ವ ಜನಸಂಖ್ಯಾ ದಿನದ ಅಂಗವಾಗಿ ಗುರುದ್ರೋಣಾಚಾರ್ಯ ಸಮ್ಮಾನ್ ಪ್ರಶಸ್ತಿ ಪುರಸ್ಕೃತ ನಿವೃತ್ತ ಚಿತ್ರಕಲಾ ಶಿಕ್ಷಕ ಡಾ. ಜಿ.ಜೆ.ಮೆಹೆಂದಳೆ ಕೊಲ್ಯಾಜ್ ಚಿತ್ರ ರಚಿಸಿದರು. ಕೋಲ್ಯಾಜ್ ಚಿತ್ರವನ್ನು ಅಮೃತ ವರ್ಷಿಣಿ ವಿದ್ಯಾಲಯದ ಚೇರಮನ್ ಪಿ.ಕೆ.ಪ್ರಕಾಶರಾವ್ ಅವರು ವಿದ್ಯಾಲಯದ ಆವರಣದಲ್ಲಿ ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಅಮೃತ ವರ್ಷಿಣಿ ವಿದ್ಯಾಲಯದ ಪ್ರಾಂಶುಪಾಲರಾದ ಚೇತನಾ ರಾವ್, ಕಾರ್ಯದರ್ಶಿ ವಿನಯ ರಾವ್, ಶಿಕ್ಷಕಿ ವೇದಾವತಿ ಸಿ.ಹೆಚ್., ಅಕ್ಷತಾ ಬಿ.ಎಂ. ಮತ್ತಿತರರು ಉಪಸ್ಥಿತರಿದ್ದರು.

## ಬಸಾಪುರದಲ್ಲಿ ಇಂದು ನಿಜಸುಖಿ ಹಡಪದ ಅಪ್ಪಣ್ಣ ಜಯಂತಿ




ಶರಣ ಸಾಹಿತ್ಯ ಪರಿಷತ್ ದಾವಣಗೆರೆ ನಗರ ಘಟಕ ಹಾಗೂ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಇವರ ಸಹಯೋಗಲ್ಲಿ ಇಂದು ಮಧ್ಯಾಹ್ನ 3 ಗಂಟೆಗೆ ಬಸಾಪುರದ ಆರಾಧ್ಯ ಬಡಾವಣೆಯ ಶ್ರೀ ರೇವಣಸಿದ್ಧೇಶ್ವರ ಪ್ರೌಢಶಾಲೆಯ ಶ್ರೀಮತಿ ನಾಗಮ್ಮ ಸಭಾಂಗಣದಲ್ಲಿ ದತ್ತಿ ಕಾರ್ಯಕ್ರಮ ಮತ್ತು ನಿಜಸುಖಿ ಹಡಪದ ಅಪ್ಪಣ್ಣ ಜಯಂತಿ ನಡೆಯಲಿದೆ.

ಮೆಳ್ಳೇಕಟ್ಟೆ ಶ್ರೀ ರೇವಣಸಿದ್ಧೇಶ್ವರ ವಿದ್ಯಾಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಎಂ.ಎಸ್. ನಾಗರಾಜಪ್ಪ ಕಾರ್ಯಕ್ರಮವನ್ನು ಉದ್ಘಾಟಿಸುವರು. ಶರಣ ಸಾಹಿತ್ಯ ಪರಿಷತ್ ದಾವಣಗೆರೆ ನಗರ ಘಟಕದ ಅಧ್ಯಕ್ಷ ಪರಮೇಶ್ವರಪ್ಪ ಎಂ. ಸಿರಿಗೆರೆ ಅಧ್ಯಕ್ಷತೆ ವಹಿಸಲಿದ್ದಾರೆ.

ಆಹಾರ ಇಲಾಖೆ ನಿವೃತ್ತ ಸಹಾಯಕ ನಿರ್ದೇಶಕ ಬಿ.ಟಿ. ಪ್ರಕಾಶ್ 'ನಿಜಸುಖಿ ಹಡಪದ ಅಪ್ಪಣ್ಣ ಮತ್ತು ವಚನ ಸಾಹಿತ್ಯ' ಕುರಿತು ಮಾತನಾಡಲಿದ್ದಾರೆ. ಇದೇ ವೇಳೆ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್ ಕುಮಾರ್ ಅವರನ್ನು ಸನ್ಮಾನಿಸಲಾಗುವುದು.

ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತ ಬಾ.ಮ. ಬಸವರಾಜಯ್ಯ, ಶ್ರೀ ಹಡಪದ ಅಪ್ಪಣ್ಣ ಸಮಾಜದ ಜಿಲ್ಲಾಧ್ಯಕ್ಷ ಶಶಿಧರ ಬಸಾಪುರ, ತಾಲ್ಲೂಕು ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಗಾಯತ್ರಿ ವಸ್ತ್ರದ್, ರೇವಣಸಿದ್ಧೇಶ್ವರ ಪ್ರೌಢಶಾಲೆಯ ಮುಖ್ಯೋಪಾಧ್ಯಾಯಿನಿ ಕೆ.ಜಿ. ಸೌಭಾಗ್ಯಮ್ಮ ಭಾಗವಹಿಸಲಿದ್ದಾರೆ.

## ನಿಟುವಳ್ಳಿಯಲ್ಲಿ ನಾಳೆ ಅಜ್ಜಿ ಹಬ್ಬ



ದಾವಣಗೆರೆ, ಜು. 12 - ಆಷಾಢ ಮಾಸದ ಕಡೆ ಶುಕ್ರವಾರ (ದಿನಾಂಕ 14) ನಿಟುವಳ್ಳಿಯ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನದ ಟ್ರಸ್ಟ್ ಹಾಗೂ ಗ್ರಾಮದ ವತಿಯಿಂದ ಅಜ್ಜಿ ಹಬ್ಬವನ್ನು ಏರ್ಪಡಿಸಲಾಗಿದೆ. ಮನೆಯಲ್ಲಿ ಪೂಜೆ ಮಾಡಿದ (ಅಜ್ಜಿ ಅಮ್ಮ) ಅಜ್ಜಿ ಕುಡಿಕೆಯನ್ನು ಶುಕ್ರವಾರ ರಾತ್ರಿ 9 ಗಂಟೆಯೊಳಗೆ ಕಳುಹಿಸಬೇಕೆಂದು ಟ್ರಸ್ಟಿನ ಅಧ್ಯಕ್ಷ ಹೆಚ್.ಬಿ. ಮಂಜುನಾಥ್ ತಿಳಿಸಿದ್ದಾರೆ.

## ಕುರಿ ಸಾಕಾಣಿಕೆ ತರಬೇತಿ ಶಿಬಿರ

ದಾವಣಗೆರೆ, ಜು.12- ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ವತಿಯಿಂದ ನಗರದ ಪಶು ಆಸ್ಪತ್ರೆ ಆವರಣದಲ್ಲಿರುವ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ನಾಡಿದ್ದು ದಿನಾಂಕ 14 ಮತ್ತು 15 ರಂದು ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : 08192-233787.

## ನಗರದಲ್ಲಿ ವಿದ್ಯುತ್ ವ್ಯತ್ಯಯ

ದಾವಣಗೆರೆಯ ಕೊಂಡಜ್ಜಿ ರಸ್ತೆ, ಎಸ್‌ಜೆಎಂ ನಗರ, ಸೇವಾದಳ ಕಾಲೋನಿ, ಹೊಸ ಕ್ಯಾಂಪ್, ಎಸ್‌ಎಂಕೆ ನಗರ 2ನೇ ಹಂತ, ವೀರಾಂಜನೇಯ ಪೆಟ್ರೋಲ್ ಬಂಕ್ ಹತ್ತಿರ, ಬಿ.ಜೆ.ಎಂ ಸ್ಕೂಲ್, ಆರ್‌ಟಿಓ ಆಫೀಸ್, ಬೂದಿಹಾಳ್ ರಸ್ತೆ, ಬಾಬು ಜಗಜೀವನ್‌ರಾಂ ನಗರ, ಗೌರಸಂದ್ರ ಮಾರಮ್ಮ ದೇವಸ್ಥಾನದ ಸುತ್ತಮುತ್ತ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಅಂತರರಾಷ್ಟ್ರೀಯ ಯೋಗ ಚಾಂಪಿಯನ್ ಶಿಪ್ : ಮಹೀನ್ ಹಂಪನೂರು ಆಯ್ಕೆ



ದಾವಣಗೆರೆ, ಜು. 12 - ದುಬೈನಲ್ಲಿ ಬರುವ ಅಕ್ಟೋಬರ್‌ನಲ್ಲಿ 8 ಮತ್ತು 9ರಂದು ನಡೆಯುವ 9ನೇ ಅಂತರರಾಷ್ಟ್ರೀಯ ಯೋಗ ಸ್ಪರ್ಧೆಗೆ ದಾವಣಗೆರೆ ನಗರದ ಶಾಮನೂರು ಶಿವಶಂಕರಪ್ಪ ನ್ಯಾಷನಲ್ ಪಬ್ಲಿಕ್ ಶಾಲೆ ವಿದ್ಯಾರ್ಥಿ ಮಹೀನ್ ಹಂಪನೂರು ಆಯ್ಕೆಯಾಗಿದ್ದಾರೆ.

ಬೆಂಗಳೂರಿನ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಮೊನ್ನೆ ನಡೆದ ರಾಷ್ಟ್ರಮಟ್ಟದ ಯೋಗಾಸನ ಚಾಂಪಿಯನ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆಯುವ ಮೂಲಕ ಬಂಗಾರದ ಪದಕ ಪಡೆದು ಮಾಹೀನ್ ಹಂಪನೂರು ಅಂತರರಾಷ್ಟ್ರೀಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ನಗರದ ಶ್ರೀಮತಿ ಸುಮ, ಮಹಾದೇವ್ ಹಂಪನೂರು ಪುತ್ರನಾಗಿರುವ ಮಹೀನ್ ಹಂಪನೂರು ಎಸ್.ಎಸ್.ಯೋಗ ಫಿಟ್‌ನೆಸ್ ಅಂಡ್ ಯೋಗ ಇನ್‌ಸ್ಟಿಟ್ಯೂಟ್‌ನ ಅಂತರರಾಷ್ಟ್ರೀಯ ಕ್ರೀಡಾಪಟು ಹಾಗೂ ಅಂತರರಾಷ್ಟ್ರೀಯ ತರಬೇತುದಾರ ಡಿ. ಸಂತೋಷ್ ಅವರ ಬಳಿ ತರಬೇತಿ ಪಡೆದಿದ್ದಾರೆ. ಮಹೀನ್ ಸಾಧನೆಗೆ ಶಾಸಕ ಶಾಮನೂರು ಶಿವಶಂಕರಪ್ಪ, ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಶಾಲೆಯ ಛೇರ್ಮನ್ ಎಸ್.ಎಸ್.ಗಣೇಶ್, ಡೀನ್ ಮಂಜುನಾಥ್ ಶುಭ ಹಾರೈಸಿದ್ದಾರೆ.

## ನೇರ ಆಯ್ಕೆಗೆ ನಗರದಲ್ಲಿ ಇಂದು ಸಂದರ್ಶನ

ದಾವಣಗೆರೆ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, 'ಮಾದರಿ ವೃತ್ತಿ ಕೇಂದ್ರ' ಇವರ ವತಿಯಿಂದ ಇಂದು ಬೆಳಿಗ್ಗೆ 10 ಗಂಟೆಗೆ ನೇರ ಆಯ್ಕೆ ಸಂದರ್ಶನವನ್ನು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಕೊಠಡಿ ಸಂಖ್ಯೆ 51, ಜಿಲ್ಲಾಧಿಕಾರಿಗಳ ಕಚೇರಿ ದಾವಣಗೆರೆ ಇಲ್ಲಿ ಆಯೋಜಿಸಲಾಗಿದೆ ಎಂದು ಜಿಲ್ಲಾ ಉದ್ಯೋಗಾಧಿಕಾರಿ ರವೀಂದ್ರ ಡಿ. ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 08192-259446, 63615 50016.


॥ ಶ್ರೀ ಕಲ್ಲೇಶ್ವರ ಪ್ರಸನ್ನ ॥

ಪುಣ್ಯಸ್ಮರಣೆ



ಶ್ರೀ ಗೌಡ್ರು ಸಣ್ಣ ಗಂಗಪ್ಪನವರು ದಿ.: 04.12.1932
ಶ್ರೀಮತಿ ಗೌಡ್ರು ವೀರಮ್ಮನವರು ದಿ.: 13.07.1994
ಶ್ರೀ ಗೌಡ್ರು ರಾಜಶೇಖರಪ್ಪನವರು ದಿ.: 13.04.2017
ಶ್ರೀಮತಿ ಗೌಡ್ರು ಲಲಿತಮ್ಮನವರು ದಿ.: 14.06.2018

ಸದಾ ನಿಮ್ಮಗಳ ಸ್ಮರಣೆಯಲ್ಲಿರುವ...

ಮಕ್ಕಳು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಗೌಡ್ರು ವಂಶಸ್ಥರು ನಾಗನೂರು.

ಪ್ರಕಟಣೆ : ನಾಗನೂರು ಗೌಡ್ರು ಕಲ್ಲೇಶ್ ಬಿ.ಇ. ಸಿವಿಲ್

ಶಿವಮಂಗಳ ಕನ್‌ಸ್ಟ್ರಕ್ಷನ್ಸ್, ವಿಕಾಸ ವೇಂಚರ್ಸ್ ಮತ್ತು ಸಾನ್ವಿಕ ಅಸೋಸಿಯೆಟ್ಸ್, ದಾವಣಗೆರೆ.


## ಅಗ್ನಿವೀರ್ ಆಯ್ಕೆಗೆ ದೈಹಿಕ ಪರೀಕ್ಷೆ

ದಾವಣಗೆರೆ, ಜು.12- ಭಾರತೀಯ ಸೇನೆಯಲ್ಲಿನ ಅಗ್ನಿವೀರ್ ನೇಮಕಾತಿ ರ್‍ಯಾಲಿಯು ಉಡುಪಿಯಲ್ಲಿನ ಮಹಾತ್ಮ ಗಾಂಧಿ ಸ್ಟೇಡಿಯಂನಲ್ಲಿ ಜುಲೈ 17 ರಿಂದ 25 ರ ವರೆಗೆ ನಡೆಯಲಿದೆ. ಅಗ್ನಿವೀರ್ ನೇಮಕಾತಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದ ವರಿಗೆ ದೈಹಿಕ ಮತ್ತು ವೈದ್ಯಕೀಯ ಪರೀಕ್ಷೆಯನ್ನು ನಡೆಸಲಾಗುತ್ತದೆ.

ದಾವಣಗೆರೆ ಜಿಲ್ಲೆಯಿಂದ 91 ಜನರು ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ಇವರು ದೈಹಿಕ ಹಾಗೂ ವೈದ್ಯಕೀಯ ಪರೀಕ್ಷೆಗಾಗಿ ಅಗತ್ಯ ದಾಖಲೆಗಳೊಂದಿಗೆ ಹಾಜರಾಗಬೇಕು ಮತ್ತು ಮಾಹಿತಿಗೆ 0824-2951276 ದೂರವಾಣಿಗೆ ಸಂಪರ್ಕಿಸಬಹುದು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಜಿ.ಎಂ.ಐ.ಟಿ. ಕಾಲೇಜು, ದೇವರಾಜ ಅರಸ್ ಬಡಾವಣೆ, ಪೂಜಾ ಹೋಟೆಲ್, ಸಾಯಿ ಹೋಟೆಲ್, ಶಂಕರ ವಿಹಾರ್ ಬಡಾವಣೆ, ವಿನಾಯಕ ನಗರ, ಸಬ್‌ರಿಜಿಸ್ಟ್ರಾರ್ ಆಫೀಸ್, ಬಿಎಸ್ಸೆನ್ನೆಲ್ ಆಫೀಸ್, ಕೋರ್ಟ್, ಗಿರಿಯಪ್ಪ ಲೇಔಟ್, ಪಿ.ಬಿ. ರಸ್ತೆ, ಸಂಗೊಳ್ಳಿ ರಾಯಣ್ಣ ಸರ್ಕಲ್, ನಲ್ಲೂರು ಶಾಂತಾರಾಮ್ ರೋಡ್, ವಿನೋಬನಗರ 1 ಮತ್ತು 2ನೇ ಮೇನ್ ಹಾಗು ಸುತ್ತಮುತ್ತಲಿನಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಉದ್ಯಾನವನ ಜಾಗಕ್ಕೆ ಅಕ್ರಮವಾಗಿ ಆಸ್ತಿ ನಂಬರ್ ನೀಡಿದ ಆರೋಪ : ಅಮಾನತ್ತು

ದಾವಣಗೆರೆ, ಜು.12- ಮಹಾನಗರ ಪಾಲಿಕೆ ಕರ ವಸೂಲಿಗಾರರಾದ ಶ್ರೀಮತಿ ಸುನೀತಾ ಸಿ. ಅವರನ್ನು ಅಮಾನತ್ತುಗೊಳಿಸಿ ಪಾಲಿಕೆ ಆಯುಕ್ತರು ಆದೇಶಿಸಿದ್ದಾರೆ. ಉದ್ಯಾನವನಕ್ಕೆ ಮೀಸಲಿಟ್ಟ ಜಾಗವನ್ನು ಅಕ್ರಮವಾಗಿ ಉಪ ಆಸ್ತಿ ನಂಬರ್ ನೀಡಿ ಖಾತಾ ಉತಾರ ನೀಡುವ ಮೂಲಕ ಕರ್ತವ್ಯ ಲೋಪ ಎಸಗಿರುವ ಕಾರಣ ಸುನೀತಾ ಅವರನ್ನು ಅಮಾನತ್ತು ಮಾಡಲಾಗಿದೆ ಎಂದು ಆಯುಕ್ತರಾದ ರೇಣುಕಾ ಅವರು ಆದೇಶದಲ್ಲಿ ತಿಳಿಸಿದ್ದಾರೆ.


॥ ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ॥

ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಜಿಲ್ಲೆ, ಮತ್ತು ತಾಲ್ಲೂಕು, ಆವರಗೆರೆ ಗ್ರಾಮದ ವಾಸಿ
ದಿ. ಶರಣ ಕಿತ್ತೂರು ಶರಣಪ್ಪನವರ ಮಕ್ಕಳಾದ ಶ್ರೀ ಕಿತ್ತೂರು ರೇವಣ್ಣ ಮತ್ತು ಸಹೋದರರು ಮಾಡುವ ವಿಜ್ಞಾಪನೆಗಳು.
ದಿನಾಂಕ 01.07.2023ನೇ ಶನಿವಾರ ಬೆಳಿಗ್ಗೆ 6.45 ಗಂಟೆಗೆ
ನನ್ನ ಪೂಜ್ಯ ತಾಯಿಯವರಾದ

ಶರಣೆ ಕಿತ್ತೂರು ಶರಣಮ್ಮನವರು

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ 13.07.2023ನೇ ಗುರುವಾರ ಬೆಳಿಗ್ಗೆ 10.30 ಕ್ಕೆ ತರಳಬಾಳು ಸಭಾ ಭವನ (ಎಸ್.ಎಸ್.ಮಿನಿ ಚೌಲ್ರಿ), ಹದಡಿ ರಸ್ತೆ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತ ಕುಟುಂಬ ವರ್ಗ :
ಲಿಂಗೈಕ್ಯರ ಮಕ್ಕಳಾದ : ಶ್ರೀ ಕೆ.ಎಸ್. ರೇವಣ್ಣ, ಶ್ರೀಮತಿ ಹಾಲಮ್ಮ ಮತ್ತು ಮಕ್ಕಳು
ಶ್ರೀ ಕೆ.ಎಸ್. ಕರಿಬಸಪ್ಪ, ಶ್ರೀಮತಿ ಸುಧಾ ಮತ್ತು ಮಕ್ಕಳು
ಶ್ರೀ ಕೆ.ಎಸ್ ನಾಗರಾಜ, ಶ್ರೀಮತಿ ತಾರಾಮಣಿ ಮತ್ತು ಮಕ್ಕಳು
ದಿ. ಶ್ರೀಮತಿ ಸುವರ್ಣಮ್ಮ, ದಿ. ಶ್ರೀ ನಾಗರಾಜಪ್ಪ ಮತ್ತು ಮಕ್ಕಳು
ಶ್ರೀಮತಿ ಅಂಬುಜ, ಶ್ರೀ ಎ.ಎಸ್. ಕಲ್ಲೇಶಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು,
ಅಳಿಯಂದಿರು, ಕಿತ್ತೂರು ವಂಶಸ್ಥರು, ಗ್ರಾಮಸ್ಥರು ಆವರಗೆರೆ ಹಾಗೂ ಬಂಧು ಮಿತ್ರರು.

ಮೊ : 94488 73210, 96865 82455, 91132 65601

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.



# ಶ್ರೀ ಅಂಬಾಭವಾನಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ನಿ.,

ವಿಜಯಲಕ್ಷ್ಮಿ ರೋಡ್, ದಾವಣಗೆರೆ-577 001.

## ಚುನಾವಣಾ ಫಲಿತಾಂಶ ಪ್ರಕಟಣೆ

ಶ್ರೀ ಅಂಬಾಭವಾನಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ ಇದರ ಆಡಳಿತ ಮಂಡಲಿಗೆ ಸಹಕಾರ ಸಂಘಗಳ ನಿಬಂಧಕರು ಬೆಂಗಳೂರು, ಪ್ರಾಂತ ಬೆಂಗಳೂರು. ಇವರ ಆದೇಶ ಸಂಖ್ಯೆ ನಂ: ಜೆಆರ್‌ಬಿ/ಆಮಂಚು/ರಿಆನೇ/90/2022-23 ದಿ:10-03-2023 ಮೇರೆಗೆ ದಿನಾಂಕ: 16/07/2023ರ ಆದೇಶದಂತೆ ಬ್ಯಾಂಕಿನ ಚುನಾವಣೆಯನ್ನು ದಿನಾಂಕ: 16-07-2023 ರಂದು ನಿಗದಿಪಡಿಸಿದ್ದು, ಸದರಿ ಚನುನಾವಣೆಗೆ ಸಂಬಂಧಪಟ್ಟಂತೆ ಸಹಕಾರ ಸಂಘಗಳ ನಿಯಮಗಳ 1960ರ ನಿಯಮ 14ಜಿ ನಲ್ಲಿನ ಉಪಬಂಧ ಅನುಸಾರ ಸಂಘದ ರಿಟರ್ನಿಂಗ್ ಅಧಿಕಾರಿಯಾದ ಶ್ರೀ ಸತೀಶ್ ನಾಯ್ಕ ಎಲ್. ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, ದಾವಣಗೆರೆ ಉಪವಿಭಾಗ, ದಾವಣಗೆರೆ ಆದ ನಾನು ಈ ಕೆಳಕಂಡ ಅಭ್ಯರ್ಥಿಗಳ ಹೆಸರಿನ ಎದುರಿನಲ್ಲಿ ತೋರಿಸಿರುವ ಮತ ಕ್ಷೇತ್ರದಿಂದ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ ಎಂದು ಘೋಷಿಸಿರುತ್ತೇನೆ.

ಒಟ್ಟು ಸ್ಥಾನಗಳ ಸಂಖ್ಯೆ-15, ಈ ಪೈಕಿ ಸಾಮಾನ್ಯ-09, ಪರಿಶಿಷ್ಟ ಜಾತಿ-01, ಪರಿಶಿಷ್ಟ ಪಂಗಡ-01, ಮಹಿಳೆ-02 ಹಾಗೂ ಹಿಂದುಳಿದ ವರ್ಗ ಪ್ರವರ್ಗ ಎ/ಬಿ - 1/1



ಶ್ರೀ ಸತ್ಯನಾರಾಯಣ ಆರ್.ಜಿ. – ಸಾಮಾನ್ಯ ಸ್ಥಾನ
ಶ್ರೀ ಬಾಬುರಾವ್ ಸಾಳಂಕಿ ಎಸ್. – ಸಾಮಾನ್ಯ ಸ್ಥಾನ
ಶ್ರೀ ಗೋಪಾಲ್‌ರಾವ್ ಮಾನೆ – ಸಾಮಾನ್ಯ ಸ್ಥಾನ
ಶ್ರೀ ಗಿರಿಧರ್ ಎಮ್.ಡಿ. – ಸಾಮಾನ್ಯ ಸ್ಥಾನ
ಶ್ರೀ ಆನಂದ್ ಡಿ. ಸಫಾರೆ – ಸಾಮಾನ್ಯ ಸ್ಥಾನ
ಶ್ರೀ ಗಣೇಶ ಕೆ. – ಸಾಮಾನ್ಯ ಸ್ಥಾನ
ಶ್ರೀ ಮಧುಕರ್ ಎಸ್.ಕೆ. – ಸಾಮಾನ್ಯ ಸ್ಥಾನ



ಶ್ರೀ ವಿಠಲ್ ಆರ್. – ಸಾಮಾನ್ಯ ಸ್ಥಾನ
ಶ್ರೀ ಮನೋಹರ್ ವಿ. – ಸಾಮಾನ್ಯ ಸ್ಥಾನ
ಡಾ॥ ರಜನಿ ಎಸ್. – ಪರಿಶಿಷ್ಟ ಜಾತಿ ಸ್ಥಾನ
ಶ್ರೀ ಬಾಬು – ಪರಿಶಿಷ್ಟ ಪಂಗಡ ಸ್ಥಾನ
ಶ್ರೀಮತಿ ಅನಿತಾಬಾಯಿ – ಮಹಿಳಾ ಮೀಸಲು ಸ್ಥಾನ
ಶ್ರೀಮತಿ ರೇಣುಕಬಾಯಿ – ಮಹಿಳಾ ಮೀಸಲು ಸ್ಥಾನ
ಶ್ರೀ ರಾಜು ಎಲ್. – ಹಿಂದುಳಿದ ಪ್ರವರ್ಗ 'ಎ'
ಶ್ರೀ ಯಲ್ಲಪ್ಪ ಜಿ. – ಹಿಂದುಳಿದ ಪ್ರವರ್ಗ 'ಎ'

ಸೂಚನೆ :
1) ಬ್ಯಾಂಕಿನ ಚುನಾವಣೆ ದಿನಾಂಕ: 16-07-2023ನೇ ಭಾನುವಾರದಂದು ಶ್ರೀ ಕೃಷ್ಣಾಭವಾನಿ ಕಲ್ಯಾಣ ಮಂಟಪ, ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್, ದಾವಣಗೆರೆ, ಚುನಾವಣೆ ವೇಳಾಪಟ್ಟಿಯಲ್ಲಿ ಇದೆ ಎಂದು ತಿಳಿಸಲಾಗಿತ್ತು. ಅವಿರೋಧ ಆಯ್ಕೆಯಾದ ಕಾರಣ ಚುನಾವಣೆ ಇರುವುದಿಲ್ಲ ಎಂದು ಈ ಮೂಲಕ ಸರ್ವ ಸದಸ್ಯರಿಗೆ ತಿಳಿಸಲಾಗಿದೆ.
2) ಬ್ಯಾಂಕಿನ 2022-23 ನೇ ಸಾಲಿನ 28ನೇ ವಾರ್ಷಿಕ ಮಹಾಸಭೆ ದಿನಾಂಕ 26-08-2023 ನೇ ಶನಿವಾರ ಬೆಳಿಗ್ಗೆ 11.30 ಘಂಟೆಗೆ ಶ್ರೀ ಕೃಷ್ಣಾ ಭವಾನಿ ಕಲ್ಯಾಣ ಮಂಟಪ, ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್, ದಾವಣಗೆರೆ ಇಲ್ಲಿ ನಡೆಸಲು ಆಡಳಿತ ಮಂಡಳಿಯು ತೀರ್ಮಾನಿಸಿರುತ್ತದೆ. ಅರ್ಹ ಸದಸ್ಯರಿಗೆ ವಾರ್ಷಿಕ ಮಹಾಸಭೆಯ ನೋಟಿಸ್ ಅಂಚೆ ಮೂಲಕ ಹಾಗೂ ಮುದ್ದಾಂ ಆಗಿ ಕಳುಹಿಸಲಾಗುವುದು. ಮಾನ್ಯ ಸದಸ್ಯರು ತಪ್ಪದೇ ಬ್ಯಾಂಕಿನ ಷೇರಿನ ಗುರುತಿನ ಚೀಟಿಯೊಂದಿಗೆ ಹಾಜರಾಗಬೇಕಾಗಿ ವಿನಂತಿ, ಮಾನ್ಯ ಸದಸ್ಯರು ಬ್ಯಾಂಕಿನ ಷೇರಿನ ಗುರುತಿನ ಚೀಟಿಯನ್ನು ಪಡೆಯಲು ಬ್ಯಾಂಕಿನ ಕಛೇರಿ ವೇಳೆಯಲ್ಲಿ ಫೋಟೊ ತೆಗೆದುಕೊಂಡು ಬಂದು ಪಡೆಯಬೇಕಾಗಿ ಮತ್ತು ವಿಳಾಸ ಬದಲಾದಲ್ಲಿ ವಿಳಾಸದ ವಿವರಗಳನ್ನು ಜೆರಾಕ್ಸ್ ಪ್ರತಿ ನೀಡಿ ಪಡೆಯಬೇಕಾಗಿ ವಿನಂತಿ.

ಸಹಿ/-
(ಸತೀಶ್ ನಾಯ್ಕ ಎಲ್.)
ರಿಟರ್ನಿಂಗ್ ಅಧಿಕಾರಿ,
ಶ್ರೀ ಅಂಬಾಭವಾನಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ
ಹಾಗೂ ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು,
ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ,
ದಾವಣಗೆರೆ ಉಪವಿಭಾಗ, ದಾವಣಗೆರೆ
ಸ್ಥಳ : ದಾವಣಗೆರೆ, ದಿನಾಂಕ : 10.07.2023